


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 7 ಬುಧವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 21 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಭಾರತ–ಪಾಕ್ ಉದ್ವಿಗ್ನತೆ: 1971ರ ನಂತರ ಇದೇ ಮೊದಲು ದೇಶದ 244 ಜಿಲ್ಲೆಗಳಲ್ಲಿ ಇಂದು ಬೃಹತ್ ನಾಗರಿಕ ರಕ್ಷಣಾ ಮಾಕ್ ಡ್ರಿಲ್; ಸೈರನ್, ಲೈಟ್ ಆಫ್...

ಸಂಕಷ್ಟದಲ್ಲಿ ಸುರಕ್ಷತಾ ತಾಲೀಮು

ನವದೆಹಲಿ, ಮೇ 6– ಪಹಲ್ಗಾಮ್ ಉಗ್ರರ ದಾಳಿ ಬಳಿಕ ಪಾಕಿಸ್ತಾನ ಜೊತೆ ಯುದ್ಧ ಉದ್ವಿಗ್ನತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ 1971ರ ಬಾಂಗ್ಲಾ ವಿಮೋಚನಾ ಯುದ್ಧದ ಬಳಿಕ ಭಾರತದಲ್ಲಿ ಇದೇ ಮೊದಲ ಬಾರಿಗೆ ನಾಳೆ(ಮೇ 7) ಕರ್ನಾಟಕದ ಬೆಂಗಳೂರು, ಕಾರವಾರ ಹಾಗೂ ರಾಯಚೂರು ಸೇರಿದಂತೆ ದೇಶದ 244 ಜಿಲ್ಲೆಗಳಲ್ಲಿ ಪೂರ್ಣ ಪ್ರಮಾಣದ ನಾಗರಿಕ ರಕ್ಷಣಾ ಅಣಕು ಕವಾಯತು(ಮಾಕ್ ಡ್ರಿಲ್) ನಡೆಸಲಾಗುತ್ತಿದೆ.

ದೇಶದ 244 ಜಿಲ್ಲೆಗಳಲ್ಲಿ ನಾಗರಿಕ ರಕ್ಷಣಾ ತಾಲೀಮು ಆಯೋಜಿಸಲು ಗೃಹ ಸಚಿವಾಲಯ ನಿರ್ಧರಿಸಿದ ಹಿನ್ನೆಲೆಯಲ್ಲಿ ನಾಗರಿಕರ ರಕ್ಷಣೆ ಸಂಬಂಧ ಅಣಕು ಕವಾಯತು ನಡೆಸುವಂತೆ ಕೇಂದ್ರ ಗೃಹ ಸಚಿವಾಲಯ ಎಲ್ಲಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ಸೂಚನೆ ನೀಡಿತ್ತು. ಈ ಸಂಬಂಧ ಕೇಂದ್ರ ಗೃಹ ಇಲಾಖೆ ಕಾರ್ಯದರ್ಶಿ ಗೋವಿಂದ ಮೋಹನ್ ಮಂಗಳವಾರ ಸಭೆ ನಡೆಸಿ, ರಕ್ಷಾಣಾ ತಾಲೀಮಿಗೆ ಸಂಬಂಧಿಸಿದ ಪೂರ್ವ ಸಿದ್ಧತೆಗಳನ್ನು ಪರಿಶೀಲಿಸಿದರು. ದೇಶಾದ್ಯಂತ ಮುಖ್ಯ ಕಾರ್ಯದರ್ಶಿಗಳು ಮತ್ತು ಸಿವಿಲ್ ಡಿಫೆನ್ಸ್ ಮುಖ್ಯಸ್ಥರು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಈ ಮಹತ್ವದ ಸಭೆಯಲ್ಲಿ ಭಾಗವಹಿಸಿದ್ದರು.

ಯಾವುದೇ ಸಂಭಾವ್ಯ ಪ್ರತಿಕೂಲ ದಾಳಿಗಳು ಅಥವಾ ತುರ್ತು ಪರಿಸ್ಥಿತಿಗಳ ಸಂದರ್ಭದಲ್ಲಿ ನಾಗರಿಕ ರಕ್ಷಾ ಯಂತ್ರೋಪಕರಣಗಳ ಸನ್ನದ್ಧತೆಯನ್ನು ಮೌಲ್ಯಮಾಪನ ಮಾಡುವುದು ಮತ್ತು ಹೆಚ್ಚಿಸುವುದು ಈ ಅಣಕು ಕವಾಯತಿನ ಮುಖ್ಯ ಉದ್ದೇಶವಾಗಿದೆ. ಈ ಅಣಕು ಕವಾಯತು ಯುದ್ಧದಂತಹ ಪರಿಸ್ಥಿತಿಯನ್ನು ಅನುಕರಿಸುತ್ತದೆ. ಸೈರನ್‌ಗಳ ಸದ್ದು, ಸ್ಥಳೀಯ ತುರ್ತು ಸೇವೆಗಳಿಂದ ಸಂಘಟಿತ ಪ್ರತಿಕ್ರಿಯೆ, ಸಾರ್ವಜನಿಕ ಸುರಕ್ಷತೆ ಸೇರಿದಂತೆ ವಾಯುದಾಳಿ ಎಚ್ಚರಿಕೆ ವ್ಯವಸ್ಥೆಗಳ ಕಾರ್ಯಾಚರಣೆಯನ್ನು ಒಳಗೊಂಡಿರುತ್ತದೆ ಎನ್ನಲಾಗಿದೆ.



ಸೈರನ್

ಪ್ರತಿಕೂಲ ವಾತಾವರಣದಲ್ಲಿ ಉದ್ಭವಿಸಬಹುದಾದ ಆಕಸ್ಮಿಕ ಘಟನೆಗಳಿಗೆ ರಾಷ್ಟ್ರ ಮತ್ತು ಅದರ ಆಡಳಿತಾತ್ಮಕ ಚೌಕಟ್ಟನ್ನು ಸಿದ್ಧಪಡಿಸುವುದೂ ಈ ಕವಾಯತಿನ ಉದ್ದೇಶವಾಗಿದೆ. ಈ ಮೂಲಕ ಬಹು ಪ್ರದೇಶಗಳಲ್ಲಿ ಮೂಲಸೌಕರ್ಯ ಮತ್ತು ಮಾನವ ಪ್ರತಿಕ್ರಿಯೆಯನ್ನು ಏಕಕಾಲದಲ್ಲಿ ಪರೀಕ್ಷಿಸಲಾಗುತ್ತದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಪಹಲ್ಗಾಮ್‌ನಲ್ಲಿ ಏ.22 ರಂದು ಉಗ್ರರು ದಾಳಿ ನಡೆಸಿ, 26 ಮಂದಿ ಪ್ರವಾಸಿಗರನ್ನು ಹತ್ಯೆ ಮಾಡಿದ್ದರು. ಪಾಕಿಸ್ತಾನ ಬೆಂಬಲಿತ ಉಗ್ರರಾದ ಕಾರಣ ದೇಶದಾದ್ಯಂತ ಪಾಕಿಸ್ತಾನದ ವಿರುದ್ಧ ಯುದ್ಧ ಸಾರಬೇಕೆಂಬ ಆಗ್ರಹಗಳು ವ್ಯಕ್ತ ವಾಗುತ್ತಿದೆ. ಈವರೆಗೂ ಕೇಂದ್ರ ಸರ್ಕಾರ ಪಾಕಿಸ್ತಾನ ವಿರುದ್ಧ ರಾಜತಾಂತ್ರಿಕ ಪ್ರತೀಕಾರ ಕ್ರಮಗಳನ್ನು ಕೈಗೊಂಡಿದ್ದು, ಈಗ ಅಣಕು ರಕ್ಷಣಾ ಕವಾಯತಿಗೆ ಸೂಚನೆ ನೀಡಿರುವುದು ಮಹತ್ವದ ಕ್ರಮವಾಗಿದೆ. ■6ನೇ ಪುಟಕ್ಕೆ

ರಾಜ್ಯದ 3 ಜಿಲ್ಲೆಗಳಲ್ಲಿ 'ಆಪರೇಷನ್ ಅಭಯಾಸ್'

ವಾರದಲ್ಲಿ ಮೈಸೂರು, ಮಂಡ್ಯದಲ್ಲೂ ಮಾಕ್ ಡ್ರಿಲ್

ದೇಶದ 244 ಜಿಲ್ಲೆಗಳನ್ನು ಮೂರು ಕೆಟಗರಿಗಳಾಗಿ ವಿಂಗಡಿಸಿ ಮಾಕ್ ಡ್ರಿಲ್ ನಡೆಸಲಾಗುತ್ತಿದೆ. ಕೆಟಗರಿ ಎರಡರ ಅಡಿಯಲ್ಲಿ ಕರ್ನಾಟಕದ ಬೆಂಗಳೂರು, ಕಾರವಾರದ ಮಲ್ಲಾಪುರ, ರಾಯಚೂರಿನ ಶಕ್ತಿ ನಗರದಲ್ಲಿ 'ಆಪರೇಷನ್ ಅಭಯಾಸ್' ಶೀರ್ಷಿಕೆಯಡಿ ನಾಗರಿಕ ರಕ್ಷಣಾ ಭದ್ರತಾ ಕವಾಯತು ನಡೆಸಲು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ. ಈ ವಾರದಲ್ಲಿ ಮೈಸೂರು, ಮಂಡ್ಯ, ಉತ್ತರಕನ್ನಡ ಹಾಗೂ ರಾಯಚೂರು ಜಿಲ್ಲೆಗಳಲ್ಲೂ ಮಾಕ್ ಡ್ರಿಲ್ ನಡೆಸಲು ನಿರ್ಧರಿಸಲಾಗಿದೆ.

ಬೆಂಗಳೂರಲ್ಲಿ 32 ಕಡೆ ಕವಾಯತು: ಬೆಂಗಳೂರಿನ 35 ಕಡೆ ಸೈರನ್ ಇದ್ದು, 32 ಕಡೆ ಕಾರ್ಯ ನಿರ್ವಹಿಸುತ್ತಿವೆ. ಹೀಗಾಗಿ ಸೈರನ್ ಕಾರ್ಯ ನಿರ್ವಹಿಸುವ ಕಡೆ ಮಾಕ್‌ಡ್ರಿಲ್ ನಡೆಸಲಾಗುತ್ತಿದೆ.


ಸುರಕ್ಷತಾ ತರಬೇತಿ ತಾಲೀಮು

ಭಾರತದ ಜೊತೆ ನಾವಿದ್ದೇವೆ; ಕತಾರ್

ನವದೆಹಲಿ: ಪಹಲ್ಗಾಮ್ ಉಗ್ರ ದಾಳಿಯ ನಂತರ ಜಗತ್ತಿನ ಬಹುತೇಕ ಪಾಶ್ಚಿಮಾತ್ಯ ದೇಶಗಳು ಭಾರತ ಪರವಾಗಿ ನಿಂತಿವೆ. ಇದೀಗ ಖಟ್ಟರ್ ಮುಸ್ಲಿಂ ರಾಷ್ಟ್ರ ಕತಾರ್ ಕೂಡ ಭಾರತದ ಬೆಂಬಲಕ್ಕೆ ನಿಂತಿದ್ದು ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ನಾವು ಭಾರತದೊಂದಿಗಿದ್ದೇವೆ ಎಂದು ಕತಾರ್‌ನ ಅಮೀರ್ ಅಲ್ ಥಾನಿ ಹೇಳಿದ್ದಾರೆ.

ಪಹಲ್ಗಾಮ್ ಉಗ್ರ ದಾಳಿಯ ಬಗ್ಗೆ ಕತಾರ್‌ನ ಅಮೀರ್ ತಮೀಮ್ ಬಿನ್ ಹಮದ್ ಅಲ್–ಥಾನಿ ದುಃಖ ವ್ಯಕ್ತಪಡಿಸಿದ್ದಾರೆ. ಕತಾರ್‌ನ ಅಮೀರ್, ಪ್ರಧಾನಿ ಮೋದಿಗೆ ಕರೆ ಮಾಡಿ ಮಾತನಾಡಿ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತಕ್ಕೆ ಬೆಂಬಲ ನೀಡುವುದಾಗಿ ಹೇಳಿದ್ದಾರೆ. ಪಹಲ್ಗಾಮ್‌ನಲ್ಲಿ ನಡೆದ ಗಡಿಯಾಚೆಗಿನ ಭಯೋತ್ಪಾದಕ ದಾಳಿಯಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಅವರು ಸಂತಾಪ ಮತ್ತು ಒಗ್ಗಟ್ಟನ್ನು ವ್ಯಕ್ತಪಡಿಸಿದರು. ಭಯೋತ್ಪಾದನೆಯ ವಿರುದ್ಧ ಭಾರತದ ಹೋರಾಟ ಮತ್ತು ಅಪರಾಧಿಗಳನ್ನು ನ್ಯಾಯಕ್ಕೆ ತರಲು ಭಾರತ ತೆಗೆದುಕೊಂಡ ಎಲ್ಲಾ ಕ್ರಮಗಳಿಗೆ ಅವರು ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು.

ಭಾರತೀಯ ವಾಯುಪಡೆ 2 ದಿನ ಸಮರಾಭ್ಯಾಸ

ನವದೆಹಲಿ: ಭಾರತೀಯ ವಾಯುಪಡೆಯು ಪಾಕಿಸ್ತಾನದ ಗಡಿಯಲ್ಲಿ ಬುಧವಾರದಿಂದ ಎರಡು ದಿನಗಳ ಕಾಲ ಮೆಗಾ ಮಿಲಿಟರಿ ತಾಲೀಮು ನಡೆಸಲಿದೆ.

ಈ ಸಮರಾಭ್ಯಾಸದಲ್ಲಿ ರಫೇಲ್, ಸು–30 ಮತ್ತು ಜಾಗ್ವಾರ್ ವಿಮಾನಗಳು ಸೇರಿದಂತೆ ಎಲ್ಲಾ ಮುಂಚೂಣಿ ಯುದ್ಧ ವಿಮಾನಗಳು ಭಾಗವಹಿಸಲಿವೆ ಎಂದು ರಕ್ಷಣಾ ಸಂಸ್ಥೆಯ ಮೂಲಗಳು ಮಂಗಳ ವಾರ ತಿಳಿಸಿವೆ. ಕಳೆದ ಏಪ್ರಿಲ್ 22 ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಪಾಕಿಸ್ತಾನದ ವಿರುದ್ಧ ಸಂಭಾವ್ಯ ಯುದ್ಧಕ್ಕೆ ಭಾರತ ಸಿದ್ಧವಾಗುತ್ತಿದೆ. ಭಾರತ–ಪಾಕಿಸ್ತಾನ ಗಡಿಯ ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲಿ ಹೆಚ್ಚಾಗಿ ನಡೆಯುವ ಪ್ರಮುಖ ವೈಮಾನಿಕ ತಾಲೀಮು ಬಗ್ಗೆ ಭಾರತದ ನಾಗರಿಕ ವಿಮಾನಯಾನ ಅಧಿಕಾರಿಗಳು ಈಗಾಗಲೇ ವಾಯುಪಡೆಗೆ ನೋಟಾಮ್ ನೀಡಿದ್ದಾರೆ.



ರಫೇಲ್, ಸು –30 ಎಂಕೆಐ, ಮಿಗ್ –29, ಮಿರಾಜ್ –2000, ತೇಜಸ್ ಮತ್ತು AWACS (ವಾಯುಗಾಮಿ ಎಚ್ಚರಿಕೆ ಮತ್ತು ನಿಯಂತ್ರಣ ವ್ಯವಸ್ಥೆ) ವಿಮಾನಗಳು ಸೇರಿದಂತೆ ಭಾರತದ ಮುಂಚೂಣಿಯ ಯುದ್ಧ ವಿಮಾನಗಳು ಈ ಸಮರಾಭ್ಯಾಸದಲ್ಲಿ ಭಾಗವಹಿ ಸಲಿವೆ ಎಂದು ಮೂಲಗಳು ತಿಳಿಸಿವೆ.

ಅಕ್ರಮ ಗಣಿಗಾರಿಕೆ; ಸಿಬಿಐ ವಿಶೇಷ ಕೋರ್ಟ್‌ನಿಂದ

ಶಾಸಕ ಜನಾರ್ದನ ರೆಡ್ಡಿಗೆ ಏಳು ವರ್ಷ ಜೈಲು ಶಿಕ್ಷೆ

ಹೈದರಾಬಾದ್, ಮೇ 6– ದೇಶಾದ್ಯಂತ ಸಂಚಲನ ಸೃಷ್ಟಿಸಿದ್ದ ಓಬಳಾಪುರಂ ಮೈನಿಂಗ್ ಕಂಪನಿ(ಒಎಂಸಿ)ಯ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಮಾಜಿ ಸಚಿವ ಹಾಗೂ ಗಂಗಾವತಿ ಹಾಲಿ ಶಾಸಕ ಗಾಲಿ ಜನಾರ್ದನ ರೆಡ್ಡಿಗೆ ಏಳು ವರ್ಷ ಜೈಲು ಶಿಕ್ಷೆ ವಿಧಿಸಿ ಸಿಬಿಐ ವಿಶೇಷ ಕೋರ್ಟ್ ಮಂಗಳವಾರ ತೀರ್ಪು ನೀಡಿದೆ.

ಒಎಂಸಿ ಅಕ್ರಮ ಗಣಿಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದ – ಪ್ರತಿವಾದ ಆಲಿಸಿದ್ದ ಹೈದರಾಬಾದ್ ಸಿಬಿಐ ನ್ಯಾಯಾಲಯ ತೀರ್ಪನ್ನು ಇಂದಿಗೆ ಕಾಯ್ದಿರಿಸಿತ್ತು. ಇಂದು ತೀರ್ಪು ಪ್ರಕಟಿಸಿದ ಕೋರ್ಟ್, ಒಎಂಸಿ ಕಂಪನಿ ಮಾಲೀಕ ಜನಾರ್ದನ ರೆಡ್ಡಿಗೆ ಏಳು ವರ್ಷ ಜೈಲು ಶಿಕ್ಷೆ ವಿಧಿಸಿ ಆದೇಶಿಸಿದೆ.

ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಓಬಳಾಪುರಂನಲ್ಲಿ ನಡೆದಿದೆ ಎನ್ನಲಾದ ಅಕ್ರಮ ಗಣಿಗಾರಿಕೆ ಪ್ರಕರಣ ಸಂಬಂಧ ಬರೋಬ್ಬರಿ 13 ವರ್ಷಗಳಿಂದ ನಡೆದ ಸುದೀರ್ಘ ವಿಚಾರಣಾ ಪ್ರಕ್ರಿಯೆಯಲ್ಲಿ 3,400ಕ್ಕೂ ಹೆಚ್ಚು ದಾಖಲೆಗಳನ್ನು ಪರಿಶೀಲಿಸಲಾಗಿದೆ ಮತ್ತು 219 ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಏಳು ವರ್ಷ ಜೈಲು ಶಿಕ್ಷೆಗೆ ಗುರಿಯಾಗಿರುವ ಜನಾರ್ದನ ರೆಡ್ಡಿ ಅವರ ಶಾಸಕ ಸ್ಥಾನಕ್ಕೆ ಕುತ್ತು ಬರುವ ಸಾಧ್ಯತೆ ಇದೆ. ಇನ್ನು, ಇದೇ ಪ್ರಕರಣದಲ್ಲಿ ವಿ.ಡಿ. ರಾಜಗೋಪಾಲ್, ದಿ. ರಾವ್ ಲಿಂಗಾ ರೆಡ್ಡಿ, ಕೆ.ಮೆಹಫೂಸ್ ಅಲಿಖಾನ್ ಕೂಡ ಅಪರಾಧಿ ಎಂದು ಕೋರ್ಟ್ ತೀರ್ಪು ನೀಡಿದೆ.


ಜನಾರ್ದನ ರೆಡ್ಡಿ

ಜನಾರ್ದನ ರೆಡ್ಡಿ, ಬಿ.ವಿ ಶ್ರೀನಿವಾಸ ರೆಡ್ಡಿ (ಒಎಂಸಿ ವ್ಯವಸ್ಥಾಪಕ ನಿರ್ದೇಶಕ), ಮೆಫಾಜ್ ಅಲಿ ಖಾನ್ (ಜನಾರ್ದನ ರೆಡ್ಡಿ ಆಪ್ತ ಸಹಾಯಕ), ವಿ ಡಿ ರಾಜಗೋಪಾಲ್ (ಗಣಿ ಇಲಾಖೆಯ ಮಾಜಿ ನಿರ್ದೇಶಕ), ಕೃಪಾನಂದಂ (ನಿವೃತ್ತ ಐಎಎಸ್ ಅಧಿಕಾರಿ), ಸಬಿತಾ ಇಂದ್ರಾರೆಡ್ಡಿ (ತೆಲಂಗಾಣದ ಮಾಜಿ ಸಚಿವೆ ಹಾಗೂ ಹಾಲಿ ಶಾಸಕಿ), ವೈ. ಶ್ರೀಲಕ್ಷ್ಮಿ (2022ರಲ್ಲಿ ಸೇವೆಯಿಂದ ಬಿಡುಗಡೆಯಾದ ಐಎಎಸ್ ಅಧಿಕಾರಿ) ಮತ್ತು ದಿವಂಗತ ಆರ್. ಲಿಂಗಾ ರೆಡ್ಡಿ (ಅಂದಿನ ಗಣಿ ಇಲಾಖೆಯ ಸಹಾಯಕ ನಿರ್ದೇಶಕ) ಈ ಪ್ರಕರಣದ ಆರೋಪಿಗಳಾಗಿದ್ದಾರೆ. ಇವರ ವಿರುದ್ಧ ಐಪಿಸಿ ಸೆಕ್ಷನ್ 120 ಬಿ, 420, 409, 468 ಮತ್ತು 471 ಹಾಗೂ ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 13(2) ಜೊತೆಗೆ 13(1)(ಡಿ) ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು.

ನೀವು ಜೀವಾವಧಿ ಶಿಕ್ಷೆಗೆ ಅರ್ಹರು: ನ್ಯಾಯಾಲಯದ ವಿಚಾರಣೆ ಹಿನ್ನೆಲೆಯಲ್ಲಿ ಜನಾರ್ಧನ ರೆಡ್ಡಿ ಇಂದು ಕೋರ್ಟ್‌ಗೆ ಹಾಜರಾಗಿದ್ದರು. ಏಳು ವರ್ಷ ನೀಡಿರುವ ಶಿಕ್ಷೆ ಕಡಿಮೆ ಮಾಡುವಂತೆ ■6ನೇ ಪುಟಕ್ಕೆ

ಒಂದೇ ದಿನದಲ್ಲಿ ನೂರಾರು ಕಡತಗಳಿಗೆ ಮುಕ್ತಿ

ಬೆಂಗಳೂರು, ಮೇ 6(ಕೆಎಂಶಿ)– ವಿವಿಧ ಇಲಾಖೆಗಳಲ್ಲಿ ಬಾಕಿ ಉಳಿದಿದ್ದ ನೂರಾರು ಕಡತಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಕ್ತಿ ನೀಡಿದ್ದಾರೆ.



ಅಧಿಕೃತ ಕಾರ್ಯಕ್ರಮಗಳನ್ನು ರದ್ದುಗೊಳಿಸಿ, ಇಂದು ಇಡೀ ದಿನ ತಮ್ಮ ಸರ್ಕಾರಿ ಅಧಿಕೃತ ನಿವಾಸದಲ್ಲೇ ಕುಳಿತು, ಅಭಿವೃದ್ಧಿ ಕಾರ್ಯಗಳೂ ಸೇರಿದಂತೆ ಸರ್ಕಾರದ ಪ್ರಮುಖ ಕಡತಗಳಿಗೆ ಸಹಿ ಹಾಕಿದ್ದಾರೆ. ಕಳೆದ ಎರಡು ಮೂರು ವಾರ ಗಳ ಕಾಲ ನಿರಂತರ ಪ್ರವಾಸದಲ್ಲಿದ್ದ ಕಾರಣ ಸಾವಿರಕ್ಕೂ ಹೆಚ್ಚು ಕಡತಗಳು ವಿಲೇವಾರಿಯಾಗದೇ ಉಳಿದುಕೊಂಡಿದ್ದವು. ತಮ್ಮ ಸಹಿ ಆಗದೇ ಅಭಿವೃದ್ಧಿ ಕಾರ್ಯಕ್ರಮಗಳಿಗೂ ಹಿನ್ನಡೆಯಾಗುತ್ತದೆ ಎಂದು ಅರಿತ ಮುಖ್ಯಮಂತ್ರಿಗಳು ಇಂದು ಇಡೀ ದಿನ ಪ್ರಮುಖ ಕಡತಗಳನ್ನು ಪರಿಶೀಲನೆ ಮಾಡಿ ಸಹಿ ಹಾಕಿದ್ದಾರೆ.





ಬೇಕಾಗಿದ್ದಾರೆ

ಡಿಜಿಟಲ್ ಮಾರ್ಕೆಟಿಂಗ್ ಮತ್ತು ಪೋಸ್ಟರ್ ಡಿಸೈನರ್ ಬೇಕಾಗಿದ್ದಾರೆ

ಸಂಬಳ- 30,000 - 1,00,000

6366477028

ಮೈಸೂರು ನಗರದಲ್ಲಿ ಕಳೆದ 8 ತಿಂಗಳಿಂದ ನಡೆದಂತಹ 147 ಅಪರಾಧ ಪ್ರಕರಣಗಳಲ್ಲಿ

20 ಮಂದಿ ಬಂಧನ; 4.23 ಕೋಟಿ ರೂ. ಮೌಲ್ಯದ ಆಭರಣ, 69 ವಾಹನ, 13.54 ಲಕ್ಷ ರೂ. ನಗದು ಜಪ್ತಿ

CRIMINAL
ಕ್ರೈಂ ಸರ್ಕಲ್

ಮೈಸೂರು, ಮೇ 6(ಆರ್‌ಕೆ)– ಮೈಸೂರು ನಗರದಾದ್ಯಂತ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ 147 ಅಪರಾಧ ಕೃತ್ಯಗಳಲ್ಲಿ 20 ಮಂದಿ ಆರೋಪಿಗಳನ್ನು ಬಂಧಿಸಿರುವ ಪೊಲೀಸರು, 4,23,60,000 ರೂ. ಮೌಲ್ಯದ 5 ಕೆಜಿ 320 ಗ್ರಾಂ ಚಿನ್ನಾಭರಣ, 6 ಕೆಜಿ 246 ಗ್ರಾಂ ಬೆಳ್ಳಿ ಪದಾರ್ಥ, 52 ದ್ವಿಚಕ್ರ ವಾಹನಗಳು, 9 ಕಾರು, 8 ಸರಕು ಸಾಗಣೆ ವಾಹನಗಳು ಹಾಗೂ 13,54,500 ರೂ. ನಗದು ವಶಪಡಿಸಿಕೊಂಡಿದ್ದಾರೆ.

ಬಂಧಿತ 20 ಮಂದಿ ಪೈಕಿ ಇಬ್ಬರು ಅಂತರರಾಜ್ಯ ಖದೀಮರು. ಮೈಸೂರಿನ ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿ ಆವರಣದಲ್ಲಿ ದೇವರಾಜ, ಕೃಷ್ಣರಾಜ, ನರಸಿಂಹರಾಜ ಉಪವಿಭಾಗ ಹಾಗೂ ಸಿಸಿಬಿ ಪೊಲೀಸರು ವಶಪಡಿಸಿಕೊಂಡಿರುವ ಕಳವು ಸ್ವತ್ತುಗಳನ್ನು ಪ್ರದರ್ಶಿಸಿ ನ್ಯಾಯಾಲಯ ಅನುಮತಿ ನೀಡಿರುವ ಪ್ರಕರಣಗಳಲ್ಲಿನ ಸ್ವತ್ತುಗಳನ್ನು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ವಾರಸುದಾರರಿಗೆ ಹಿಂದಿರುಗಿಸಿದರು.

ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, ಮೈಸೂರು ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಕಳೆದ 8 ತಿಂಗಳಿಂದ ನಡೆದಿದ್ದ 2 ದರೋಡೆ, 4 ಸುಲಿಗೆ, 21 ಸರಗಳ್ಳತನ, 34 ಕನ್ನ ಕಳವು, 6 ಮನೆ ಕಳವು, 69 ವಾಹನ ಕಳವು, 13 ಸಾಮಾನ್ಯ ಕಳವು ಪ್ರಕರಣಗಳಲ್ಲಿ 20 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದರು. ಅವರಿಂದ 4,23,60,000 ರೂ. ಮೌಲ್ಯದ 5.320 ಕೆಜಿ ಚಿನ್ನಾಭರಣ, 6.246 ಕೆಜಿ ಬೆಳ್ಳಿ ಪದಾರ್ಥಗಳು, 52 ದ್ವಿಚಕ್ರ ವಾಹನಗಳು, 6 ಕಾರುಗಳು, 8 ಗೂಡ್ಸ್ ವಾಹನಗಳು ಹಾಗೂ 13,54,500 ರೂ. ನಗದನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಆಯುಕ್ತರು ಇದೇ ವೇಳೆ ತಿಳಿಸಿದರು. ಶ್ರೀರಂಗಪಟ್ಟಣ ತಾಲೂಕು ನಗುವನಹಳ್ಳಿ ಗ್ರಾಮದ ಪ್ರಕಾಶ್ ಎಂಬುವರ ಮನೆಯಲ್ಲಿ ಕಳವು ಮಾಡಿದ್ದ ಸುಮಾರು 50 ಲಕ್ಷ ರೂ. ಬೆಲೆಬಾಳುವ 500 ಗ್ರಾಂ ಚಿನ್ನಾಭರಣವನ್ನು ಮೈಸೂರಿನ ಕುವೆಂಪುನಗರ ಠಾಣೆ ಇನ್‌ಸ್ಪೆಕ್ಟರ್ ಅರುಣ್ ನೇತೃತ್ವದ ಕ್ರೈಂ ತಂಡವು ಪತ್ತೆ ಮಾಡಿದ್ದು, ಇಂದು ಆಯೋಜಿಸಿದ್ದ ಕದ್ದ ಆಸ್ತಿ ಹಿಂತಿರುಗಿಸುವ ■6ನೇ ಪುಟಕ್ಕೆ

ವಾರಸುದಾರರಿಗೆ ಸ್ವತ್ತು ಹಿಂದಿರುಗಿಸಿದ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್


ಖದೀಮರಿಂದ ವಶಪಡಿಸಿಕೊಂಡ ಚಿನ್ನಾಭರಣಗಳನ್ನು ಮೈಸೂರು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ವಾರಸುದಾರರಿಗೆ ಹಸ್ತಾಂತರಿಸಿದರು.

ರೌಡಿ ಶೀಟರ್ ಕಾರ್ತಿಕ್ ಹತ್ಯೆ ಪ್ರಕರಣ; 24 ಗಂಟೆಯೊಳಗೆ

ಮಹಿಳೆ ಸೇರಿ 6 ಮಂದಿ ಸೆರೆ

ಅಕ್ರಮ ಸಂಬಂಧದ ಹಳೇದ್ವೇಷವೇ ಕೊಲೆಗೆ ಪ್ರಮುಖ ಕಾರಣ

ಮೈಸೂರು, ಮೇ 6(ಆರ್‌ಕೆ)– ಮೈಸೂರು ಹೊರವಲಯದಲ್ಲಿ ನಿನ್ನೆ ಮುಂಜಾನೆ ನಡೆದ ರೌಡಿಶೀಟರ್ ಕಾರ್ತಿಕ್ ಹತ್ಯೆ ಪ್ರಕರಣ ಸಂಬಂಧ ಮಹಿಳೆ ಸೇರಿ 6 ಮಂದಿಯನ್ನು ಘಟನೆ ನಡೆದ 24 ಗಂಟೆಯೊಳಗೆ ಬಂಧಿಸುವಲ್ಲಿ ಮೈಸೂರು ದಕ್ಷಿಣ ಗ್ರಾಮಾಂತರ ಹಾಗೂ ವರುಣ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.


ಕಾರ್ತಿಕ್

ಮೈಸೂರಿನ ಕ್ಯಾತಮಾರನಹಳ್ಳಿ ಮತ್ತು ವಿದ್ಯಾರಣ್ಯಪುರಂನ ಕನಕಗಿರಿ ನಿವಾಸಿಗಳಾದ ಪ್ರವೀಣ್, ಆನಂದಗೌಡ, ಚಂದು, ಅವಿನಾಶ್, ವೆಂಕಟೇಶ್ ಹಾಗೂ ಲಕ್ಷ್ಮಿ ಬಂಧಿತ ಕೊಲೆ ಆರೋಪಿಗಳು. ಸೋಮವಾರ ಮುಂಜಾನೆ 1.55 ಗಂಟೆಯಲ್ಲಿ ವರುಣ ಬಳಿಯ ಹೋಟೆಲ್‌ವೊಂದರ ಮುಂದೆ ಮಚ್ಚು, ಲಾಂಗ್‌ನಿಂದ ಕಾರ್ತಿಕ್‌ನನ್ನು ಕೊಚ್ಚಿ ಬರ್ಬರವಾಗಿ ಹತ್ಯೆಗೈದು ಪರಾರಿಯಾಗಿದ್ದವರ ಸುಳಿವಿನ ಜಾಡು ಹಿಡಿದು ಹೋಗಿ, ಸೋಮವಾರ ರಾತ್ರಿ 11.30 ಗಂಟೆಯಲ್ಲಿ ಮಳವಳ್ಳಿ ಸಮೀಪ ಬಂಧಿಸುವಲ್ಲಿ ಯಶಸ್ವಿಯಾಗಿರುವ ಪೊಲೀಸರು, ಕೃತ್ಯಕ್ಕೆ ಬಳಸಿದ್ದ ಸ್ಕಾರ್ಪಿಯೋ ಕಾರು, ಬಜಾಜ್ ಪಲ್ಸರ್ ಬೈಕ್, ಮಚ್ಚು, ಲಾಂಗ್ ಅನ್ನು ವಶಪಡಿಸಿಕೊಂಡಿದ್ದಾರೆ.


ಪ್ರವೀಣ್, ಕ್ಯಾತಮಾರನಹಳ್ಳಿಯಲ್ಲಿ ವಾಸವಾಗಿದ್ದ ಕಾರ್ತಿಕ್ ಬಳಿ ಕಾರು ಚಾಲಕನಾಗಿದ್ದ. ಕಾರ್ತಿಕ್ ಮನೆಗೆ ತರಕಾರಿ, ದಿನಸಿ ತಂದು ಕೊಡುವ ವೇಳೆ ಆ ಮನೆಯಲ್ಲಿದ್ದ, ಕಾರ್ತಿಕ್‌ನ ಗೆಳತಿ ಲಕ್ಷ್ಮಿಯೊಂದಿಗೆ ಸಂಪರ್ಕ ಬೆಳೆಸಿದ್ದ. ಇದು ತಿಳಿದು ರೊಚ್ಚಿಗೆದ್ದ ಕಾರ್ತಿಕ್, ಪ್ರವೀಣ್ ಮೇಲೆ ಹಲ್ಲೆ ಮಾಡಿ, ಮನೆಯಿಂದ ಓಡಿಸಿದ್ದನಲ್ಲದೇ, ಲಕ್ಷ್ಮಿಯನ್ನು ಗಾಯತ್ರಿಪುರಂನಲ್ಲಿ ಬೇರೆ ಮನೆ ಮಾಡಿ ಇರಿಸಿದ್ದ ಎಂಬುದು ವಿಚಾರಣೆಯಿಂದ ತಿಳಿದುಬಂದಿದೆ. ಇದರಿಂದ ಆಕ್ರೋಶಗೊಂಡ ಪ್ರವೀಣ್, ಲಕ್ಷ್ಮಿಯೊಂದಿಗೆ ■6ನೇ ಪುಟಕ್ಕೆ

ಕೊಲೆಗೆ ಸ್ಕೆಚ್ ಹಾಕಿದ್ದು ಇದೇ ಖಾಲಿ ಜಾಗದಲ್ಲಿ!

ಮೈಸೂರು, ಮೇ 6(ಆರ್‌ಕೆ)– ವಿರೋಧಿ ಪಡೆಯು ಕಾರ್ತಿಕ್‌ನನ್ನು ಮುಗಿಸಲು ಮೈಸೂರಿನ ವಿದ್ಯಾರಣ್ಯಪುರಂನ ಕನಕಗಿರಿ ಬಡಾವಣೆಯ ನಳಂದ ಇಂಗ್ಲಿಷ್ ಮೀಡಿಯಂ ಸ್ಕೂಲ್ ಬಳಿ ಇರುವ ಖಾಲಿ ಜಾಗದಲ್ಲಿ ಸ್ಕೆಚ್ ಹಾಕಿತ್ತು.

ಪ್ರತೀ ದಿನ ರಾತ್ರಿ 10 ಗಂಟೆ ನಂತರ ಈ ಖಾಲಿ ಜಾಗದಲ್ಲಿ ಸೇರುತ್ತಿದ್ದ ಪ್ರವೀಣ್ ಹಾಗೂ ಐವರು ಸಹಚರರು, ಇಲ್ಲಿಯೇ ಮದ್ಯಪಾನ ಮಾಡಿ ಸಂಚು ರೂಪಿಸುತ್ತಿದ್ದರು. ಕಾರು, ಬೈಕಿನಲ್ಲಿ ಬಂದು ಪಾನಮತ್ತರಾಗಿ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದು, ಕಡೆಗೆ ಖಾಲಿ ಬಾಟಲಿಗಳನ್ನು ಒಡೆದು, ಬಿಸಾಡಿ ಹೋಗುತ್ತಿದ್ದುದ್ದನ್ನು ಅಲ್ಲಿನ ನಿವಾಸಿಗಳು ಕಂಡು ವಿದ್ಯಾರಣ್ಯಪುರಂ ಠಾಣೆ ಪೊಲೀಸರಿಗೆ ಮಾಹಿತಿ ನೀಡುತ್ತಿದ್ದರು.

ಪೊಲೀಸರು ಬರುವಷ್ಟರಲ್ಲಿ ಈ ಪುಂಡರ ಗ್ಯಾಂಗ್ ಜಾಗ ಖಾಲಿ ಮಾಡುತ್ತಿತ್ತು. ಕಾರ್ತಿಕ್ ಕೊಲೆಯಾದ ದಿನವೂ ರಾತ್ರಿ 12.30 ಗಂಟೆವರೆಗೂ ಪ್ರವೀಣ್ ಗ್ಯಾಂಗ್ ಅದೇ ಖಾಲಿ ಜಾಗದಲ್ಲೇ ನೆರೆದಿದ್ದು, ಮದ್ಯಪಾನ ಮಾಡಿದೆ. ಘಟನೆ ನಂತರ ಈಗ ಅಲ್ಲಿ ಯಾರೂ ಕಾಣಿಸುತ್ತಿಲ್ಲ ಎಂದಿರುವ ನಿವಾಸಿಗಳು, ನಾವು ಮಾಹಿತಿ ನೀಡಿದಾಗಲೇ ಪೊಲೀಸರು ಗಂಭೀರವಾಗಿ ಪರಿಗಣಿಸಿ ಕ್ರಮ ವಹಿಸಿದ್ದರೆ ಕಾರ್ತಿಕ್ ಕೊಲೆ ತಪ್ಪಿಸಬಹುದಿತ್ತು ಎಂದು ಹಲವರು ಅಭಿಪ್ರಾಯಪಟ್ಟಿದ್ದಾರೆ. ಮೈಸೂರಲ್ಲಿರುವ ಪುಂಡರ ಅಡ್ಡೆಗಳ ಮೇಲೆ ಪೊಲೀಸರು ದಾಳಿ ನಡೆಸಿ, ಅವರನ್ನು ವಶಕ್ಕೆ ಪಡೆದರೆ ಅದೆಷ್ಟೋ ಅಪರಾಧ ಕೃತ್ಯಗಳು ನಡೆಯುದಂತೆ ತಡೆಯಬಹುದು ಎಂದು ಅಲ್ಲಿನ ನಿವಾಸಿಗಳು ಅಭಿಪ್ರಾಯಪಟ್ಟಿದ್ದಾರೆ.


ಕಾರ್ತಿಕ್ ಹತ್ಯೆಗೆ ಸ್ಕೆಚ್ ರೆಡಿಯಾದ ಮೈಸೂರಿನ ವಿದ್ಯಾರಣ್ಯಪುರಂನ ಕನಕಗಿರಿ ಬಡಾವಣೆಯ ಆಂಗ್ಲ ಮಾಧ್ಯಮ ಶಾಲೆ ಬಳಿಯ ಖಾಲಿ ಜಾಗ.



ಕೆ.ಎಂ.ಮುನಿಗೋಪಾಲ್ ಸೆಸ್ಕ್ ಎಂಡಿ



ಮೈಸೂರು, ಮೇ 6– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್)ದ ವ್ಯವಸ್ಥಾಪಕ ನಿರ್ದೇಶಕರಾಗಿ(ಎಂಡಿ) ಕೆ.ಎಂ.ಮುನಿಗೋಪಾಲರಾಜು ಅವರನ್ನು ನೇಮಕಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಈ ಹಿಂದೆ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಜಿ.ಶೀಲಾ ಅವರು ಸೇವೆಯಿಂದ ನಿವೃತ್ತರಾದ ವೇಳೆ ನಿಗಮದ ತಾಂತ್ರಿಕ ನಿರ್ದೇಶಕರಾಗಿದ್ದ ಕೆ.ಎಂ.ಮುನಿಗೋಪಾಲರಾಜು ಅವರನ್ನು ಪ್ರಭಾರ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನಿಯೋಜಿಸಲಾಗಿತ್ತು. ಇದೀಗ ಇವರನ್ನೇ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನಿಯೋಜಿಸಿ ಇಂಧನ ಇಲಾಖೆ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ.

ಅಮರ ಮಧುರ ಪ್ರೇಮ ನಾಟಕ ಪ್ರದರ್ಶನ



ಮೈಸೂರು, ಮೇ 6–ಹೊಸ ವಿಚಾರ ಧಾರೆಯ ತಿಳಿ ನಗು ಹೊಮ್ಮಿಸುವ ನಾಟಕ 'ಅಮರ ಮಧುರ ಪ್ರೇಮ'. ಹುಬ್ಬಳ್ಳಿಯ ಗುರು ಇನ್ಸ್ಟಿಟ್ಯೂಟ್ ಅಭಿನಯಿಸುವ ನಾಟಕವನ್ನು ಹೇಮಂತ್ ಎಡಲಾಬಾದಕರ್ ಮರಾಠಿಯಲ್ಲಿ ರಚಿಸಿದ್ದು, ಕನ್ನಡಕ್ಕೆ ಡಾ.ಯಶವಂತ ಸರದೇಶಪಾಂಡೆ ಅನುವಾದಿಸಿ ನಿರ್ದೇಶಿಸಿದ್ದಾರೆ. ರಂಗದ ಮೇಲೆ ಜನಪ್ರಿಯ ತಾರಾ ಜೋಡಿ ವೀಣಾ–ಸುಂದರ್ ಹಾಗೂ ಯಶವಂತ ಸರದೇಶಪಾಂಡೆ ಅಭಿನಯಿಸಿದ್ದಾರೆ.

ಮೂವರು ಹಿರಿಯ ಅನುಭವಿ ಕಲಾವಿದರು ಪ್ರೇಕ್ಷಕರ ಮುಖದಲ್ಲಿ ನಗು ಉಕ್ಕಿಸುವುದರ ಜೊತೆಗೆ, ಸೀನಿಯರ್ ಸಿಂಗಲ್ ವ್ಯಕ್ತಿಗಳ ಜೀವನದ ಸೂಕ್ಷ್ಮ ಆಗುಹೋಗುಗಳನ್ನು ಬಿಚ್ಚಿಡುತ್ತ ಹೋಗುತ್ತದೆ. ಸಂಭಾಷಣೆಯಲ್ಲಿ ಚುರುಕುತನ, ಅಭಿನಯದಲ್ಲಿ ಗಾಂಭೀರ್ಯ, ತಿಳಿ ಹಾಸ್ಯ... ನಾಟಕವನ್ನು ಉತ್ತಮ ಪ್ರಸ್ತುತಿಯಾಗಿಸುತ್ತದೆ. ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಗ್ರೀನ್ ತಾರಾ ಬಾಗ್ಸ್, ಜಕ್ಕಾಲಿಸ್ ಫುಡ್ಸ್, ಅನ್ನಪೂರ್ಣ ಐ ಹಾಸ್ಪಿಟಲ್ ಮತ್ತು ರವೀಂದ್ರ ಜೋಶಿ ಕ್ರಿಯೇಷನ್ಸ್ ಸಂಯುಕ್ತವಾಗಿ ಈ ಪ್ರದರ್ಶನ ಆಯೋಜಿಸಿದ್ದು, ಸುಮಿತ್ರಾ ಅವರ ಸಹಯೋಗವಿದೆ.

ಮೇ 9ರಂದು, ಶುಕ್ರವಾರ ಸಂಜೆ 6:30ಕ್ಕೆ, ಮೈಸೂರಿನ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಕೆ.ವಾಸುದೇವಾಚಾರ ಸಭಾ ಭವನದಲ್ಲಿ ಈ ನಾಟಕ ಪ್ರದರ್ಶನವಿದೆ. ವಿವರ ಮತ್ತು ಪ್ರವೇಶ ಪತ್ರಗಳಿಗೆ ಮೊ. 95916 82548 ಸಂಪರ್ಕಿಸಬಹುದು.

ಮುಡಾ ಗುಂಪು ಮನೆ ಯೋಜನೆ ಕೈಬಿಡದಂತೆ ಎಸ್‌ಡಿಪಿಐ ಆಗ್ರಹ


ಮೈಸೂರು, ಮೇ.6(ಎಂಟಿವೈ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು ಕಳೆದ ವರ್ಷ ಜಾರಿಗೆ ತಂದಿದ್ದ ಗುಂಪು ಮನೆ ಯೋಜನೆಯನ್ನು ಕೈಬಿಡದಂತೆ ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್ ಖಾನ್ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗುಂಪು ಮನೆ ಯೋಜನೆಯಡಿ ಸಾವಿರಾರು ಮಂದಿ ಅರ್ಜಿ ಸಲ್ಲಿಸಿದ್ದು, ಸ್ವಂತ ಮನೆ ಸಿಗಬಹುದೆಂಬ ನಿರೀಕ್ಷೆಯಲ್ಲಿದ್ದಾರೆ. ಆದರೆ, ಮುಡಾ ಜಾರಿಗೊಳಿಸಲು ಮುಂದಾಗಿದ್ದ ಗುಂಪು ಮನೆ ಯೋಜನೆಯನ್ನು ಈಗ ಕೈಬಿಡಲಾಗಿದೆ ಎಂಬ ಮಾಹಿತಿ ಲಭ್ಯವಾಗಿದ್ದು, ಇದರಿಂದ ಸಾವಿರಾರು ಮಂದಿಗೆ ನಿರಾಸೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮುಡಾ ಈ ಹಿಂದೆ ಘೋಷಣೆ ಮಾಡಿದಂತೆ ಗುಂಪು ಮನೆ ಯೋಜನೆಯನ್ನು ಜಾರಿಗೊಳಿಸಿ, ಅರ್ಹ ಫಲಾನುಭವಿಗಳಿಗೆ ಮನೆ ಮಂಜೂರು ಮಾಡುವಂತೆ ಮನವಿ ಮಾಡಿದರು.

ಗುಂಪು ಮನೆ ಯೋಜನೆ ಪ್ರಕಟಣೆ ಬಳಿಕ ಸಾವಿರಾರು ಮಂದಿ ಕಷ್ಟಪಟ್ಟು ಹಣ ಹೊಂದಿಸಿ ಮುಡಾಕ್ಕೆ ಠೇವಣಿ ಕಟ್ಟಿದ್ದಾರೆ. ಇದು ಸಾವಿರಾರು ಕೋಟಿ ಯೋಜನೆಯಾಗಿದ್ದು, ಬಡಜನರಿಗೆ ನೆರವಾಗುವಂತದ್ದಾಗಿದೆ. ಆದರೆ ಈಗ ಕೈಬಿಟ್ಟಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಮೈಸೂರು ಮಹಾನಗರಪಾಲಿಕೆಯಲ್ಲಿ ಆಶ್ರಯ ಮನೆ ಯೋಜನೆ ಅಡಿಯಲ್ಲಿ 2021ರಿಂದಲೂ ಸುಮಾರು 80 ಸಾವಿರ ಮಂದಿಯಿಂದ ಹಣ ಕಟ್ಟಿಸಿಕೊಂಡಿದ್ದಾರೆ. ಆದರೆ ಇನ್ನೂ ಮನೆ ಅಥವಾ ನಿವೇಶನ ನೀಡಿಲ್ಲ. ಹೀಗಾಗಿ ಮುಡಾದ ಗುಂಪು ಮನೆ ಯೋಜನೆ, ಪಾಲಿಕೆಯ ಆಶ್ರಯ ಮನೆ, ನಿವೇಶನ ಯೋಜನೆಗಳಿಗೆ ಹಣ ಕಟ್ಟಿರುವವರು ತಮ್ಮ ಪಕ್ಷದ ಕಚೇರಿ ಸಂಪರ್ಕಿಸಬೇಕು. ಮುಂದಿನ ದಿನಗಳಲ್ಲಿ ಹೋರಾಟ ನಡೆಸುವುದಾಗಿ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಎಸ್‌ಡಿಪಿಐ ಪದಾಧಿಕಾರಿಗಳಾದ ಸುಹೇಲ್ ಆತಿಫ್, ತಬ್ರೇಜ್, ಎಸ್.ಸ್ವಾಮಿ ಇದ್ದರು.

ಹಲವೆಡೆ ವಿದ್ಯುತ್ ವ್ಯತ್ಯಯ



ಮೈಸೂರು: ಮೇ 7, 9 ಮತ್ತು 12ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ಗೊಲ್ಲನಬೀಡು 66/1ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜಿ.ಬಿ ಸರಗೂರು ಗ್ರಾಮ ಪಂಚಾಯಿತಿ, ಕ್ಯಾತನಹಳ್ಳಿ ಗ್ರಾಮ ಪಂಚಾಯಿತಿ ಮತ್ತು ಆಲನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಗಾರೆ ಕೆಲಸಗಾರ ಪುತ್ರಿಗೆ 622 ಅಂಕ



ಮೈಸೂರು, ಮೇ 6– ಗಾರೆ ಕೆಲಸ ಮಾಡುವವರ ಮಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 622 ಅಂಕ ಪಡೆದು ಉತ್ತಮ ಸಾಧನೆ ಮಾಡಿದ್ದಾಳೆ. ಮೈಸೂರಿನ ಶ್ರೀರಾಂಪುರದಲ್ಲಿರುವ ಬಿಜಿಎಸ್ ಬಾಲಜಗತ್ ಶಾಲೆಯ ವಿದ್ಯಾರ್ಥಿನಿ ಎಂ.ಪ್ರತಿಭಾ ಈ ಸಾಧನೆ ಮಾಡಿದ ವಿದ್ಯಾರ್ಥಿನಿ. ಈಕೆಯು ಗಾರೆ ಕೆಲಸಗಾರರಾದ ಮಹದೇವ (ನಾಗೇಶ) ಹಾಗೂ ಧನಲಕ್ಷ್ಮಿ ದಂಪತಿ ಪುತ್ರಿಯಾಗಿದ್ದಾರೆ.

ಎಸ್‌ಎಸ್‌ಎಲ್‌ಸಿಯಲ್ಲಿ ನಜಮ್ ಹುದಾ ರಾಜ್ಯಕ್ಕೆ 7ನೇ ಸ್ಥಾನ



ಮೈಸೂರು, ಮೇ 6– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರು ತಾಲೂಕು ತಾಂಡವಪುರ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿ ನಜಮ್ ಹುದಾ 625ಕ್ಕೆ 618 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ 7ನೇ ಸ್ಥಾನ ಪಡೆದಿದ್ದಾರೆ. ಗ್ರಾಮೀಣ ಪ್ರದೇಶದ ಈ ವಿದ್ಯಾರ್ಥಿಯ ಸಾಧನೆ ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ. ಜೊತೆಗೆ ಕನ್ನಡದಲ್ಲಿ 125ಕ್ಕೆ 124 ಅಂಕಗಳನ್ನು ಪಡೆಯುವ ಮೂಲಕ ಜಿಲ್ಲೆಯಲ್ಲಿ ಹಾಗೂ ರಾಜ್ಯದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯಾಗಿ ಹೊರಹೊಮ್ಮಿದ್ದಾರೆ. ಈಕೆ ಕಡಕೊಳ ಗ್ರಾಮದ ನಿವಾಸಿ ಜಮೀರ್ ಅಹಮದ್ ಅವರ ಪುತ್ರಿ.

ಮನಸ್ವಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ




ಮೈಸೂರು, ಮೇ 6– ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ನಗರ ಐಡಿಯಲ್ ಜಾವಾ ರೋಟರಿ ಶಾಲೆ ವಿದ್ಯಾರ್ಥಿನಿ ಯು.ಮನಸ್ವಿ 625ಕ್ಕೆ 609 ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಅಶೋಕಪುರಂ ನಿವಾಸಿ ಹಾಗೂ ನಗರಪಾಲಿಕೆ ವಲಯ ಕಚೇರಿ–2ರಲ್ಲಿ ಆಫೀಸ್ ಮ್ಯಾನೇಜರ್ ಆಗಿರುವ ಉಮೇಶ್ ಮತ್ತು ಪಿ.ಜಗದೀಶ್ವರಿ ದಂಪತಿ ಪುತ್ರಿ.

ದೃಷ್ಟಿದೋಷ, ಶ್ರವಣದೋಷವುಳ್ಳ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ಮೈಸೂರು, ಮೇ 6–ಎನ್‌ಎಬಿ ಅಂಧರ ಮತ್ತು ಕಿವುಡರ ಕೈಗಾರಿಕಾ ತರಬೇತಿ ಕೇಂದ್ರವು ಕೈಗಾರಿಕಾ ತರಬೇತಿಗಾಗಿ ದೃಷ್ಟಿದೋಷ, ಶ್ರವಣದೋಷವುಳ್ಳ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 16ರಿಂದ 25 ವರ್ಷಗಳ ವಯೋಮಿತಿಯಲ್ಲಿರುವ ಎಸ್‌ಎಸ್‌ಎಲ್‌ಸಿವರೆಗೆ ವಿದ್ಯಾಭ್ಯಾಸ ಮಾಡಿರುವ ಅಭ್ಯರ್ಥಿಗಳಿಗೆ ತರಬೇತಿ ಉಚಿತವಾಗಿರುತ್ತದೆ. 1 ವರ್ಷದ ಅವಧಿಯಲ್ಲಿ ಲೈಟ್ ಇಂಜಿನಿಯರಿಂಗ್, ಪ್ಲಾಸ್ಟಿಕ್ ಇಂಜೆಕ್ಷನ್ ಮೌಲ್ಡಿಂಗ್, ಬೇಸಿಕ್ ಎಲೆಕ್ಟ್ರಿಕಲ್ ನಾರಿನಿಂದ ಹಗ್ಗ ಮತ್ತು ಫುಟ್‌ರಗ್ ಮಾಡುವುದು, ರೀಕೇನಿಂಗ್, ಬೇಸಿಕ್ ಕಂಪ್ಯೂಟರ್ ವಿಷಯದಲ್ಲಿ ತರಬೇತಿ ನೀಡಲಾಗುತ್ತದೆ. ಆಸಕ್ತ ಅಭ್ಯರ್ಥಿಗಳು ದೂ. 0821–2514431, ಮೊ. 9449263784 ಅನ್ನು ಸಂಪರ್ಕಿಸಬಹುದು. ಕಚೇರಿ ವೇಳೆ : ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೆ. ಅರ್ಜಿ ಸಲ್ಲಿಸಲು ಜೂ.20 ಕಡೇ ದಿನಾಂಕವಾಗಿರುತ್ತದೆ.

ರೈತರ ಸಮಸ್ಯೆ ಅಧ್ಯಯನ ಕಾರ್ಯಾಗಾರ ನಡೆಸಿ

ರೈತರಿಂದ ಜಂಟಿ ಕೃಷಿ ನಿರ್ದೇಶಕ ಕೆ.ಎಚ್.ರವಿಗೆ ಒತ್ತಾಯ ಪತ್ರ ಸಲ್ಲಿಕೆ



ರೈತರ ಸಮಸ್ಯೆ ಪರಿಹಾರಕ್ಕೆ ತಾಲೂಕು ಮಟ್ಟದಲ್ಲಿ ಅಧ್ಯಯನ ಕಾರ್ಯಾಗಾರ ನಡೆಸುವಂತೆ ಆಗ್ರಹಿಸಿ ರಾಜ್ಯ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘ, ಜಂಟಿ ಕೃಷಿ ನಿರ್ದೇಶಕರಿಗೆ ಒತ್ತಾಯ ಪತ್ರ ಸಲ್ಲಿಸಲಾಯಿತು.

ಮೈಸೂರು, ಮೇ 6(ಜಿಎ)– ರೈತರ ಸಮಸ್ಯೆಗಳ ಪರಿಹಾರಕ್ಕೆ ತಾಲೂಕು ಮಟ್ಟದಲ್ಲಿ ಅಧ್ಯಯನ ಕಾರ್ಯಾಗಾರ ನಡೆಸುವಂತೆ ಆಗ್ರಹಿಸಿ ರಾಜ್ಯ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘ ವತಿಯಿಂದ ಕಾಡಾ ಕಚೇರಿಗೆ ಭೇಟಿ ನೀಡಿ, ಜಂಟಿ ಕೃಷಿ ನಿರ್ದೇಶಕ ಕೆ.ಎಚ್. ರವಿಗೆ ಒತ್ತಾಯ ಪತ್ರ ಸಲ್ಲಿಸಲಾಯಿತು.

ತಾಲೂಕು ಮಟ್ಟದಲ್ಲಿ ರೈತರಿಗೆ ಮಣ್ಣು ಪರೀಕ್ಷೆ, ರಸಗೊಬ್ಬರ, ಕೀಟನಾಶಕ ಮತ್ತು ಬಿತ್ತನೆ ಬೀಜ ಹಾಗೂ ನೀರು ಬಳಕೆ ಮಾಡಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಇಳುವರಿ ಪಡೆಯುವ ಬಗ್ಗೆ ಜಾಗೃತಿ ಮೂಡಿಸಲು ಕಾರ್ಯಾಗಾರ ನಡೆಸುವ ಬಗ್ಗೆ ಜಂಟಿ ನಿರ್ದೇಶಕರೊಟ್ಟಿಗೆ ಚರ್ಚಿಸಿ, ಮನವಿ ಮಾಡಿಕೊಂಡರು.

ರೈತರಿಗೆ ಆಧುನಿಕ ಕೃಷಿ ಮಾಡುವ ಬಗ್ಗೆ ಮಾಹಿತಿ ಕೊರತೆಯಿದ್ದು, ಕಡಿಮೆ ಖರ್ಚು ಮಾಡಿ ಅಧಿಕ ಇಳುವರಿ ಪಡೆಯುವ ಬಗ್ಗೆ ಜಾಗೃತಿ ಮೂಡಿಸಲು ಕಾರ್ಯಾಗಾರ ನಡೆಸಬೇಕು. ಮೈಸೂರು ಮುಖ್ಯಮಂತ್ರಿ ಸಿದ್ದರಾಮಯ್ಯರವರ ತವರು ಜಿಲ್ಲೆ ಹಾಗೂ ಸ್ವಕ್ಷೇತ್ರವಾದ್ದರಿಂದ ಮೊದಲು ಮೈಸೂರಿನಲ್ಲಿ ತಾಲೂಕು ಮಟ್ಟದ ಕಾರ್ಯಾಗಾರ ಪ್ರಾರಂಭ ಮಾಡಿದರೆ ಸರ್ಕಾರದ ಗಮನ ಸೆಳೆಯಬಹುದು ಎಂದು ಸಲಹೆ ನೀಡಿದರು.

ಕೃಷಿ ಪರಿಕರಗಳಾದ ರಸಗೊಬ್ಬರ, ಕೀಟನಾಶಕ ಮತ್ತು ಬಿತ್ತನೆ ಬೀಜ ಹಾಗೂ ನೀರು ಅತಿಯಾದ ಬಳಕೆಯಿಂದ ಮಣ್ಣು ಸತ್ವ ಕಳೆದುಕೊಂಡಿದ್ದು ಮಣ್ಣಿನ ಆರೋಗ್ಯ ರಕ್ಷಣೆ ಮಾಡಿ ಉತ್ತಮ ಬೆಳೆ ಬೆಳೆಯಲು ಜಾಗೃತಿಗೊಳಿಸಬೇಕು. ನಕಲಿ–ಕಳಪೆ ಬಿತ್ತನೆ ಬೀಜ, ರಸಗೊಬ್ಬರ, ನರ್ಸರಿ ಸಸಿಗಳು, ಕೀಟನಾಶಕಗಳನ್ನು ನಕಲಿ–ಕಳಪೆ ಮಾರಾಟ ಮಾಡುವವರಿಗೆ ಜಾಮೀನು ರಹಿತ ಕಠಿಣ ಜೈಲು ಶಿಕ್ಷೆ ವಿಧಿಸಬೇಕು. ರಸಗೊಬ್ಬರ, ಹನಿ ನೀರಾವರಿ ಉಪಕರಣಗಳು, ಟ್ರ್ಯಾಕ್ಟರ್, ಪವರ್ ಟಿಲ್ಲರ್ ಬಿಡಿಭಾಗಗಳ ಬೆಲೆಗಳು ಗಗನಕ್ಕೇರಿದ್ದು ಕಡಿವಾಣ ಹಾಕಲು ಕ್ರಮ ಕೈಗೊಳ್ಳಬೇಕು ಹಾಗೂ ಇವುಗಳ ಮೇಲಿನ ಜಿಎಸ್‌ಟಿ ತೆರಿಗೆ ರದ್ದುಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಟ್ರ್ಯಾಕ್ಟರ್, ಪವರ್ ಟಿಲ್ಲರ್ ಕೃಷಿ ಯಂತ್ರಗಳ ಮಾರಾಟ ಕೇಂದ್ರಗಳಲ್ಲಿ ಸರ್ಕಾರ ನಿಗದಿಪಡಿಸಿದ ದರವನ್ನು ಬಹಿರಂಗವಾಗಿ ನಾಮಫಲಕ ಹಾಕಬೇಕು. ರಸಗೊಬ್ಬರಗಳ ಜೊತೆ ಮೈಕ್ರೋ ಫುಡ್ ಲಿಂಕ್ ಮಾರಾಟಕ್ಕೆ ಒತ್ತಡ ಹೇರದಂತೆ ಕ್ರಮ ಕೈಗೊಳ್ಳಬೇಕು. ಕೃಷಿ ಪರಿಕರಗಳ ಅಂಗಡಿಗಳಲ್ಲಿ ನರ್ಸರಿ ಸಸಿಗಳನ್ನು ಮಾರಾಟ ಮಾಡಬಾರದು. ರಸಗೊಬ್ಬರ ಮಾರಾಟದ ಅಂಗಡಿ ಮುಂದೆ ಬೆಲೆಗಳ ನಾಮಫಲಕ ಕಡ್ಡಾಯವಾಗಿ ಹಾಕಲು ಕ್ರಮ ಕೈಗೊಳ್ಳಬೇಕು. ಪರಿಕರಗಳನ್ನು ಖರೀದಿ ಮಾಡಿದ ರೈತನಿಗೆ ಅಧಿಕೃತ ಬಿಲ್ ಕೊಡಬೇಕು ಹಾಗೂ ಬಿಲ್‌ನಲ್ಲಿ ಇಬ್ಬರು ಸಹಿ ಹಾಕಿರಬೇಕು ಎಂದು ಒತ್ತಾಯಿಸಿದರು.

ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಪ್ರತಿ ಮೂರು ತಿಂಗಳಿಗೊಮ್ಮೆ ರೈತರ ಕುಂದುಕೊರತೆಗಳ ಸಭೆ ನಡೆಸಿ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳಬೇಕು. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ರೈತರ ಕುಂದುಕೊರತೆಗಳ ಸಭೆ ನಡೆಸಿ ರೈತರು ಅಲೆದಾಡುವುದನ್ನು ತಪ್ಪಿಸಬೇಕು ಎಂದು ಒತ್ತಾಯ ಪತ್ರ ನೀಡಿದರು.

ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಬರಡನಪುರ ನಾಗರಾಜ್, ಮಾರ್ಬಳ್ಳಿ ನೀಲಕಂಠಪ್ಪ, ಲಕ್ಷ್ಮೀಪುರ ವೆಂಕಟೇಶ್, ಮಂಜುಳಾ, ಬನ್ನೂರು ಸೂರಿ, ವಾಜಮಂಗಲ ಮಹದೇವು, ಕೆಂಡಗಣ್ಣಪ್ಪ ಸ್ವಾಮಿ, ಪ್ರಭುಸ್ವಾಮಿ, ಕಾಟೂರು ನಾಗೇಶ್, ಗಿರೀಶ್, ಸಾತಗಳ್ಳಿ ಬಸವರಾಜ್, ಸಾತಗಳ್ಳಿ ಮಹೇಶ್, ಮಾರ್ಬಳ್ಳಿ ಬಸವರಾಜ್, ಶಿವಣ್ಣ, ಪಿ.ನಾಗೇಂದ್ರ ವಾಜಮಂಗಲ, ಜಯರಾಮ ವರಕೋಡು, ಶಿವಕುಮಾರ್, ಪ್ರಕಾಶ್, ಎನ್.ನಾಗೇಂದ್ರ, ಪ್ರಭಾಕರ್, ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ಯುವನಿಧಿ ಯೋಜನೆ ಸದುಪಯೋಗ ಪಡೆದುಕೊಳ್ಳಿ

ಮೈಸೂರು,ಮೇ6– ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಲ್ಲಿ ಒಂದಾದ ಯುವನಿಧಿ ಕಾರ್ಯಕ್ರಮವು ನಿರುದ್ಯೋಗ ಅಭ್ಯರ್ಥಿಗಳ ಆಶಾಕಿರಣವಾಗಿದ್ದು, ಈ ಯೋಜನೆಯಲ್ಲಿ ಪದವೀಧರರು ಹಾಗೂ ಡಿಪ್ಲೊಮದಾರರ ನಿರುದ್ಯೋಗ ಅಭ್ಯರ್ಥಿಗಳು 2023ರ ಸಾಲಿನಲ್ಲಿ ತೇರ್ಗಡೆಯಾದಂತಹ ಅಭ್ಯರ್ಥಿಗಳಿಗೆ ಯುವನಿಧಿ ಕಾರ್ಯಕ್ರಮದ ಅಡಿಯಲ್ಲಿ ಪದವೀಧರರಿಗೆ ಮಾಸಿಕ 3,000 ಹಾಗೂ ಡಿಪ್ಲೊಮಾದಾರರುಗಳಿಗೆ ಮಾಸಿಕ 1,500 ಗಳನ್ನು ಸರ್ಕಾರದ ವತಿಯಿಂದ ನೀಡುತ್ತಲಿದ್ದು, ಇದರ ಸದುಪಯೋಗವನ್ನು ಜಿಲ್ಲೆಯ ಸಮಸ್ತ ನಿರುದ್ಯೋಗ ಅಭ್ಯರ್ಥಿಗಳು ಪಡೆಯುವಂತೆ ಕೋರಿದೆ.

ಈಗಾಗಲೇ ಅರ್ಜಿ ಸಲ್ಲಿಸಿ ಯುವನಿಧಿ ಯೋಜನೆಯ ಹಣ ಪಡೆಯುತ್ತಿರುವ ಅಭ್ಯರ್ಥಿಗಳು ಯುವನಿಧಿ ಯೋಜನೆಯ ನಿರುದ್ಯೋಗ ಭತ್ಯೆ ಹಣ ಪಡೆಯಬೇಕಾದರೆ ಪ್ರತಿ ಮೂರು ತಿಂಗಳಿಗೊಮ್ಮೆ 25ನೇ ದಿನಾಂಕದೊಳಗೆ ಸ್ವಯಂ ಘೋಷಣೆ ಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ ಎಂದು ರಾಜ್ಯ ಸರ್ಕಾರ ತಿಳಿಸಿದೆ. ಅಭ್ಯರ್ಥಿಗಳು ಕಡ್ಡಾಯವಾಗಿ ಆಧಾರ್ ಜೋಡಣೆಯ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು. ಕರ್ನಾಟಕ ಸರ್ಕಾರದ ಸೇವಾ ಸಿಂಧು ವೆಬ್‌ಸೈಟ್ ಮೂಲಕ ಅಭ್ಯರ್ಥಿಗಳು ಸ್ವಯಂ ಘೋಷಣೆ ಮಾಡಿಕೊಳ್ಳಬೇಕು ಹಾಗೂ ಯುವನಿಧಿ ಪ್ರತಿ ಮೂರು ತಿಂಗಳಿಗೊಮ್ಮೆ ಸ್ವಯಂ ಘೋಷಣೆ ಕಡ್ಡಾಯವಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಸಹಾಯಕ ನಿರ್ದೇಶಕಿ ಡಿ.ಎಂ. ರಾಣಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೇ 10ರಂದು ಕಾವೇರಿ ಆಯುರ್ವೇದ ಆಸ್ಪತ್ರೆಯಿಂದ ಉಚಿತ ಆಯುರ್ವೇದ ವೈದ್ಯಕೀಯ ತಪಾಸಣಾ ಶಿಬಿರ



ಮೈಸೂರಿನ ಕಾವೇರಿ ಆಯುರ್ವೇದ ಆಸ್ಪತ್ರೆಯ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆ ಮುಖ್ಯಸ್ಥ ಡಾ.ಚಂದ್ರಶೇಖರ್ ಮಾತನಾಡಿದರು.

ಮೈಸೂರು,ಮೇ6(ಜಿಎ)–ಮೈಸೂರಿನ ದೇವೇಗೌಡ ವೃತ್ತದ ಕೆಬಿಎಲ್ ಲೇಔಟ್‌ನಲ್ಲಿರುವ (ಆಲನಹಳ್ಳಿ ಸಮೀಪ) ಕಾವೇರಿ ಆಯುರ್ವೇದ ಆಸ್ಪತ್ರೆ ವತಿಯಿಂದ ಮೇ10ರಂದು ಆಸ್ಪತ್ರೆ ಆವರಣದಲ್ಲಿ ಉಚಿತ ಆಯುರ್ವೇದ ವೈದ್ಯಕೀಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

ಆಸ್ಪತ್ರೆಯ ಮುಖ್ಯಸ್ಥ ಡಾ.ಚಂದ್ರಶೇಖರ್ ಕಾವೇರಿ ಆಯುರ್ವೇದ ಆಸ್ಪತ್ರೆ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಅಂದು ಬೆಳಗ್ಗೆ 9.30ರಿಂದ ಸಂಜೆ 4.30ರವರೆಗೆ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದ್ದು, ತಪಾಸಣೆಗೊಂಡು ಚಿಕಿತ್ಸೆ ಪಡೆಯುವ ಎಲ್ಲಾ ಫಲಾನುಭವಿಗಳಿಗೆ ಶೇ.50 ರಷ್ಟು ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡಲು ನಿರ್ಧರಿಸಲಾಗಿದೆ ಎಂದರು.

ಹಾಗೇ ಆಸ್ಪತ್ರೆಯ ಸುತ್ತ 2 ಕಿಮೀ ಸುತ್ತಳತೆಯ ಪರಿಧಿಯಲ್ಲಿ ವಾಸಿಸುವ ಜನತೆಯು ತಮ್ಮ ಆಧಾರ್ ಕಾರ್ಡ್ ಮುಂತಾದ ವಿಳಾಸದ ಗುರುತು ಪತ್ರವನ್ನು ಪ್ರಸ್ತುತಪಡಿಸಿ ಇನ್ನೂ ಹೆಚ್ಚಿನ ರಿಯಾಯಿತಿ ಪಡೆಯಬಹುದಾಗಿದೆ. ಆಸ್ಪತ್ರೆಯಲ್ಲಿ ಅನುಭವಿ ಆಯುರ್ವೇದ, ಯೋಗ ಹಾಗೂ ಫಿಜಿಯೋಥೆರಪಿ ತಜ್ಞ ವೈದ್ಯರ ಸೇವೆಗಳು ಲಭ್ಯವಿದೆ ಎಂದು ತಿಳಿಸಿದರು.

60 ಹಾಸಿಗೆಯುಳ್ಳ ಈ ಆಸ್ಪತ್ರೆಯು ಸುಸಜ್ಜಿತವಾಗಿದ್ದು, ಆಯುರ್ವೇದದ ಕಾಯಚಿಕಿತ್ಸಾ, ಪಂಚಕರ್ಮ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ ಪ್ರಸೂತಿ ಮತ್ತು ಸ್ತ್ರೀರೋಗ, ಕೌಮಾರ ಭೃತ್ಯ (ಮಕ್ಕಳ ವಿಭಾಗ), ನೇತ್ರ ಚಿಕಿತ್ಸಾ, ಇಎನ್‌ಟಿ ಮುಂತಾದ ವಿಭಾಗಗಳನ್ನು ಹೊಂದಿರುವುದೇ ಅಲ್ಲದೇ ಸುಸಜ್ಜಿತ ಪೆಥಾಲಜಿ ಲ್ಯಾಬ್ ಹಾಗೂ ಫಿಸಿಯೋಥೆರಪಿ ವಿಭಾಗಗಳನ್ನೂ ಹೊಂದಿದೆ. ಈ ನೂತನ ಆಸ್ಪತ್ರೆಯ ಪಂಚಕರ್ಮ ಚಿಕಿತ್ಸಾ ಕೊಠಡಿಗಳು ಶಸ್ತ್ರಚಿಕಿತ್ಸಾಗಾರ ಹಾಗೂ ಪ್ರಸೂತಿ ಗೃಹಗಳು ಅತ್ಯಾಧುನಿಕ ಉಪಕರಣಗಳನ್ನು ಹೊಂದಿದ್ದು, ಸಾರ್ವಜನಿಕರಿಗೆ ಚಿಕಿತ್ಸೆ ನೀಡುವುದಕ್ಕಾಗಿ ಸಜ್ಜುಗೊಂಡಿದೆ. ಈ ವ್ಯವಸ್ಥೆಯನ್ನು ಮೈಸೂರಿಗೆ ಪರಿಚಯಿಸುವುದರೊಟ್ಟಿಗೆ ಸಾರ್ವಜನಿಕರ ಉಪಯೋಗಕ್ಕಾಗಿ ಬೃಹತ್ ಉಚಿತ ವೈದ್ಯಕೀಯ ತಪಾಸಣಾ ಶಿಬಿರವನ್ನು ಕೂಡ ಹಮ್ಮಿಕೊಳ್ಳಲಾಗಿದೆ ಹೆಚ್ಚಿನ ಮಾಹಿತಿಗಾಗಿ 9731799317 ಸಂಪರ್ಕಿಸಿ ಎಂದರು.

ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ನಿರ್ದೇಶಕರಾದ ಡಾ.ಎನ್.ಕೃಷ್ಣ ಪ್ರಸಾದ್, ವೈದ್ಯಕೀಯ ಅಧೀಕ್ಷಕಿ ಡಾ.ಪೂರ್ಣಿಮ, ಕಾವೇರಿ ಆಯುರ್ವೇದ ಕಾಲೇಜಿನ ಪ್ರಾಂಶುಪಾಲ ಡಾ.ರಾಮಕೃಷ್ಣ ನೇಸರ್ಗಿ ಉಪಸ್ಥಿತರಿದ್ದರು.

ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ



ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಶ್ರೀ ಕೃಷ್ಣ ಟ್ರಸ್ಟ್, ಶ್ರೀ ಕೃಷ್ಣ ಮಿತ್ರ ಮಂಡಳಿ ವತಿಯಿಂದ ಸಂಧ್ಯಾವಂದನೆ ಆಯೋಜಿಸಲಾಗಿತ್ತು.

ಮೈಸೂರು, ಮೇ 6– ಬಾಲ್ಯದಲ್ಲಿಯೇ ಮಕ್ಕಳಿಗೆ ಧಾರ್ಮಿಕತೆ ವಿಧಿ ವಿಧಾನಗಳನ್ನು ತಿಳಿಸಿಕೊಟ್ಟು ಅವರನ್ನು ಸಮಾಜದಲ್ಲಿ ಸಂಸ್ಕಾರವಂತರನಾಗಿಸುವ ಕರ್ತವ್ಯ ಹೆತ್ತವರದ್ದಾಗಿದೆ ಎಂದು ಕಂಚಿ ಕಾಮಕೋಟಿ ಪೀಠದ ವಿದ್ವಾನ್ ಚಂದ್ರಶೇಖರ್ ಭಟ್ ಹೇಳಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಶ್ರೀ ಕೃಷ್ಣ ಟ್ರಸ್ಟ್ ಹಾಗೂ ಶ್ರೀ ಕೃಷ್ಣ ಮಿತ್ರ ಮಂಡಳಿ ವತಿಯಿಂದ ಆಯೋಜಿಸಿದ್ದ 7 ವರ್ಷದಿಂದ 14 ವರ್ಷದ ಬಾಲಕ ಬಾಲಕಿಯರಿಗೆ ಸಂಧ್ಯಾ ವಂದನೆ, ದೇವರ ನಾಮ, ಶ್ಲೋಕಗಳು, ಭಜನೆ, ನೀತಿ ಕಥೆ ಹಾಗೂ ಇನ್ನಿತರ ತರಗತಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪರಮಹಂಸ ಯೋಗ ಅಕಾಡೆಮಿ ಅಧ್ಯಕ್ಷ ಶಿವಪ್ರಕಾಶ್, ಶ್ರೀ ಕೃಷ್ಣ ಟ್ರಸ್ಟ್ ಉಪಾಧ್ಯಕ್ಷ ರವಿಶಾಸ್ತ್ರಿ ಚಂದ್ರಶೇಖರ್, ಶ್ರೀವತ್ಸ ಶ್ರೀಕಾಂತ್ ಆಚಾರ್, ಸುರೇಶ್ ಆಚಾರ್, ಮಂಗಳ ಇನ್ನಿತರರು ಈ ವೇಳೆ ಹಾಜರಿದ್ದರು.

ಬುದ್ಧ ಪೂರ್ಣಿಮೆ: ಮಾಂಸ ಮಾರಾಟ ನಿಷೇಧ

ಮೈಸೂರು,ಮೇ 6– ಮೇ 12ರಂದು ಬುದ್ಧ ಪೂರ್ಣಿಮೆಯ ಪ್ರಯುಕ್ತ ಮಹಾನಗರ ಪಾಲಿಕೆಗೆ ಸೇರಿದ ಕುರಿ, ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ಮುಚ್ಚಬೇಕು. ಈ ದಿನ(ಕುರಿ/ಮೇಕೆ, ಕೋಳಿ ಮಾಂಸ, ಹಂದಿ ಮಾಂಸ, ಮೀನು) ವ್ಯಾಪಾರವನ್ನು ಮೈಸೂರು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿರುತ್ತದೆ ಎಂದು ಪಾಲಿಕೆ ಆರೋಗ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

07.05.2025 ಬುಧವಾರ, ಮಳೆ ನಕ್ಷತ್ರ: ಭರಣಿ 27.04.2025ರಿಂದ 10.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ–2025 ಮತ್ತು ರಾಜಗೋಪುರಕ್ಕೆ ಭೂಮಿಪೂಜೆ, ಬೆಳಗ್ಗೆ 6ಕ್ಕೆ ರಥಾಂಗ ಹೋಮ, ರಥಸ್ನಪನ, ಯಾತ್ರಾದಾನ, ಮಂಟಪೋತ್ಸವ ಆಳ್ವಾರ್ ಕಲಾಭವನದಲ್ಲಿ, ಬೆಳಗ್ಗೆ 7.15ಕ್ಕೆ ದಿವ್ಯರಥಾರೋಹಣ, 8.15ಕ್ಕೆ ಗೋಕುಲಂ 3ನೇ ಹಂತದ ರಸ್ತೆಗಳಲ್ಲಿ ರಥೋತ್ಸವ, ಸಂಜೆ 6ಕ್ಕೆ ಚತುಸ್ಥಾನಾರ್ಚನೆ–ನಿತ್ಯಹೋಮ, ಶಾಂತ್ಯೋತ್ಸವ, ಸ್ಥಳ: ದೇವಸ್ಥಾನದ ಪ್ರಾಂಗಣ, 3ನೇ ಹಂತ, ಗೋಕುಲಂ.

■ **ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ :** ಕರ್ನಾಟಕ ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರರ ಜಯಂತಿ, ಉದ್ಘಾಟನೆ : ಕಾಲೇಜು ಶಿಕ್ಷಣ ಇಲಾಖೆ ವಿಶ್ರಾಂತ ಜಂಟಿ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಮುಖ್ಯ ಭಾಷಣ : ಸಂಸ್ಕೃತಿ ಚಿಂತಕ ಶಂಕರ ದೇವನೂರು, ಮುಖ್ಯ ಅತಿಥಿಗಳು : ಮೈಸೂರು ವಿವಿ ಹಣಕಾಸು ಅಧಿಕಾರಿ ಶ್ರೀಮತಿ ರೇಖಾ, ಅಧ್ಯಕ್ಷತೆ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಸ್ಥಳ: ಕುವೆಂಪು ಸಭಾಂಗಣ, ಪ್ರಸಾರಾಂಗ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ :** ಕರ್ನಾಟಕ ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರರ ಜಯಂತಿ ಅಂಗವಾಗಿ ರಾಷ್ಟ್ರೀಯ ವಿಚಾರ ಸಂಕಿರಣ, ವಿಷಯ : ವಚನಗಳಲ್ಲಿ ವ್ಯಕ್ತವಾದ ಪುರಾಣ ಶಾಸ್ತ್ರಗಳ ಗ್ರಹಿಕಾ ವಿಧಾನ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಸಂಸ್ಕೃತಿ ಚಿಂತಕ ಪ್ರೊ. ಬಸವರಾಜ ಕಲ್ಗುಡಿ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ಎನ್.ಕೆ. ಲೋಲಾಕ್ಷಿ, ಪ್ರಾಸ್ತಾವಿಕ ನುಡಿ : ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಪ್ರೊ. ಅರವಿಂದ ಮಾಲಗತ್ತಿ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ :** ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಪದಾಧಿಕಾರಿಗಳಿಗೆ ಅಭಿನಂದನಾ ಸಮಾರಂಭ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನೂತನ ಸದಸ್ಯತ್ವ ಪಡೆದ ನೂತನ ಸದಸ್ಯರಿಗೆ ಗುರುತಿನ ಚೀಟಿ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಮೇಲುಕೋಟೆ ವಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಯೋಗ ನರಸಿಂಹಸ್ವಾಮಿ ದೇವಸ್ಥಾನದ ಆಡಳಿತ ಅಧಿಕಾರಿ ಶ್ರೀನಿವಾಸ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಕೆ.ಆರ್. ಮೋಹನ್ ಕುಮಾರ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಆದರ್ಶ ಸೇವಾ ಸಂಘದ ಅಧ್ಯಕ್ಷ ಜಿ.ಆರ್. ನಾಗರಾಜ್, ಹಿರಿಯ ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್. ಸತ್ಯನಾರಾಯಣ್, ವಿಪ್ರ ಪ್ರೊಫೆಷನಲ್ ಅಧ್ಯಕ್ಷ ಶ್ರೀಹರಿ, ಹೋಟೆಲ್ ಮಾಲೀಕರ ಸಂಘದ ರಾಜ್ಯ ಉಪಾಧ್ಯಕ್ಷ ರವಿಶಾಸ್ತ್ರಿ, ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ, ಸಂಜೆ 5.30ಕ್ಕೆ.

■ **ರೋಟರಿ ಮೈಸೂರು ಮಿಡ್‌ಟೌನ್, ಜೀಯಸ್ ಇನ್ಸ್ಟಿಟ್ಯೂಟ್ :** ರೋಟರಿ ಮಿಡ್‌ಟೌನ್ ಜೀಯಸ್ ಸಿಎಸ್‌ಆರ್ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್ ಎಕ್ಸಿಕ್ಯೂಟಿವ್ ಡೈರೆಕ್ಟರ್ ನಾಗರಾಜ ಗರ್ಗೇಶ್ವರಿ, ಜೀಯಸ್ ಸಿಎಸ್‌ಆರ್ ಪ್ರಶಸ್ತಿಗೆ ಭಾಜನರು : ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಎಂಡಿ ಮತ್ತು ಸಿಇಓ ಡಿ. ಸುಧನ್ವ, ಸ್ಥಳ: ಐಬಿಸ್ ಸ್ಟೈಲ್ಸ್ ಮೈಸೂರು, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ರಂಗ ದಿಗ್ಗಜರು ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಮರೆಯಬಾರದ ಮಹನೀಯರು, ಲೇಖನ–ಎಸ್.ರಾಮನಾಥ್, ನಿರೂಪಣೆ–ಉಮೇಶ್. ಎಸ್.ಎಸ್., ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಚಿತ್ರಗೀತೆಗಳು, 9.00 ನಂದನ, ಮನೋನಂದನ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, ಪ್ರಾಯೋಜಕರು–ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ, ಮೈಸೂರು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ :ತ್ಯಾಗರಾಜು. ಎಂ.ಸಂತೂರ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ **ಮಧ್ಯಾಹ್ನ:** 12.05 ವನಿತಾವಿಹಾರ, 12.35 ದೇವರನಾಮ–ಎನ್. ಶ್ರೀನಾಥ್, 12.45 ಜನಪದ ಸಂಗೀತ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಪಿ. ರಮಾ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ :ಜಿ.ಎನ್. ಬಾಲಸುಬ್ರಹ್ಮಣ್ಯಂ– ಹಾಡುಗಾರಿಕೆ, 4.00 ಮಹಿಳಾರಂಗ–ಬದುಕು ಜಟಕಾಬಂಡಿ, ಭಾಗವಹಿಸುವವರು –ಸ್ವಯಂ ಉದ್ಯೋಗ ನಿರತ ಉಮಾ ಮತ್ತು ಮನೆಯ ಸದಸ್ಯರು, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 4.45 ಹಿಂದಿ ಪಾಠ, ಪ್ರಸ್ತುತಿ – ಶಾಂತಾ. ಡಿ. ಕಿಣಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ, ಮೇವು ಮೆಲುಕು–ಮೇವಿನ ಬೆಳೆಗಳ ಬೇಸಾಯ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಬಹುವಾರ್ಷಿಕ ಮೇವಿನ ಬೆಳೆಗಳ ಬೇಸಾಯ ಈ ಕುರಿತು ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ. ಪಿ. ಮಹದೇವು ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ನಕ್ಷತ್ರ ಲೋಕ–ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ, ಭಾಗವಹಿಸುವವರು–ಹೆಸರಾಂತ ಸಂಗೀತ ನಿರ್ದೇಶಕ ಮನೋಮೂರ್ತಿ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್ ಮತ್ತು ಶ್ರೀಮಾನ್. ಎಸ್., 9.30 ಕ್ರೀಡಾಲೋಕ, 10.00 ನಾಟಕ–ಗದಾಯುದ್ಧ–ರಂಗನಾಟಕದ ಬಾನುಲಿ ರೂಪ, ಪ್ರಸ್ತುತಿ– ಮಾಂಡವ್ಯ ರಂಗಕಲಾ ಟ್ರಸ್ಟಿನ ಕಲಾವಿದರು, ಮಂಡ್ಯ, 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

ಭಾರತ-ಪಾಕ್ ಯುದ್ಧ ಕಾರ್ಮೋಡ ಹಿನ್ನೆಲೆ

ಇಂದು ರಾಜ್ಯದಲ್ಲಿ ಅಣಕು ಕವಾಯತು

● ಬೆಂಗಳೂರಿನ 2, ಕಾರವಾರ, ರಾಯಚೂರಿನಲ್ಲಿ ಮಾಕ್ ಡ್ರಿಲ್ ● ಶತ್ರುಗಳ ಗುರಿಯಾಗಿರುವ ಸ್ಥಳಗಳ ರಕ್ಷಣೆ; ಜನರ ಸುರಕ್ಷತೆ ಅರಿವು

ಬೆಂಗಳೂರು, ಮೇ 6(ಕೆಎಂಶಿ)- ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತ-ಪಾಕಿಸ್ತಾನ ನಡುವೆ ಯುದ್ಧದ ಕಾರ್ಮೋಡ ದಟ್ಟವಾಗುತ್ತಿದ್ದಂತೆ ನಾಳೆ ಕರ್ನಾಟಕದಾದ್ಯಂತ ಅಣಕು ಕವಾಯತು (ಮಾಕ್ ಡ್ರಿಲ್) ನಡೆಯಲಿದೆ.

ಕೇಂದ್ರ ಗೃಹ ಸಚಿವಾಲಯದ ಆದೇಶದ ಮೇರೆಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಬೆಂಗಳೂರಿನ ಎರಡು, ಕಾರವಾರ, ರಾಯಚೂರು ಒಟ್ಟು ನಾಲ್ಕು ಕೇಂದ್ರದಲ್ಲಿ ಮಾಕ್ ಡ್ರಿಲ್ ನಡೆಯಲಿದೆ.

ಅಲ್ಲದೆ, ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸಂಜೆ 4 ಗಂಟೆಗೆ ಸೈರನ್ ಕೂಗಿಸುವ ಮೂಲಕ ಯುದ್ಧ ನಡೆದರೆ ಹೇಗೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕೆಂಬುದರ ಬಗ್ಗೆ ಸಾರ್ವಜನಿಕರಿಗೆ ಪೊಲೀಸ್ ಹಾಗೂ ಅಗ್ನಿಶಾಮಕ ದಳ ಮುನ್ಸೂಚನೆ ನೀಡಲಿವೆ.

ರಾಜಧಾನಿಯ 32 ಅಗ್ನಿಶಾಮಕ ಠಾಣೆಯಲ್ಲಿ ಸೈರನ್ ಕೂಗಿದರೆ, ಕೋಲಾರ ಹಾಗೂ ಬನ್ನೇರುಘಟ್ಟ ರಸ್ತೆಯ ಬಳಿ ಮಾಕ್ ಡ್ರಿಲ್ ನಡೆಯಲಿದೆ. ಸಿ ಬರ್ಡ್ ನೌಕ ನೆಲೆಯ ಉತ್ತರ ಕನ್ನಡದ ಕಾರವಾರ ಹಾಗೂ ವಿದ್ಯುತ್ ಸ್ಥಾವರದ ಕೇಂದ್ರ ಬಿಂದುವಾಗಿರುವ ರಾಯಚೂರಿನಲ್ಲಿ ಅಣಕು ಕವಾಯತು ನಡೆಯಲಿದೆ. ಇದರ ಮೂಲಕ ಯುದ್ಧದ ಸಿದ್ಧತೆಯನ್ನು ಪರಿಶೀಲಿಸಲಾಗುತ್ತಿದೆ.



ಸಾಂದರ್ಭಿಕ ಚಿತ್ರ

ಮಾಕ್ ಡ್ರಿಲ್‌ಗೆ ಆಪರೇಷನ್ ಅಭ್ಯಾಸ ಎಂದು ಹೆಸರಿಡಲಾಗಿದ್ದು, ಒಂದು ವಾರ ಕಾಲ ನಿರಂತರವಾಗಿ ನಡೆಸಲು ರಾಜ್ಯ ಪೊಲೀಸ್ ಮಹಾನಿರ್ದೇಶಕರು ತೀರ್ಮಾನಿಸಿದ್ದಾರೆ.

ಅಗ್ನಿಶಾಮಕ ದಳ ಹಾಗೂ ಪೊಲೀಸ್ ಠಾಣೆಗಳ ಮೇಲೆ ಸೈರನ್‌ಗಳ ಅಳವಡಿಕೆ ಕಾರ್ಯ ಪ್ರಾರಂಭಗೊಂಡಿದೆ. ಇದು ಮೂರು ಕಿಲೋ ಮೀಟರ್ ವ್ಯಾಪ್ತಿಯ ತನಕ ಮೊಳಗಲಿದೆ.

ಗೃಹ ಸಚಿವಾಲಯ ಹೊರಡಿಸಿರುವ ಆದೇಶದ ಪ್ರಕಾರ ಭದ್ರತಾ ಬೆದರಿಕೆಗಳಿಗೆ ಗುರಿಯಾಗಬಹುದಾದ ಪ್ರದೇಶಗಳಿಗೆ ರಕ್ಷಣೆ ನೀಡುವುದು ಹಾಗೂ ಒಂದು ವೇಳೆ ಅವಘಡ ನಡೆದಲ್ಲಿ ಯಾವ ರೀತಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು ಎಂಬ ಬಗ್ಗೆ ಮಾಹಿತಿ ನೀಡಿದೆ.

ಮಾಕ್ ಡ್ರಿಲ್‌ನಲ್ಲಿ ನಾಗರಿಕ ರಕ್ಷಣಾ ವಾರ್ಡನ್‌ಗಳು, ಗೃಹ ರಕ್ಷಕ ಸಿಬ್ಬಂದಿ, ಎನ್‌ಸಿಸಿ, ಎನ್‌ವೈಕೆಎಸ್, ಎನ್‌ಎಸ್‌ಎಸ್‌ಗಳಂತಹ ಸಂಸ್ಥೆಗಳ ಸ್ವಯಂ ಸೇವಕರು ಭಾಗವಹಿಸಲಿದ್ದಾರೆ.

ವೈಮಾನಿಕ ಕಣ್ಗಾವಲಿನಿಂದ ಮರೆಮಾಚುವಿಕೆಯನ್ನು ಅನುಸರಿಸಲು ವಿದ್ಯುತ್ ಸ್ಥಾವರಗಳು, ಮಿಲಿಟರಿ ಕೇಂದ್ರಗಳು, ಪ್ರಮುಖ ಬೃಹತ್ ಕೈಗಾರಿಕೆಗಳು ಹಾಗೂ ರಕ್ಷಣಾ ಉತ್ಪಾದನಾ ಕೇಂದ್ರಗಳಿಗೆ ಸೂಚಿಸಲಾಗಿದೆ.

ಕೇಂದ್ರ ಗೃಹ ಸಚಿವಾಲಯ ನಿನ್ನೆ ಹೊರಡಿಸಿರುವ ಆದೇಶದಂತೆ ವಾಯುದಾಳಿಯ ಸೈರನ್ ವ್ಯವಸ್ಥೆ ಇರುವಂತೆ ನೋಡಿಕೊಳ್ಳಬೇಕು ಮತ್ತು ಪ್ರತಿಕೂಲ ದಾಳಿಯ ಸಂದರ್ಭದಲ್ಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಪರಿಣಾಮಕಾರಿ ರಕ್ಷಣಾ ಅಂಶಗಳ ಕುರಿತು ತರಬೇತಿ ನೀಡುವಂತೆ ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ.

ಪ್ರತಿಕೂಲ ದಾಳಿಯ ಸಂದರ್ಭದಲ್ಲಿ ಸಿದ್ಧತೆಯನ್ನು ಪರೀಕ್ಷಿಸಲು ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಹೆಚ್ಚಿಸಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಬೇಕು. ಪ್ರಧಾನಿ ನರೇಂದ್ರ ಮೋದಿ ಅವರು, ರಕ್ಷಣಾ ಪಡೆಗಳ ಪ್ರಮುಖರೊಟ್ಟಿಗೆ ಚರ್ಚೆ ಮಾಡಿ ಮುಗಿಸುತ್ತಿದ್ದಂತೆ ಕೇಂದ್ರ ಗೃಹ ಸಚಿವರು ಯುದ್ಧದ ಮುನ್ಸೂಚನೆಯನ್ನು ರಾಜ್ಯ ಸರ್ಕಾರಗಳಿಗೆ ನೀಡಿ, ಎಚ್ಚರಿಕೆ ವಹಿಸುವಂತೆ ಆದೇಶ ಮಾಡಿದ್ದಾರೆ.

ಪಾಕಿಸ್ತಾನ ಸಂಬಂಧ ಕೇಂದ್ರದ ನಿರ್ಧಾರಕ್ಕೆ ರಾಜ್ಯದ ಬೆಂಬಲ

ಬೆಂಗಳೂರು, ಮೇ 6(ಕೆಎಂಶಿ)-ಪಾಕಿಸ್ತಾನದ ವಿಷಯದಲ್ಲಿ ಕೇಂದ್ರ ಸರ್ಕಾರ ಏನೇ ನಿರ್ಣಯ ಕೈಗೊಂಡರೂ ರಾಜ್ಯ ಸರ್ಕಾರ ತನ್ನ ಬೆಂಬಲ ನೀಡಲಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ ರಕ್ಷಣೆ ವಿಷಯದಲ್ಲಿ ಕೇಂದ್ರ ಕೆಲವು ಮಹತ್ವದ ತೀರ್ಮಾನ ಕೈಗೊಳ್ಳುತ್ತದೆ. ಅವರು ಯಾವುದೇ ನಿರ್ಣಯ ಕೈಗೊಂಡರೂ ಅದಕ್ಕೆ ನಮ್ಮ ಬೆಂಬಲವಿದೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಅಧಿನಾಯಕ ರಾಹುಲ್‌ಗಾಂಧಿ, ಕೇಂದ್ರಕ್ಕೆ ಬೆಂಬಲ ನೀಡುವ ವಿಷಯವನ್ನು ಈಗಾಗಲೇ ತಿಳಿಸಿದ್ದಾರೆ. ಭಯೋತ್ಪಾದನೆ ವಿಷಯದಲ್ಲಿ ಪಾಕಿಸ್ತಾನ ಬೆತ್ತಲಾಗಿದೆ. ಇಡೀ ರಾಷ್ಟ್ರ ಈ ವಿಷಯದಲ್ಲಿ ನಾವು ಒಂದಾಗಿದ್ದೇವೆ ಎಂಬುದನ್ನು ಸಾಬೀತುಪಡಿಸಿದೆ. ಜನರ ಮತ್ತು ದೇಶದ ರಕ್ಷಣೆಗೆ ದೇಶದ 140 ಕೋಟಿ ಜನರು ಕೈಜೋಡಿಸುತ್ತಾರೆ. ಅನಿವಾರ್ಯವಾಗಿ ಯುದ್ಧ ನಡೆದಿದ್ದೇ ಆದಲ್ಲಿ ಕೇಂದ್ರದ ಮಾರ್ಗಸೂಚಿಗಳನ್ನು ರಾಜ್ಯ ಸರ್ಕಾರ ಚಾಚು ತಪ್ಪದೇ ಮಾಡುವುದಲ್ಲದೆ, ನಮ್ಮ ಜನರ ರಕ್ಷಣೆಗೆ ಎಲ್ಲಾ ಕ್ರಮ ಕೈಗೊಳ್ಳುತ್ತೇವೆ ಎಂದರು.

ಮಾತೃಮಂಡಲಿ ಶಾಲೆಗೆ ಉತ್ತಮ ಫಲಿತಾಂಶ

ಮೈಸೂರು, ಮೇ 6- ಮೈಸೂರಿನ ವಿವಿ ಮೊಹಲ್ಲಾದಲ್ಲಿರುವ ಮಾತೃ ಮಂಡಲಿ ಪ್ರೌಢಶಾಲೆಗೆ ಈ ಬಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಫಲಿತಾಂಶ ಬಂದಿದೆ.



ಸುವಿನ್

ಇಂಗ್ಲಿಷ್ ಮಾಧ್ಯಮದಲ್ಲಿ ಶೇ.94 ಹಾಗೂ ಕನ್ನಡ ಮಾಧ್ಯಮದಲ್ಲಿ ಶೇ.84ರಷ್ಟು ಫಲಿತಾಂಶ ದೊರೆತಿದೆ. ವಿ.ಸುವಿನ್(ಶೇ.91), ಎಸ್.ರಮಾನಂದ(ಶೇ.90) ಸೇರಿದಂತೆ ಹತ್ತು ವಿದ್ಯಾರ್ಥಿಗಳು ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ್ದು, 23 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಇವರನ್ನು ಶಾಲೆ ಶಾಲೆಯ ಆಡಳಿತ ಮಂಡಳಿ ಅಭಿನಂದಿಸಿದೆ.



ರಮಾನಂದ

INSTALL ROOF TOP SOLAR
@
Zero cost
NO UPFRONT
INVESTMENT
For
LARGE AND MEDIUM INDUSTRIES
HOSPITAL, HOTELS, RICE MILL ETC
Contact : 9019914411

HARI VIDYALAYA
CA-2, Southern Railway Layout,
Bogadi, Mysuru- 570026
WANTED
• Kindergarten Teacher
Graduation with good Spoken English
• IT Faculty to Teach AI Related Topics
BCA, MCA, MSc / BE
Send your resume to:
info@harividyalaya.in
Call :
94498 09181 / 91410 54732

ಹಸಿರು ನಮ್ಮ ಉಸಿರು

ಸಾರ್ವಜನಿಕ ತಿಳುವಳಿಕೆ

ನನ್ನ ಕಕ್ಷಿದಾರರಾದ, ಶ್ರೀ ಮ್ಯಾಥ್ಯೂ ಕೆ.ಎಂ.ಕೆ. ಬಿನ್ ಟಿ.ಕೆ.ಮ್ಯಾಥ್ಯೂ, ಈ ಕೆಳಗೆ ಅನುಸೂಚಿಯಲ್ಲಿ ವಿವರಿಸಿರುವ ಸ್ವತ್ತಿನ ಮಾಲೀಕರಾದ, ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ತಾಂಡ್ಯ ಇಂಡಸ್ಟ್ರಿಯಲ್ ಏರಿಯಾ, ನಂ.15-ಪಿ-2, ಮೆ॥ ವೋಲ್ಕರ್ಟ್ ಮ್ಯಾಗ್ನಸೈಟ್, ಇವರ ಪರವಾಗಿ ಇವರ ಮಾಲೀಕರಾದ ಮಿಸ್ಟರ್ ಇಬ್ರಾಹಿಂ ಬಿ.ಎಂ. ರವರಿಂದ ಅನುಸೂಚಿಯಲ್ಲಿ ವಿವರಿಸಿರುವ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಇಚ್ಚಿಸಿರುತ್ತಾರೆ. ಆದ್ದರಿಂದ ಅನುಸೂಚಿ ಸ್ವತ್ತಿನ ಸಂಬಂಧವಾಗಿ ಬೇರೆಯಾರಾದರು ಯಾವುದೇ ರೀತಿಯ ಹಕ್ಕು, ಆಸಕ್ತಿ, ಸ್ವಾಮ್ಯ ಅಥವಾ ಕ್ಲೇಮನ್ನು ಹೊಂದಿದ್ದಲ್ಲಿ ಈ ತಿಳುವಳಿಕೆಯು ಪ್ರಕಟಣೆಯಾದ 7 (ಏಳು) ದಿನಗಳೊಳಗಾಗಿ ತಮ್ಮ ತಕರಾರನ್ನು ಲಿಖಿತವಾಗಿ ದಾಖಲೆಗಳೊಂದಿಗೆ ಈ ಕೆಳಕಂಡ ವಕೀಲರಿಗೆ ನೀಡತಕ್ಕದ್ದು, ಇಲ್ಲದಿದ್ದ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಖರೀದಿಸಲು ಯಾವುದೇ ತಂಟೆ ತಕರಾರು ಇಲ್ಲವೆಂದು ಪರಿಗಣಿಸಿ ಅನುಸೂಚಿ ಸ್ವತ್ತನ್ನು ಖರೀದಿಸುತ್ತಾರೆ.

ಅನುಸೂಚಿ

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ತಾಂಡವಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ.152 ರಲ್ಲಿ ನಿರ್ಮಿಸಿರುವ, ತಾಂಡ್ಯ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಪ್ಲಾಟ್ ನಂ.15-ಪಿ-2, ಯುನಿಕ್ ಸ್ವತ್ತಿನ ಸಂಖ್ಯೆ 152200503103020259 ಮತ್ತು ಸ್ವತ್ತಿನ ಸಂಖ್ಯೆ 400/294 (ತಾಂಡವಪುರ ಗ್ರಾಮ ಪಂಚಾಯ್ತಿ, ತಾಂಡವಪುರ., ರವರು ನೀಡಿರುವ ಫಾರಂ-9 ಮತ್ತು 11ಎ ರ ಪ್ರಕಾರ), ಒಟ್ಟು ವಿಸ್ತೀರ್ಣ 4925.00 ಚದರ ಮೀಟರ್‌ಗಳುಳ್ಳ ಪೂರ್ತಾ ಜಾಗ ಮತ್ತು ಇದರಲ್ಲಿ ಕಟ್ಟಿರುವ 811.00 ಚದರ ಮೀಟರ್ ಗಳುಳ್ಳ ಎಸಿಸಿ ಶೀಟಿನ ಕಟ್ಟಡ ಮತ್ತು 62 ಹೆಚ್.ಪಿ. ವಿದ್ಯುತ್ ಸೌಕರ್ಯವನ್ನು ಹೊಂದಿರುವ ಕಟ್ಟಡ. ಪೂರ್ತಾ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ಖಾಸಗಿ ಸ್ವತ್ತು, ಪಶ್ಚಿಮಕ್ಕೆ : ಕೆಐಎಡಿಬಿ ರೋಡ್, ಉತ್ತರಕ್ಕೆ : ಪ್ಲಾಟ್ ನಂಬರ್ 12 ಪಿ 3 ದಕ್ಷಿಣಕ್ಕೆ : ಪ್ಲಾಟ್ ನಂಬರ್ 15 ಪಿ 1.

ಸಹಿ/- ಎನ್. ಲಕ್ಷ್ಮಿನಾರಾಯಣ,
ವಕೀಲರು,
ನಂ.504, 15ನೇ ಮೇನ್,
5ನೇ ಕ್ರಾಸ್, ಸರಸ್ವತಿಪುರಂ,
ಮೈಸೂರು, ಮೊ: 9844359808

In The Court Of Hon'ble Tenth Additional Civil Judge At Mysuru

[Original Jurisdiction]
In The Matter Of Original Suit in O. S. No. 1316 of 2024

Between
Mrs. Bibi Amina Fazal — Plaintiff
And Mrs. Felcia Francis
And Another — Defendants

1. Mrs. Felcia Francis Wife of Mr. R. Prathap Aged about 27 years Residing at The Residence Villas, Villa No.11, Bench Mark Signature Homes, Mysuru- Bangalore Road, Opp to Dorai Fine Arts, Near Colombia Asia / Manipal Hospital, Mysuru 570015
2. Mr. R. Prathap Son of Mr. C. Raja Aged about 30 years Residing at The Residence Villas, Villa No.11, Bench Mark Signature Homes, Mysuru- Bangalore Road, Opp to Dorai Fine Arts, Near Colombia Asia/ Manipal Hospital, Mysuru 570015

Summons to The Defendants.

Whereas the above named Plaintiff has instituted the above Original Suit against you, for the relief of Ejectment in O.S. No. 1316 of 2024 on the file of the Hon'ble Tenth Additional Civil Judge at Mysuru, and you being the respondent, you are hereby summoned to appear in this Court in person or by a pleader on the 17/6/25 day of 2025 at 11.00 'O' Clock, to answer the same, failing which the suit will be disposed of ex parte. Given Under my hand and the seal of the Court this Court on: 19/4/25

By Order of the Court
Sd/- Chief Ministerial Officer,
Civil Judge & JMFC, Mysore

Sd/- Shri. Rohith P.P, Advocate
Himanshi Law Associates,
Attorneys at
Law Corporate Consultants
Ground Floor No. 529, 9th Cross,
Near Ravi Clinic, Tank Road,
N. R. Mohalla, Mysuru



ನಕ್ಕರೆ ಅದೇ ಸ್ವರ್ಗ

ಗುಂಡ ಡಾಕ್ಟರ್ ಆಗಿದ್ದ. ಊರ ಯಜಮಾನನ ಮಗನಿಗೆ ಆಕ್ಸಿಡೆಂಟ್ ಆಗಿ ಆಸ್ಪತ್ರೆಗೆ ಕರೆ ತಂದರು.

ಗುಂಡ : I am sorry patient no more. ಒಂದು ಗಂಟೆ ಮೊದಲೇ ಕರೆ ತಂದಿದ್ರೆ ಉಳಿಸಬಹುದಿತ್ತು.

ಊರ ಯಜಮಾನ : ಅಂಯ್ಯೋ ಹುಚ್ ಮುಂಡೆ ಮಗನೆ, ಅರ್ಧ ಗಂಟೆ ಹಿಂದೆ ಆಕ್ಸಿಡೆಂಟ್ ಆಗೈತಿ... ಒಂದ್ ಗಂಟೆ ಮೊದ್ಲೆ ಹೆಂಗ್ ತರ್ಲಿ...

ಮೈಸೂರು ಮಿತ್ರ

ಬುಧವಾರ, 7 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

'ಹಿತ' ಶತ್ರುಗಳು ನಮ್ಮ ಬೆಳವಣಿಗೆಯ ಸಹಿಸದೆ ಕಾಲೆಳೆಯುವ ಜನರು, ಕಾಲೆಳೆಯುವ ಭರದಲ್ಲಿ ನಮಗಿಂತ ಕೆಳಮಟ್ಟಕ್ಕಿಳಿದಿರುವುದನ್ನು ಮರೆತಿರುತ್ತಾರೆ. – ಆರ್. ಆರ್. ಆಶಾಪುರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಳ್ಳಗಿರೋದೆಲ್ಲ ಹಾಲಲ್ಲ, ಹೊಳೆಯೋದೆಲ್ಲ ಚಿನ್ನ ಅಲ್ಲ.

ನಿಮ್ಮ ಪತ್ರಗಳು

■ ಗೋಕುಲಂನಲ್ಲಿ ನಾಯಿಗಳ ಆರ್ಭಟ

ಮಾನ್ಯರೆ,



ಮೈಸೂರಿನ ಗೋಕುಲಂ ಬಡಾವಣೆಯ ನಂದಗೋಕುಲ ಬಳಿ ಇರುವ ತ್ರಿನೇತ್ರ ವೃತ್ತ ಹಾಗೂ ಅದಿತ್ಯ ಅಧಿಕಾರಿ ಆಸ್ಪತ್ರೆಯ ತಿರುವಿನ ಸಮೀಪ ಬೀದಿನಾಯಿಗಳ ಕಾಟ ಹೆಚ್ಚಾಗಿದ್ದು, ಸಿಕ್ಕ-ಸಿಕ್ಕ ವಾಹನ ಸವಾರರಿಗೆ, ವಾಯುವಿಹಾರಿಗಳಿಗೆ ಹಾಗೂ ದಾರಿಹೋಕರಿಗೆ ಹೆದರಿಸುವುದಲ್ಲದೇ ದಾಳಿ ಮಾಡಲು ಪ್ರಾರಂಭಿಸಿವೆ. ಇತ್ತ ಹೆಬ್ಬಾಳು ಹಾಗೂ ವಿಜಯನಗರದಿಂದ ಬರುವ ಮಾರ್ಗದಲ್ಲಿ ತ್ರಿನೇತ್ರ ವೃತ್ತದ ತಿರುವಿನಲ್ಲಿಯೇ ಈ ನಾಯಿಗಳ ಹಿಂಡು ಉಪಟಳ ನೀಡುತ್ತಿದ್ದು, ಕೆಲವೊಮ್ಮೆ ಅತ್ತ ಕಡೆಯಿಂದ ಬರುವ ಚಾಲಕರು ಇವುಗಳ ಬೊಗಳುವ ಶಬ್ದದಿಂದ ಹೆದರಿ ಮುಂಬರುವ ವಾಹನಗಳಿಗೆ ಡಿಕ್ಕಿ ಹೊಡೆದು ಕೆಳಗೆ ಬಿದ್ದಿರುವ ಪ್ರಸಂಗಗಳು ನಡೆದಿವೆ. ಇದರೊಂದಿಗೆ, ಈ ನಾಯಿಗಳು ರಸ್ತೆಯಲ್ಲಿ ಹೋಗುವ ಸ್ವಿಗ್ಗಿ ಹಾಗೂ ಜೊಮೆಟೋ ಡೆಲಿವರಿ ಬಾಯ್‌ಗಳ ವಾಹನವನ್ನು ಅರ್ಧ ಕಿಲೋಮೀಟರ್‌ನಷ್ಟು ದೂರ ಅಟ್ಟಾಡಿಸಿಕೊಂಡು ಹೋಗುವ ಸನ್ನಿವೇಶಗಳು ಪ್ರತಿದಿನ ನಡೆಯುತ್ತಿವೆ. ವಿಚಿತ್ರವೇನೆಂದರೆ, ಈ ಬಡಾವಣೆಯಲ್ಲಿ ಅತಿ ಹೆಚ್ಚು ನಿವಾಸಿಗಳು ಪ್ರಾಣಿ ಪ್ರೇಮಿಗಳಾಗಿದ್ದು, ಇಷ್ಟೆಲ್ಲಾ ಸಮಸ್ಯೆಯಿದ್ದರೂ ಸಹ ಆ ನಾಯಿಗಳಿಗೆ ಏನೂ ಮಾಡದಿರುವಂತೆ ಜಾಗೃತವಾಡಿರುವ ಸಂಗತಿಗಳು ಕಂಡು ಬಂದಿದೆ. 'ಜನ ಮರುಳೋ ಜಾತ್ರೆ ಮರುಳೋ' ಎಂಬಂತೆ ಈ ನಾಯಿಗಳು ಹಾಗೂ ನಾಯಿ ಪ್ರೇಮಿಗಳ ಮಧ್ಯೆ ಸಾರ್ವಜನಿಕರು ಹಾಗೂ ವಾಹನ ಸವಾರರು ಸಿಕ್ಕಿ ಪ್ರತಿದಿನ ಘಟನೆ ಪಡುತ್ತಿದ್ದಾರೆ. ಆದ್ದರಿಂದ, ಪಾಲಿಕೆ ಅಧಿಕಾರಿಗಳು ಅಥವಾ ಪ್ರಾಣಿ ದಯಾ ಸಂಘದವರು ಕೂಡಲೇ ನಾಯಿಗಳ ಉಪಟಳಕ್ಕೆ ಕಡಿವಾಣ ಹಾಕಬೇಕೆಂದು ಈ ಮೂಲಕ ಮನವಿ.

–ಯಶಸ್. ಆರ್, ಲೇಖಕ ಹಾಗೂ ಸಾಮಾಜಿಕ ಕಾರ್ಯಕರ್ತ, ಮೈಸೂರು.

■ ಪಶು ವೈದ್ಯರ ದಿನದ ಆಶಯ ಸಾಕಾರವಾಗಲಿ

ಮಾನ್ಯರೆ,

ಪ್ರತಿ ವರ್ಷ ಏಪ್ರಿಲ್ ತಿಂಗಳ ಕೊನೆಯ ವಾರದ ಶನಿವಾರದಂದು ವಿಶ್ವ ಪಶು ವೈದ್ಯರ ದಿನವನ್ನು ಆಚರಿಸಲಾಗುತ್ತದೆ. ಪ್ರಾಣಿಗಳಿಗೆ ಉತ್ತಮ ಚಿಕಿತ್ಸೆ ಒದಗಿಸುವ ತಂಡದ ವಿಧಾನ ಅಗತ್ಯ ಎಂಬುದು ಈ ಬಾರಿಯ ದಿನಾಚರಣೆಯ ಧ್ಯೇಯ ವಾಕ್ಯವಾಗಿದೆ. ಪಶುಗಳ ಚಿಕಿತ್ಸೆಯಲ್ಲಿ ತೊಡಗಿರುವ ವೈದ್ಯರು, ಸಹಾಯಕರು ಒಂದು ತಂಡವಾಗಿ ಸಮನ್ವಯದಿಂದ ಕೆಲಸ ಮಾಡಿದಾಗ ಮಾತ್ರ ಪರ್ಣ ಯಶಸ್ಸು ಲಭಿಸಲು ಸಾಧ್ಯ. ಏಕೆಂದರೆ, ಪ್ರಾಣಿಗಳಿಗೆ ಚಿಕಿತ್ಸೆ ನೀಡಿದಾಗ ಅವುಗಳ ನಿಯಂತ್ರಣ ಮಾಡುವುದು ಬಹಳ ಮುಖ್ಯವಾದ ಸಂಗತಿ. ಇದಕ್ಕೆ ಪಶು ವೈದ್ಯರು ಹಾಗೂ ಸಹಾಯಕರು, ಗ್ರೂಪ್ ಡಿ ನೌಕರು ಇರಬೇಕು. ಆದರೆ ಈ ದೈಯಾಕಷ್ಟೆ ತದ್ದಿರುದ್ದವಾದ ಪರಿಸ್ಥಿತಿ ನಮ್ಮ ರಾಜ್ಯದ ಪಶು ಚಿಕಿತ್ಸಾಲಯಗಳಲ್ಲಿ ಇದೆ. ಪಶುವೈದ್ಯ ಇಲಾಖೆಯ ಪಶು ಪರೀಕ್ಷಕರು, ಪಶುವೈದ್ಯ ಸಹಾಯಕರು ಹಾಗೂ ಡಿ ಗ್ರೂಪ್ ನೌಕರರ ನೇಮಕಾತಿ ನಡೆದು ಕೆಲವು ದಶಕಗಳೇ ಕಳೆದಿವೆ. ಹೊಸದಾಗಿ ಪಶು ವೈದ್ಯ ಸಂಸ್ಥೆಗಳನ್ನು ಪ್ರಾರಂಭಿಸಿ ಗುತ್ತಿಗೆ ಆಧಾರದಲ್ಲಿ ಪಶುವೈದ್ಯರನ್ನು ಮಾತ್ರ ನೇಮಕ ಮಾಡಲಾಗಿದೆ. ಅನೇಕ ಸಂಸ್ಥೆಗಳಲ್ಲಿ ಒಬ್ಬ ಮಾತ್ರ ಪಶು ವೈದ್ಯರು ಇದ್ದಾರೆ. ಚಿಕಿತ್ಸಾಲಯದ ಬಾಗಿಲು ತೆರೆಯುವುದರಿಂದ ಹಿಡಿದು ಎಲ್ಲಾ ಕೆಲಸವನ್ನು ಅವರೇ ಮಾಡಬೇಕಾಗಿದೆ. ಕೆಲವು ಕಡೆ ಹೊರಗುತ್ತಿಗೆ ಮುಖಾಂತರ ಗ್ರೂಪ್ ಡಿ ನೌಕರರನ್ನು ನೇಮಿಸಲಾಗಿದೆ. ಆದರೆ ಇವರಿಗೆ ಪ್ರಾಣಿಗಳನ್ನು ನಿಯಂತ್ರಿಸುವ ಕೌಶಲ ಇರದ ಕಾರಣ ಇವರಿಂದ ಯಾವ ಪ್ರಯೋಜನವೂ ಇಲ್ಲ. ಆದ್ದರಿಂದ 'ವಿಶ್ವಪಶು ವೈದ್ಯರ ದಿನಾಚರಣೆ' ಆಶಯ ಸಾಕಾರಗೊಳ್ಳಬೇಕಾದರೆ ಸರ್ಕಾರ ಕೂಡಲೇ ಪಶು ಚಿಕಿತ್ಸಾಲಯಗಳಲ್ಲಿ ಸಹಾಯಕ ಸಿಬ್ಬಂದಿ ಹಾಗೂ ಗ್ರೂಪ್ ಡಿ ನೌಕರರ ಹುದ್ದೆಗಳಿಗೆ ನೇಮಕಾತಿ ಮಾಡಬೇಕಿದೆ.

–ಸಿದ್ದಲಿಂಗೇಗೌಡ, ಹೈರಿಗೆ, ಎಚ್.ಡಿ. ಕೋಟೆ ತಾಲೂಕು.

■ ನಾಚಿಕೆಗೇಡಿನ ಶೇ.1.5 ತುಟ್ಟಿಭತ್ಯೆ

ಮಾನ್ಯರೆ,

ರಾಜ್ಯ ಸರ್ಕಾರ ತನ್ನ ಉದ್ಯೋಗಿಗಳಿಗೆ ಜನವರಿ 1 ರಿಂದ ಅನ್ವಯವಾಗುವಂತೆ ಶೇ.1.5 ರಷ್ಟು ತುಟ್ಟಿಭತ್ಯೆ ಏರಿಕೆ ಮಾಡಿದೆ. ಇದಕ್ಕೆ ಅಳಬೇಕೋ, ಸಂತೋಷಪಡಬೇಕೋ ತಿಳಿಯದಾಗಿದೆ. ಗ್ಯಾರಂಟಿ ಯೋಜನೆಗಳಿಂದಾಗಿ ಬಿಟ್ಟಿ ಭಾಗ್ಯಕ್ಕೆಂದು ಹಣ ಹೊಂದಿಸಲು ಹೆಣಗುತ್ತಿರುವ ರಾಜ್ಯ ಸರ್ಕಾರ, ಇದೀಗ ಹಲವಾರು ದಿನಬಳಕೆ ಮತ್ತು ಅತ್ಯಾವಶ್ಯಕ ವಸ್ತುಗಳ ಬೆಲೆ ಏರಿಕೆ ಜೊತೆಗೆ ಇನ್ನೂ ಏನೇನು ಯೋಜನೆಗಳನ್ನು ಹಮ್ಮಿಕೊಂಡಲ್ಲಿ ಹಣ ಕ್ರೋಢೀಕರಿಸಬಹುದು ಎಂಬ ದುರಾಲೋಚನೆಯಲ್ಲಿಯೇ ಇದೆ. ಈ ನಡುವೆ ನೀಡಿರುವ ಶೇ.1.5 ತುಟ್ಟಿಭತ್ಯೆ ಅತ್ಯಂತ ಹೀನವೇ ಸರಿ. ಕೆಲ ನಿವೃತ್ತರಿಗೆ ಈ ಶೇ.1.5 ಏರಿಕೆ ಮಾಸಿಕ ಮುನ್ನೂರೋ ನಾಲ್ಕುನೂರೋ ಹೆಚ್ಚಳವಾದರೂ, ಹೋಟೆಲ್‌ಗಳಲ್ಲಿ ನೀಡುವ ಟಿಪ್ಸ್‌ಗಿಂತಲೂ ಕಡಿಮೆ ಎಂದು ಮೂಗು ಮುರಿಯುತ್ತಿದ್ದಾರೆ ಕೆಲವರು. ಕಡೆ ಪಕ್ಷ ಶೇ.2 ಅಥವಾ ಶೇ.2.5 ನೀಡಿದ್ದರೂ ಸರಿ ಇರಬಹುದಿತ್ತೇನೋ. ಮುಂದಿನ ದಿನಗಳಲ್ಲಿ ಶೇ.1 ಅಥವಾ ಶೇ.0.5ಕ್ಕೆ ಇಳಿಯುತ್ತದೇನೋ ಎಂಬ ನಿರೀಕ್ಷೆಯಲ್ಲಿದ್ದಾರೆ ಸರ್ಕಾರಿ ಸಿಬ್ಬಂದಿ.

–ವಿಜಯ್ ಹೆಮ್ಮಿಗೆ, ಮೈಸೂರು

■ ಕೆ.ಬಿ. ಗಣಪತಿಯವರ ಪತ್ರ ಸೂಕ್ತ, ಸಮಯೋಚಿತ

ಮಾನ್ಯರೆ,

'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರ ಪತ್ರ (ದಿನಾಂಕ ಮೇ 5, ಪ್ರಧಾನಿ ಮೋದಿ ಅವರಿಗೊಂದು ಪತ್ರ) ನಮ್ಮ ಪ್ರಧಾನಿ ನರೇಂದ್ರ ಮೋದಿ ಯವರಿಗೆ ತಲುಪಿರಬೇಕು. ಈ ನಿಟ್ಟಿನಲ್ಲಿ ಪ್ರಧಾನಿಯವರು ಯೋಚಿಸುತ್ತಲೇ ಇರಬಹುದು. ಕಾರಣ, ಸಲಹೆ ಅಷ್ಟೊಂದು ಸೂಕ್ತ ಮತ್ತು ಸಮಯೋಚಿತ.

1971ರ ಭಾರತ–ಪಾಕಿಸ್ತಾನ ಹೋರಾಟ ಹೇಗೆ ಬಾಂಗ್ಲಾದೇಶದ ಸೃಷ್ಟಿಗೆ ಕಾರಣವಾಯಿತೋ ಅಂತಹುದೇ ಸನ್ನಿವೇಶ ಮೋದಿ ಎದುರು ಈಗ ಇದೆ ಎಂಬುದನ್ನು ಅತ್ಯಂತ ಸ್ಪಷ್ಟ ಪದಗಳಲ್ಲಿ ಗಣಪತಿಯವರು ಹೇಳಿದ್ದಾರೆ. ಇತಿಹಾಸದೊಂದಿಗೆ ಭೌಗೋಳಿಕ ಪ್ರದೇಶವನ್ನೂ ಸೃಷ್ಟಿಸುವ ಅತ್ಯಂತ ಅರಿವೂ ಇದೆ. ಇದು ನಮ್ಮ ದೇಶದ ಹಿತಕಾಯುವ ಇನ್ನೊಂದು ಮಹತ್ವದ ಹೆಜ್ಜೆ ಅಂದರೂ ತಪ್ಪಲ್ಲ. ಗಣಪತಿ ಅವರು ಹೇಳಿದಂತೆ, ಕರವಸ್ತ್ರ ಗಾತ್ರದ ಕೋಳಿ ಕತ್ತಿನಂತಿರುವ ದೇಶಗಳಿಗೆ ಆನೆ ಆಕಾರದ ಭಾರತ ತಕ್ಕ ಪಾಠ ಕಲಿಸಲು ಇದು ಸೂಕ್ತ ಸಮಯ. ಕಬ್ಬಿಣ ಚೆನ್ನಾಗಿ ಕಾದು ನಿಂತಿದೆ. ಹಣಿಯುವುದೊಂದೇ ಬಾಕಿ !

–ಶಂಕರನಾರಾಯಣ ಭಟ್, ಜಯಲಕ್ಷ್ಮಿಪುರಂ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಸಂಸ್ಕೃತ ವಿದ್ವಾಂಸರು, ಮೈಸೂರು.

ಸಂಸ್ಕೃತಿ ಚಿಂತನಾ

ಬುದ್ಧ ಬೋಧಿಸಿದ ಅಷ್ಟಾಂಗ ಮಾರ್ಗ

ಭಗವಾನ್ ಬುದ್ಧನು ಕ್ರಿ.ಪೂ. ಆರನೆಯ ಶತಮಾನದಲ್ಲಿ ಜನರಿಗೆ ದುಃಖ ನಿವೃತ್ತಿಯ ಮಾರ್ಗವನ್ನು ಬೋಧಿಸಿದನು. ನಿರ್ವಾಣವೆಂಬ ಸ್ಥಿತಿಯನ್ನು ತಲುಪಲು ಮಾನವರು ಈ ಮಾರ್ಗವನ್ನು ಅನುಸರಿಸಬೇಕು ಎಂಬುದು ಅವನ ಆಶಯ. ಅಷ್ಟಾಂಗ ಮಾರ್ಗವು ಕೇವಲ ಭಿಕ್ಷುಗಳಿಗೆ ಮಾತ್ರವಲ್ಲ, ಸಮಸ್ತ ಜನರಿಗೂ ಅಪೇಕ್ಷಿತವಾದ, ಅವಶ್ಯಕವಾದ ಬದುಕಿನ ದಾರಿ ಎಂಬುದು ಬುದ್ಧನ ಉಪದೇಶ. ಅಷ್ಟಾಂಗ ಎಂದರೆ ಎಂಟು ಅಂಶಗಳನ್ನೊಳಗೊಂಡಿರುವುದು. ಆ ಅಂಶಗಳು ಯಾವುವೆಂದರೆ – ಸಮ್ಯದೃಷ್ಟಿ, ಸಮ್ಯ ಸಂಕಲ್ಪ, ಸಮ್ಯವಾಚ, ಸಮ್ಯಕರ್ಮಾಂತ, ಸಮ್ಯ ಆಜೀವ, ಸಮ್ಯ ವಾಯಾಮ, ಸಮ್ಯಸತಿ ಮತ್ತು ಸಮ್ಯ ಸಮಾಧಿ. ಇವುಗಳನ್ನು ಅರ್ಥೈಸಿಕೊಳ್ಳೋಣ.

1) **ಸಮ್ಯದಿಟ್ಠಿ**: ಇದು ಸಮ್ಯಗ್‌ದೃಷ್ಟಿ ಎಂಬ ಸಂಸ್ಕೃತ ಶಬ್ದದ ಪಾಲಿರೂಪ. ಸಮ್ಯಕ್ ಎಂದರೆ ಸರಿಯಾದ, ನ್ಯಾಯಾನುಗುಣವಾದ ಎಂದು ಅರ್ಥ. ದುಃಖ ಕಾರಣ, ದುಃಖ ನಿರೋಧ, ದುಃಖ ನಿರೋಧದ ಮಾರ್ಗ ಎಂಬ ನಾಲ್ಕು ಆರ್ಯಸತ್ಯಗಳ ಬಗೆಗೆ ಮನುಷ್ಯನಿಗೆ ಸರಿಯಾದ ತಿಳಿವು ಇರಬೇಕು. ಅನವಶ್ಯಕವಾದ ಊಹಾತ್ಮಕವಾದ ಚರ್ಚೆಗಳನ್ನು ಬಿಟ್ಟು ಆರ್ಯಸತ್ಯಗಳನ್ನು ಮಾನವನು ಅರಿತುಕೊಳ್ಳಬೇಕು. ನಿರ್ವಾಣಕ್ಕೆ ಇದೇ ಮಾರ್ಗ.

2) **ಸಮ್ಯ ಸಂಕಪ್ಪ** ಎಂದರೆ ಸಮ್ಯಕ್ ಸಂಕಲ್ಪ. ಎಂದರೆ ಸರಿಯಾದ ಯೋಗ್ಯವಾದ ನಿಶ್ಚಯ. ಸತ್ಯವನ್ನು ತಿಳಿದರೆ ಮಾತ್ರ ಸಾಲದು. ಅದನ್ನು ಅನುಷ್ಠಾನದಲ್ಲಿ ತರಬೇಕು. ಜೀವನವನ್ನು ಆ ರೀತಿಯಾಗಿ ತಿದ್ದಿಕೊಳ್ಳಬೇಕು. ಇದಕ್ಕಾಗಿ ಮಾನವನು ಪ್ರಾಮಾಣಿಕತೆಯನ್ನೂ, ಪರರಿಗೆ ಕೇಡನ್ನು ಬಗೆಯುವ ಬುದ್ಧಿಯನ್ನೂ ಬಿಡಬೇಕು. ಇತರರಿಗೆ ನೋವನ್ನು ದೈಹಿಕವಾಗಿ, ವಾಚಿಕವಾಗಿ, ಮಾನಸಿಕವಾಗಿ, ಯಾವ ರೀತಿಯಲ್ಲಾದರೂ ಉಂಟು ಮಾಡಬಾರದು. ಸಮ್ಯಕ್ ಸಂಕಲ್ಪದಲ್ಲಿ ಇವೆಲ್ಲ ಸೇರಿವೆ.


3) **ಸಮ್ಯವಾಚ** ಎಂದರೆ ಸಮ್ಯಗ್‌ವಾಕ್. ಒಳ್ಳೆಯ ಮಾತು. ಮಾತು ಮಾನವ ಲೋಕಕ್ಕೆ ಪ್ರಕೃತಿಯು ಕೊಟ್ಟಿರುವ ವರ. ಇದನ್ನು ಎಲ್ಲರ ಹಿತಕ್ಕೆ ಬಳಸಬೇಕು. ಅಯ್ಯ ಎಂದರೆ ಸ್ವರ್ಗ, ಎಲವೋ ಎಂದರೆ ನರಕ. ಸುಳ್ಳು, ನಿಂದೆ, ನಿರ್ದಯವಾದ ಒರಟು ಮಾತು, ಅರ್ಥವಿಲ್ಲದ ಯಾರಿಗೂ ಪ್ರಯೋಜನವಿಲ್ಲದ ಹರಟೆ-ಇವುಗಳನ್ನೆಲ್ಲ ಬಿಡಬೇಕು.

ಮಾತನ್ನು ಆಡುವುದು ನಮ್ಮ ವಶದಲ್ಲೇ ಇದೆ. ಮಾತಿನಿಂದಾಗುವ ಪರಿಣಾಮ ದೊಡ್ಡದು. ಇದನ್ನು ಅರಿತು ಸತ್ಯವೂ ಹಿತವೂ ಮಧುರವೂ ಆದ ಮಾತನ್ನೇ ಆಡುವುದು ಸಮ್ಯಗ್‌ವಾಕ್. ಮನಸ್ಸನ್ನು ನೋಯಿಸುವ, ಅವಹೇಳನ ಮಾಡುವ ಮಾತು ಕೇಳಿದವರ ಮನಸ್ಸಿಗೆ ಘಾಸಿಯನ್ನುಂಟು ಮಾಡುತ್ತದೆ. ಶರೀರಕ್ಕಾದ ಗಾಯ ಔಷಧಗಳಿಂದ ವಾಸಿಯಾಗಬಹುದು. ಆದರೆ ವಾಕ್ಶಸ್ತ್ರ ಎಂದರೆ ಮಾತಿನಿಂದ ಮನಸ್ಸಿಗೆ ಆಗುವ ಗಾಯ ಶಾಶ್ವತವಾಗಿ ಉಳಿಯುತ್ತದೆ. ಹೀಗೆ ಮಾತನ್ನು ದುರುಪಯೋಗ ಮಾಡದೆ ಎಚ್ಚರಿಕೆಯಿಂದ ಬಳಸುವುದು ಸಮ್ಯಗ್‌ವಾಕ್.

4) **ಸಮ್ಯಕಮ್ಮಂತ** ಎಂದರೆ ಸಮ್ಯಕ್‌ಕರ್ಮಾಂತ. ಇದು ಮುಖ್ಯವಾಗಿ ಸಚ್ಚಾರಿತ್ರ್ಯ ಅಥವಾ ಒಳ್ಳೆಯ ನಡತೆಯನ್ನು ಹೇಳುತ್ತದೆ. ಮನುಷ್ಯನ ಯೋಗ್ಯತೆಯು ನಿರ್ಧಾರವಾಗುವುದು ಚಾರಿತ್ರ್ಯ (Character) ದಿಂದ. ಇದರಲ್ಲಿ ಬುದ್ಧನು ಪಂಚಶೀಲಗಳನ್ನು ಹುದುಗಿಸಿದ್ದಾನೆ.

i) ಯಾವ ಜೀವಿಯನ್ನೂ ಕೊಲ್ಲುವುದು, ಹಿಂಸಿಸುವುದು ಬೇಡ.
ii) ಯಾರ ವಸ್ತುವನ್ನೂ ಯಾವುದೇ ಸಂದರ್ಭದಲ್ಲಿ ಕದಿಯುವುದು ಬೇಡ.
iii) ಯಾವುದೇ ಕಾರಣಕ್ಕೂ ಸುಳ್ಳನ್ನು ಹೇಳುವುದು ಬೇಡ.
iv) ಇಂದ್ರಿಯ ಸುಖದಲ್ಲಿ ಲೋಲುಪತ್ವವು ಬೇಡ.
v) ಮದ್ಯ ಸೇವನೆಯಿಂದ ಮತ್ತರಾಗುವುದು ಬೇಡ ಎಂಬವು ಪಂಚಶೀಲಗಳು. ಇವನ್ನೇ ಬಸವಣ್ಣನವರು ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ಎಂಬ ವಚನದಲ್ಲಿ ಹೇಳಿದ್ದಾರೆ. ಈ ಪಂಚಶೀಲಗಳನ್ನು ಅಥವಾ ಸಮ್ಯಕ್ಕರ್ಮಾಂತವೆಂಬ ತತ್ತ್ವವನ್ನು ಎಲ್ಲ ಧರ್ಮಗಳೂ ಒಪ್ಪಿವೆ.

5) **ಸಮ್ಯ ಆಜೀವ** ಎಂದರೆ ಸಮ್ಯಗ್ ಆಜೀವ. ಆಜೀವ ಎಂದರೆ ಬದುಕಿರುವುದಕ್ಕಾಗಿ ಜನರು ಆಶ್ರಯಿಸುವ ವೃತ್ತಿ. ಅದು ಸರಿಯಾದುದು ಪ್ರಾಮಾಣಿಕತೆಗೆ ವಿರುದ್ಧವಲ್ಲದುದೂ ಆಗಿರಬೇಕು. ನಿಷಿದ್ಧವಾದ, ಕಾನೂನಿಗೆ ವಿರುದ್ಧವಲ್ಲದ ವೃತ್ತಿಯನ್ನೇ ಸ್ವೀಕರಿಸಬೇಕು. ಅದರಲ್ಲೂ ಪ್ರಾಣಿಹಿಂಸೆಯನ್ನೋ ವಂಚನೆಯನ್ನೋ ಒಳಗೊಳ್ಳುವ ವೃತ್ತಿಯನ್ನು ಹಿಡಿಯಬಾರದು. ದ್ರೋಹವನ್ನು ಒಳಗೊಂಡ ವೃತ್ತಿಯಲ್ಲಿ ತೊಡಗಿಕೊಂಡವರು ಸದಾ ಭಯದಲ್ಲಿ ನರಳುತ್ತಾರೆ. ಇದು ಶಾಂತಿಗೆ, ನಿರ್ವಾಣಕ್ಕೆ ವಿರುದ್ಧವಾಗುತ್ತದೆ.



ಸಮ್ಯಗಾಜೀವ ಅಥವಾ ಯೋಗ್ಯವೃತ್ತಿ ಯಾವುದೆಂಬುದನ್ನು ತೀರ್ಮಾನಿಸುವುದು ಕಷ್ಟ. ಯೋಧನು ದೇಶದ ಶತ್ರುಗಳನ್ನು ಸಂಹರಿಸುವುದು ಅನಿವಾರ್ಯ. ಅಹಿಂಸಾತತ್ತ್ವಕ್ಕೆ ಅದು ವಿರುದ್ಧವೆಂದು ಎಲ್ಲರೂ ಯೋಧ ವೃತ್ತಿಯನ್ನು ತ್ಯಜಿಸಿದರೆ ದೇಶದ ರಕ್ಷಣೆಯನ್ನು ಮಾಡುವವರು ಯಾರು? ಮೀನುಗಾರಿಕೆಯಿಂದ ಕೋಟ್ಯಾಂತರ ಜನರು ಬದುಕುತ್ತಿದ್ದಾರೆ. ಮೀನುಗಳನ್ನು ಕೊಲ್ಲುವುದರಿಂದಲೇ ಮೀನುಗಾರರ ಜೀವನ ನಡೆಯುವುದು. ಒಂದು ಗಜ ರೇಷ್ಮೆ ಸೀರೆಗಾಗಿ ಸಾವಿರ ಹುಳಗಳನ್ನು ಕುದಿಯುವ ನೀರಿನಲ್ಲಿ ಹಾಕಿ ಕೊಲ್ಲುತ್ತಾರೆ. ಆ ವೃತ್ತಿಯಲ್ಲಿ ತೊಡಗಿರುವವರದು ಸಮ್ಯಗಾಜೀವ ಅಲ್ಲವೇ? ಇದೆಲ್ಲ ಗಂಭೀರವಾಗಿ ವಿಚಾರ ಮಾಡಬೇಕಾದ ವಿಚಾರ.

6) **ಸಮ್ಯ ವ್ಯಾಯಾಮ** ಎಂದರೆ ಸಮ್ಯಗ್ ವ್ಯಾಯಾಮ. ಇಲ್ಲಿ ವ್ಯಾಯಾಮ ಎಂದರೆ ದೈಹಿಕ ಡ್ರಿಲ್ ಅಲ್ಲ. ವ್ಯಾಯಾಮ ಎಂದರೆ ಪ್ರಯತ್ನ, ಲೋಕದಲ್ಲಿ, ಕೆಲವು ಸಂದರ್ಭಗಳಲ್ಲಿ ಮನುಷ್ಯನು ಎಷ್ಟೇ ಪ್ರಯತ್ನಪಟ್ಟರೂ ಫಲವು ದೊರಕದು. ಪ್ರಯತ್ನಗಳು ವಿಫಲವಾದರೂ ಎದೆಗುಂದದೆ ಪಂಚಾಂಗದಲ್ಲಿ ಹೇಳಿರುವಂತೆ ಮರಳಿ ಯತ್ನವನ್ನು ಮಾಡಬೇಕು. ಅದೇ ವ್ಯಾಯಾಮ. ಮನುಷ್ಯನಲ್ಲಿ ಪ್ರಾಚೀನ ವಾಸನೆಗಳು ಹೊಸ ಚಿಂತನೆಗಳನ್ನು ವಿರೋಧಿಸುತ್ತವೆ. ಆದ್ದರಿಂದ ಧರ್ಮದ ಮಾರ್ಗದಲ್ಲಿ ನಡೆಯಲು ಬಯಸುವ ಮನುಷ್ಯನು ಹಿಂದಿನ ಕೆಟ್ಟ ಚಿಂತನೆಗಳನ್ನು ಕಿತ್ತೊಗೆಯಲು, ಹೊಸ ತಮ್ಮ ಚಿಂತನೆಗಳು ಮೊಳೆಯುದಂತೆ ಮಾಡಲು, ಮನಸ್ಸನ್ನು ಉತ್ತಮ ವಿಚಾರಗಳಿಂದ ತುಂಬಲು ಹಾಗೂ ಉತ್ತಮ ವಿಚಾರಗಳನ್ನೇ ದೃಢವಾಗಿ ಸ್ಥಾಪಿಸಿಕೊಳ್ಳಲು ಮನುಷ್ಯರು ಸತತ ಪ್ರಯತ್ನಶೀಲರಾಗಬೇಕು. ಇದೇ ಸಮ್ಯಗ್ ವ್ಯಾಯಾಮ.

7) **ಸಮ್ಯಸತಿ** ಎಂದರೆ ಸಮ್ಯಕ್ ಸ್ಮೃತಿ. ಧರ್ಮ ಮಾರ್ಗದಲ್ಲಿ ನಡೆಯಲು ಬಯಸುವ ಸಾಧಕನು ತಾನು ಆಗಲೇ ಕಲಿತಿರುವ ಒಳ್ಳೆಯ ವಿಚಾರಗಳನ್ನು ಉಳಿಸಿಕೊಳ್ಳಬೇಕು. ಸ್ಮೃತಿ ಎಂದರೆ ನೆನಪು. ಕಲಿತಿದ್ದನ್ನು ಮರೆಯದೆ ಉಳಿಸಿಕೊಳ್ಳುವುದು ಸ್ಮೃತಿ. ಇದು ನಾನು ಎಂಬ ಅಹಂಕಾರವನ್ನೂ ಇದು ನನ್ನದು ಎಂಬ ಮಮಕಾರವನ್ನೂ ಬಿಡಬೇಕು. ಈ ಅಹಂಕಾರ-ಮಮಕಾರಗಳೇ ಬಂಧನಕ್ಕೂ ದುಃಖಕ್ಕೂ ಮೂಲ ಕಾರಣ. ಶರೀರದ ಬಗೆಗೆ ಎಲ್ಲ ಪ್ರಾಣಿಗಳಿಗೆ ಇರುವಂತೆ ಮನುಷ್ಯನಿಗೂ ಮೋಹವಿರುತ್ತದೆ. ಶರೀರವು ಪೃಥ್ವಿ, ಜಲ, ವಾಯು, ತೇಜಸ್ ಎಂಬ ನಾಲ್ಕು ಭೂತಗಳ ಸಂಯುಕ್ತ ವಸ್ತು ಮಾತ್ರ. ಇದರಲ್ಲಿ ಮಾಂಸ, ಮೂಳೆ, ಮಜ್ಜಾ, ರಕ್ತ, ಮಲ, ಮೂತ್ರ ಮುಂತಾದ ಹೇಯ ವಸ್ತುಗಳೇ ತುಂಬಿದೆ ಎಂಬುದನ್ನು ಅರಿತಾಗ ದೇಹ ಮೋಹವು ದೂರವಾಗುತ್ತದೆ. ದೇಹವನ್ನು ಎಷ್ಟು ಚೆನ್ನಾಗಿ ಕಾಪಾಡಿದರೂ ಸತ್ತ ಮೇಲೆ ಕೊಳೆತು ದುರ್ನಾತವನ್ನೇ ಬೀರುತ್ತದೆ ಎಂದು ಅದರ ಹೇಯತ್ವದ ಸ್ಮೃತಿಯನ್ನು ಸಾಧಕನು ಇಟ್ಟುಕೊಳ್ಳಬೇಕು.

8) **ಸಮ್ಯ ಸಮಾಧಿ** ಎಂದರೆ ಸಮ್ಯಕ್ ಸಮಾಧಿ. ಮೇಲೆ ಹೇಳಿದ ಏಳು ಅಂಗಗಳನ್ನು ಚೆನ್ನಾಗಿ ಅಳವಡಿಸಿಕೊಂಡ ಸಾಧಕನು ನಿರ್ವಾಣವನ್ನು ಹೊಂದಲು ಅರ್ಹನಾಗುತ್ತಾನೆ. ಅದೇ ಜೀವನದ ಮುಖ್ಯ ಗುರಿ. ವೈರಾಗ್ಯ ಮತ್ತು ಶುದ್ಧ ಚಿಂತನೆಯ ಫಲವಾಗಿ ಸಾಧಕನು ಸತ್ಯದ ವಿತರ್ಕ ಮತ್ತು ವಿಚಾರಗಳನ್ನು ಮಾಡಿ ಆನಂದದಲ್ಲಿರುತ್ತಾನೆ. ಇದು ಧ್ಯಾನದ ಮೊದಲನೆಯ ಮೆಟ್ಟಿಲು. ಇಲ್ಲಿ ಮನಸ್ಸಿನ ಏಕಾಗ್ರತೆ ಉಂಟಾದಾಗ ಎಲ್ಲ ಸಂದೇಹಗಳು ದೂರವಾಗಿ ನಾಲ್ಕು ಆರ್ಯ ಸತ್ಯಗಳಲ್ಲಿ ನಂಬಿಕೆ ದೃಢವಾಗುತ್ತದೆ. ಆಗ ವಿತರ್ಕ, ವಿಚಾರಗಳು ಬೇಕಾಗುವುದಿಲ್ಲ. ಧ್ಯಾನದ ಈ ಎರಡನೆಯ ಮೆಟ್ಟಲು ಆನಂದ-ಶಾಂತಿಗಳನ್ನು ತುಂಬುತ್ತದೆ. ಏಕೆಂದರೆ ಈ ಸ್ಥಿತಿಯಲ್ಲಿ ಧ್ಯಾನ ಅವ್ಯಾಹತವಾಗಿರುತ್ತದೆ. ಮೂರನೆಯ ಮೆಟ್ಟಿಲಿನಲ್ಲಿ ಸಾಧಕನು ಧ್ಯಾನದ ಆನಂದದಲ್ಲೂ ವೈರಾಗ್ಯವನ್ನು ಹೊಂದುತ್ತಾನೆ. ಇದರಲ್ಲಿ ಅವನಿಗೆ ಪರಿಪೂರ್ಣ ಸಮತ್ವದ ಅನುಭವ ಉಂಟಾಗುತ್ತದೆ. ಇದನ್ನು ದಾಟಿ ಸಮಾಧಿಯ ನಾಲ್ಕನೆಯ ಮೆಟ್ಟಲನ್ನು ಏರಿ ಸುಖ ದುಃಖಗಳಿಗೆ ಅತೀತವಾದ ಸ್ಥಿತಿಯನ್ನು ತಲುಪುತ್ತಾನೆ. ಇದು ನಿರ್ವಾಣದ ಅತ್ಯುನ್ನತ ಶಿಖರ. ಇದರಲ್ಲಿ ದುಃಖದ ಸೋಂಕೇ ಇರುವುದಿಲ್ಲ. ಇದರಲ್ಲಿ ಪ್ರಜ್ಞೆ, ಶೀಲಗಳು ಪರಾಕಾಷ್ಠೆಯನ್ನು ಹೊಂದಿರುತ್ತವೆ.

ಹೀಗೆ ಬುದ್ಧನು ಸಕಲ ಜೀವರ ಹಿತಕ್ಕಾಗಿ, ದುಃಖ ನಿವೃತ್ತಿಗಾಗಿ ಅಷ್ಟಾಂಗ ಮಾರ್ಗವನ್ನು ಜಗತ್ತಿಗೆ ಬೋಧಿಸಿದನು. ಅವುಗಳ ಅನುಷ್ಠಾನವು 'ಬೌದ್ಧಧರ್ಮವು ನಮ್ಮದು' ಎಂದು ಹೇಳಿಕೊಳ್ಳುವ ದೇಶಗಳಲ್ಲೂ ಎಷ್ಟಿದೆಯೋ ತಿಳಿಯದು. ಬುದ್ಧನು ಬೋಧಿಸಿದ ತತ್ತ್ವಗಳು ಗ್ರಾಹ್ಯ ಎಂಬುದರಲ್ಲಿ ಸಂಶಯವಿಲ್ಲ.

ಬುದ್ಧಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ
ಧಮ್ಮಂ ಶರಣಂ ಗಚ್ಛಾಮಿ ||

ಬಿಜೆಪಿ ವತಿಯಿಂದ ಸಹಿ ಸಂಗ್ರಹ ಚಳವಳಿ

ಮೈಸೂರು,ಮೇ 6(ಹಿಎಂ)– ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿ ಬಿಜೆಪಿ ಮೈಸೂರು ನಗರ (ಜಿಲ್ಲಾ) ಪ್ರಕೋಷ್ಠಗಳ ವತಿಯಿಂದ ಕರ್ನಾಟಕ ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಪಾಕಿಸ್ತಾನಿ ಪ್ರಜೆಗಳನ್ನು ಗಡಿಪಾರು ಮಾಡಲು ಒತ್ತಾಯಿಸಿ ಮಂಗಳವಾರ ಸಹಿ ಸಂಗ್ರಹ ಚಳವಳಿ ನಡೆಸಲಾಯಿತು.

ಪಹಲ್ಗಾಮ್ ದಾಳಿ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಅನೇಕ ಕಠಿಣ ಕ್ರಮಗಳನ್ನು ಕೈಗೊಂಡಿದೆ. ಈ ಪೈಕಿ ಭಾರತದಲ್ಲಿ ನೆಲೆಸಿರುವ ಪಾಕಿಸ್ತಾನಿ ಪ್ರಜೆಗಳು 48 ಗಂಟೆಯೊಳಗೆ ಅವರ ದೇಶಕ್ಕೆ ಮರಳುವಂತೆ ಸೂಚನೆ ನೀಡಿರುವುದು ಸೇರಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಳ್ಳದ ಕಾರಣ ಪಾಕಿಸ್ತಾನಿ ಪ್ರಜೆಗಳು ರಾಜ್ಯದಲ್ಲೇ ನೆಲೆಸಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ ಎಂದು ಇದೇ ವೇಳೆ ಬಿಜೆಪಿ ಮುಖಂಡರು, ಕಾರ್ಯಕರ್ತರು ಆರೋಪಿಸಿದರು.



ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿ ಬಿಜೆಪಿ ವತಿಯಿಂದ ಸಹಿ ಸಂಗ್ರಹ ಚಳವಳಿ ನಡೆಸಲಾಯಿತು.

ಶಾಸಕ ಟಿ.ಎಸ್.ಶ್ರೀವತ್ಸ ಸಹಿ ಸಂಗ್ರಹ ಚಳವಳಿಗೆ ಚಾಲನೆ ನೀಡಿದರು. ನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್‌ಪ್ರಸಾದ್, ಕೆಆರ್ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲ್ ರಾಜ್ ಅರಸ್, ನಗರ ಪ್ರಕೋಷ್ಠಗಳ ಸಂಚಾಲಕ ಗೋಕುಲ್ ಗೋವರ್ಧನ್, ಬಿಜೆಪಿ ಮುಖಂಡರಾದ ಜೋಗಿ ಮಂಜು, ಜಯರಾಮ್, ನಿಶಾಂತ್ ಮತ್ತಿತರರು ಪಾಲ್ಗೊಂಡು, ಸಾರ್ವಜನಿಕರಿಂದ ಸಹಿ ಸಂಗ್ರಹಿಸಿದರು.

ಸಮೀಕ್ಷೆಯಲ್ಲಿ 'ಭೋವಿ ವಡ್ಡರ್' ಎಂದು ನಮೂದಿಸಲು ಮನವಿ



ಮೈಸೂರು,ಮೇ 6(ಹಿಎಂ)– ನ್ಯಾಯಮೂರ್ತಿ ಡಾ.ಹೆಚ್.ಎನ್. ನಾಗಮೋಹನ್ ದಾಸ್ ಅವರ ಏಕಸದಸ್ಯ ವಿಚಾರಣಾ ಆಯೋಗದಿಂದ ಪರಿಶಿಷ್ಟಜಾತಿ ಒಳಮೀಸಲಾತಿ ವರ್ಗೀಕರಣ ಸಂಬಂಧ ನಡೆಸುತ್ತಿರುವ ಪರಿಶಿಷ್ಟ ಜಾತಿ ಕುಟುಂಬಗಳ ಸಮೀಕ್ಷೆಯಲ್ಲಿ ಭೋವಿ ಸಮುದಾಯದವರು ಜಾತಿ ಕಾಲಂನಲ್ಲಿ 'ಭೋವಿ ವಡ್ಡರ್' ಎಂದು ನಮೂದಿಸಬೇಕು ಎಂದು ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಭೋವಿ ಹಿತರಕ್ಷಣಾ ಸಮಿತಿ ಅಧ್ಯಕ್ಷ ಹಾಗೂ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಜಿ.ನಾಗರಾಜು ಕೋರಿದ್ದಾರೆ.

ಸಚಿವ ಕೆ.ಎನ್.ರಾಜಣ್ಣ ಅಭಿನಂದನಾ ಸಮಾರಂಭದ ಪೂರ್ವಭಾವಿ ಸಭೆ

ಮೈಸೂರು ಭಾಗದ ನಾಯಕ ಸಮುದಾಯದ ಹೆಚ್ಚಿನ ಜನ ಭಾಗಿ





ಸಚಿವ ಕೆ.ಎನ್.ರಾಜಣ್ಣ ಜನ್ಮದಿನದ ಅಭಿನಂದನಾ ಸಮಾರಂಭದ ಹಿನ್ನೆಲೆಯಲ್ಲಿ ಮೈಸೂರಿನ ಲಲಿತಮಹಲ್ ಪ್ಯಾಲೇಸ್ ಹೋಟೆಲ್ ಸಭಾಂಗಣದಲ್ಲಿ ಸೋಮವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು, ವಿಧಾನಪರಿಷತ್ ಸದಸ್ಯ ಕೆ.ಆರ್.ರಾಜೇಂದ್ರ ಹಾಗೂ ಸಮುದಾಯದ ಮುಖಂಡರು ಪಾಲ್ಗೊಂಡಿದ್ದರು.

ಮೈಸೂರು,ಮೇ 6(ಎಂಟಿವೈ)– ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರ ಜನ್ಮದಿನದ ಅಂಗವಾಗಿ ಮೇ 13ರಂದು ತುಮಕೂರಿನಲ್ಲಿ ನಡೆಯುವ ಅಭಿನಂದನಾ ಸಮಾರಂಭದಲ್ಲಿ ಮೈಸೂರು ಭಾಗದಿಂದ ನಾಯಕ ಸಮುದಾಯದ ಹೆಚ್ಚಿನ ಜನರನ್ನು ಕರೆದೊಯ್ಯಲು ಒಕ್ಕೊರಲಿನಿಂದ ನಿರ್ಣಯ ಕೈಗೊಳ್ಳಲಾಯಿತು.

ಮೈಸೂರಿನ ಲಲಿತಮಹಲ್ ಹೋಟೆಲ್ ಸಭಾಂಗಣದಲ್ಲಿ ಶಾಸಕ, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್ ಚಿಕ್ಕಮಾದು ಅಧ್ಯಕ್ಷತೆಯಲ್ಲಿ ನಡೆದ ನಾಯಕ ಸಮುದಾಯದ ಮುಖಂಡರ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡಿದ್ದ ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಯ ನಾಯಕ ಸಮುದಾಯದ ಮುಖಂಡರು, ಸಚಿವ ಕೆ.ಎನ್.ರಾಜಣ್ಣ ಅವರ ಅಭಿನಂದನಾ ಸಮಾರಂಭಕ್ಕೆ ಮೈಸೂರು ಭಾಗದಿಂದ ಪಕ್ಷಾತೀತವಾಗಿ ಹೆಚ್ಚಿನ ಸಮುದಾಯದವರನ್ನು ಸಂಘಟಿಸಿ ಬೆಂಬಲ ಸೂಚಿಸಲು ನಿರ್ಧರಿಸಲಾಯಿತು.

ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಕೆ.ಆರ್.ರಾಜೇಂದ್ರ ಮಾತನಾಡಿ, ಕಳೆದ ಐವತ್ತು ವರ್ಷಗಳಿಂದ ಸಹಕಾರ, ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡಿಕೊಂಡು ಬಂದಿರುವ ಸಚಿವ ಕೆ.ಎನ್.ರಾಜಣ್ಣ ಅವರ ಅಮೃತ ಮಹೋತ್ಸವವು ಪಕ್ಷಾತೀತವಾಗಿ ನಡೆಯಲಿದೆ. ಸಮಾಜದ ಹಿರಿಯ ಮುಖಂಡರಾದ ಇವರ ಕುರಿತಾಗಿ ಅಭಿನಂದನಾ ಗ್ರಂಥ ತರಲಾಗುತ್ತಿದೆ. ಸಮುದಾಯದ ಜನ ಸ್ವಯಂ ಪ್ರೇರಣೆಯಿಂದ ಸಮಾರಂಭದಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಕೆ.ಎನ್.ರಾಜಣ್ಣ ಅವರು ಸಹಕಾರ ಇಲಾಖೆ ಸಚಿವರಾದ ಬಳಿಕ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ನಾಯಕ ಸಮಾಜವನ್ನು ದೊಡ್ಡಣ್ಣನಾಗಿ ಮುನ್ನಡೆಸುತ್ತಿದ್ದಾರೆ. ಇಂತಹವರ ಅಮೃತ ಮಹೋತ್ಸವ ನಡೆಯುತ್ತಿರುವುದರಿಂದ ಸಮುದಾಯದ ಹೆಚ್ಚಿನ ಜನ ಭಾಗಿಯಾಗಬೇಕು ಎಂದು ಮನವಿ ಮಾಡಿದರು.

ಮುಖಂಡರ ಅಸಮಾಧಾನ: ಸಭೆಯಲ್ಲಿ ಪಾಲ್ಗೊಂಡಿದ್ದ ಕೆಲ ಮುಖಂಡರು ಮಾತನಾಡಿ, ಇತ್ತೀಚಿನ ವರ್ಷಗಳಲ್ಲಿ ನಾಯಕ ಸಮುದಾಯದ ಮುಖಂಡರಿಗೆ ಸೂಕ್ತ ಪ್ರಾತಿನಿಧ್ಯ ಅವಕಾಶ ಸಿಗುತ್ತಿಲ್ಲ. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳಲ್ಲೂ ನಾಯಕ ಸಮುದಾಯದ ಮುಖಂಡರಿಗೆ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ. ಹಲವು ವರ್ಷಗಳಿಂದ ದುಡಿದಿರುವ ಸಮುದಾಯದ ಹಲವು ಮುಖಂಡರಿದ್ದರೂ ಅಧಿಕಾರ ಕೊಡುವಾಗ ಹಿಂದೇಟು ಹಾಕುತ್ತಾರೆ. ಇದರಿಂದಾಗಿ ನಾಯಕ ಸಮಾಜಕ್ಕೆ ಅನ್ಯಾಯವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.


ಮೈಸೂರು ಭಾಗದ ಹಿರಿಯ ನಾಯಕರೊಬ್ಬರಿಗೆ ವಿಧಾನಪರಿಷತ್ ಸದಸ್ಯ ಸ್ಥಾನ ದೊರೆಯಬೇಕಿತ್ತಾದರೂ ಸಿಗಲಿಲ್ಲ. ಬಿ.ನಾಗೇಂದ್ರ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಅನಿಲ್ ಚಿಕ್ಕಮಾದು ಅವರನ್ನು ಪರಿಗಣಿಸಿ, ಮಂತ್ರಿ ಸ್ಥಾನ ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು ಆದರೆ, ಖಾಲಿ ಉಳಿಸಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಸಮುದಾಯದ ಮುಖಂಡರಿಗೆ ಸೂಕ್ತ ಅವಕಾಶ ನೀಡದೇ ಇದ್ದರೆ, ಅಂತಹ ಪಕ್ಷಕ್ಕೆ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಭೆಯಲ್ಲಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜು, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ, ಕೇಂದ್ರೀಯ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಚಾಮರಾಜನಗರ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ಚಂದ್ರು, ನಗರಪಾಲಿಕೆ ಮಾಜಿ ಸದಸ್ಯ ಲೋಕೇಶ್ (ಪಿಯಾ), ಕೆಂಪನಪುರ ಗ್ರಾಪಂ ಅಧ್ಯಕ್ಷ ಆರ್.ಮಾದೇಶ್, ಜಿಪಂ ಮಾಜಿ ಉಪಾಧ್ಯಕ್ಷರಾದ ಶಿವಮ್ಮ, ಮಾಜಿ ಸದಸ್ಯರಾದ ತಲಕಾಡು ಮಂಜುನಾಥನ್, ಅರಕಲವಾಡಿ ಸೋಮನಾಯಕ, ಕಲ್ಲಂಬಳ್ಳಿ ಪುಟ್ಟಶ್ರೀನಿವಾಸನಾಯಕ, ಕೊಪ್ಪಾಳಿ ಮಹದೇವನಾಯಕ, ಮುಖಂಡರಾದ ತಿಪ್ಪೂರು ಮಹದೇವ ನಾಯಕ, ಉದ್ಬೂರು ಸೋಮಣ್ಣ, ದೇವರಾಜ್ ಟಿಕಾಟೂರು, ದ್ಯಾವಪ್ಪನಾಯಕ, ಹುಣಸೂರು ಪ್ರಭಾಕರ್, ಸಾಕನಾಯಕ, ಮಹದೇವಸ್ವಾಮಿ, ರೋಹಿತ್, ರವಿಕುಮಾರ್, ಜಗದೀಶ್ ಮೂರ್ತಿ, ಶಂಕರ್‌ನಾಯಕ ವಿವಿಧ ಪಕ್ಷಗಳ ಮುಖಂಡರು ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಹಾಸನ ಮಿತ್ರ

ವೈದ್ಯಾಧಿಕಾರಿಗಳಿಂದ ಭ್ರಷ್ಟಾಚಾರ: ಹೆಚ್.ಡಿ. ರೇವಣ್ಣ ಆರೋಪ



ಅರಸೀಕೆರೆ ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ನೂತನ ಐಸಿಯು ಘಟಕ ಹಾಗೂ 2ನೇ ಶಸ್ತ್ರಚಿಕಿತ್ಸಾ ಘಟಕವನ್ನು ಶಾಸಕ ಹೆಚ್.ಡಿ.ರೇವಣ್ಣ ಉದ್ಘಾಟಿಸಿದರು.

ಹೊಳೆನರಸೀಪುರ: ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಪ್ರತೀ ವರ್ಷ ಸರ್ಕಾರ 18 ಲಕ್ಷ ಹಣ ಬಿಡುಗಡೆ ಮಾಡುತ್ತದೆ. ಆದರೆ ಇದು ಗ್ರಾಮೀಣ ಜನರಿಗೆ ಬಳಕೆ ಆಗುತ್ತಿಲ್ಲ. ಹೊಳೆನರಸೀಪುರ ತಾಲೂಕು ಆಡಳಿತ ವೈದ್ಯಾಧಿಕಾರಿ ಡಾ.ರಾಜೇಶ್ ಹಾಗೂ ಜಿಲ್ಲಾಡಳಿತ ವೈದ್ಯಾಧಿಕಾರಿ ಡಾ.ಅನಿಲ್ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಈ ಬಗ್ಗೆ ಆರೋಗ್ಯ ಇಲಾಖೆ ಹಿರಿಯ ಅಧಿಕಾರಿಗಳು ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಶಾಸಕ ಎಚ್.ಡಿ.ರೇವಣ್ಣ ಆಗ್ರಹಿಸಿದರು.

ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ನೂತನ ಐಸಿಯು ಘಟಕ ಹಾಗೂ 2ನೇ ಶಸ್ತ್ರಚಿಕಿತ್ಸಾ ಘಟಕ ಉದ್ಘಾಟಿಸಿ ಮಾತನಾಡಿ, ನಮ್ಮ ಪಡವಲಹಿಪ್ಪೆಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಈ ಹಿಂದೆ ಉತ್ತಮ ಸೇವೆ ಸಿಗುತ್ತಿತ್ತು. ಆದರೆ ಈಗ ಆಸ್ಪತ್ರೆಯು ಮುಚ್ಚುವ ಹಂತ ತಲುಪಿದೆ ಆದರೂ ಯಾರ ವಿರುದ್ಧ ಕ್ರಮ ತೆಗೆದುಕೊಂಡಿಲ್ಲ ಎಂದರು.

ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲೂ ಡಿ ಗ್ರೂಪ್ ಮತ್ತು ದಿನಗೂಲಿ ನೌಕರರು ವೈದ್ಯರನ್ನು ನಿಯಂತ್ರಿಸುತ್ತಿದ್ದಾರೆ ಎನ್ನುವ ಆರೋಪ ವ್ಯಾಪಕವಾಗಿದೆ. ನೀವು ವೈದ್ಯರು ತಲೆಕೆಡಿಸಿಕೊಳ್ಳಬೇಡಿ. ಸರಿಯಾಗಿ ಕೆಲಸ ಮಾಡದವರನ್ನು ಮುಲಾಜಿಲ್ಲದೆ ತೆಗೆದುಹಾಕಿ ಎಂದು ಸಲಹೆ ನೀಡಿದರು. ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಧನ್‌ಶೇಖರ್ ಮಾತನಾಡಿದರು.

ಡಾ. ಸೆಲ್ವಕುಮಾರ್, ಡಾ.ನಾಗೇಂದ್ರ, ಡಾ.ಕುಸುಮಾ, ಡಾ.ರೇಖಾ, ಡಾ.ಅಶ್ವತಿ, ಡಾ.ಸತ್ಯಪ್ರಕಾಶ್, ಡಾ.ಲೋಕೇಶ್, ಡಾ.ಅಜಯ್ ಅವರನ್ನು ಶಾಸಕರು ಸನ್ಮಾನಿಸಿದರು. ತಹಶೀಲ್ದಾರ್ ರೇಣುಕುಮಾರ್, ಬಿ.ಇ.ಒ ಸೋಮಲಿಂಗೇಗೌಡ, ಸಮಾಜ ಕಲ್ಯಾಣಾಧಿಕಾರಿ ಕೃಷ್ಣಮೂರ್ತಿ ಇದ್ದರು.

ಮಕ್ಕಳ ನಾಟಕೋತ್ಸವದ ಬಾಲ್ಯ– ಅಮೂಲ್ಯ ಚಿಣ್ಣರ ಮೇಳಕ್ಕೆ ಚಾಲನೆ

ಬಾಲ್ಯದಲ್ಲಿ ಕಷ್ಟಗಳ ಎದುರಿಸಿದವರು ಉತ್ತಮ ಜೀವನ ಕಟ್ಟಿಕೊಳ್ಳುತ್ತಾರೆ; ಸಚಿವ ಮಹದೇವಪ್ಪ ಅಭಿಮತ



ಮಕ್ಕಳ ನಾಟಕೋತ್ಸವದ ಬಾಲ್ಯ–ಅಮೂಲ್ಯ ಚಿಣ್ಣರ ಮೇಳ–2025ಕ್ಕೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಂಗಳವಾರ ಚಾಲನೆ ನೀಡಿದರು.

ಮೈಸೂರು ಮೇ 6(ಎಸ್‌ಪಿಎನ್)– ಮೈಸೂರು ರಂಗಾಯಣ ಆವರಣದ ವನರಂಗದಲ್ಲಿ ನಾಲ್ಕು ದಿನ ನಡೆಯುವ ಮಕ್ಕಳ ನಾಟಕೋತ್ಸವದ ಬಾಲ್ಯ– ಅಮೂಲ್ಯ ಚಿಣ್ಣರ ಮೇಳ–2025ಕ್ಕೆ ಸಮಾಜ ಕಲ್ಯಾಣ ಇಲಾಖೆ ಸಚಿವರೂ ಆದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಂಗಳವಾರ ಚಾಲನೆ ನೀಡಿದರು.

> ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪಾದರಸದ ರೀತಿ ಅವರಿಗೆ ವಹಿಸಿದ ಖಾತೆಗೆ ಪ್ರಾಮಾಣಿಕವಾಗಿ ದುಡಿಯುತ್ತಿದ್ದಾರೆ. ದಿನ ಪೂರ್ತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಇಲಾಖಾ ಕೆಲಸಗಳಿಗೂ, ಜನಸಾಮಾನ್ಯರ ಸಮಸ್ಯೆಯತ್ತ ಗಮನಹರಿಸುತ್ತಿರುವುದು ಅವರ ವಿಶೇಷ ಗುಣ. ಈ ರೀತಿ ಕಾಯಕ ಎಲ್ಲರಿಗೂ ಬರುವುದಿಲ್ಲ.
> – **ಜಿ.ಟಿ.ದೇವೇಗೌಡ,** ಶಾಸಕ

ನಂತರ ಮಾತನಾಡಿದ ಅವರು, ಮಕ್ಕಳ ಬಾಲ್ಯವನ್ನು ಹತ್ತಿರದಿಂದ ಕಣ್ತುಂಬಿಕೊಳ್ಳುವುದೇ ಚೆಂದ. ಅವರ ಆಟ–ಪಾಠ ಎಲ್ಲವನ್ನೂ ಸವಿಯುವುದು ಪೋಷಕರಿಗೆ ಆನಂದ. ಬಾಲ್ಯದಲ್ಲಿ ಮಕ್ಕಳಿಗೆ ಕಷ್ಟಗಳು ತಿಳಿಯುವುದಿಲ್ಲ. ನಮ್ಮ ಪೂರ್ವಜರು ಕಷ್ಟದಲ್ಲಿ ಬೆಳೆದು, ನಮಗೆ ಸುಖದ ದಿನಗಳನ್ನು ಬಿಟ್ಟು ಹೋಗಿದ್ದಾರೆ. ಅವರ ತ್ಯಾಗವನ್ನು ಇಂದಿನ ಪೀಳಿಗೆ ಮರೆಯಬಾರದು ಎಂದರು.

ಹಿರಿಯ ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಅವರ ಬಾಲ್ಯ ಕಷ್ಟದಿಂದ ಕೂಡಿತ್ತು. ಆ ಕಷ್ಟದಲ್ಲೂ ಸಾಹಿತ್ಯ ಕ್ಷೇತ್ರದಲ್ಲಿ ಬೆಳೆದು, ಹಲವು ರೀತಿ ಸಮಾಜ ಸುಧಾರಣೆಯಲ್ಲಿ ಭಾಗವಹಿಸಿದ್ದಾರೆ. ಅವರ ಸಾಧನೆ ಇಂದಿನವರೆಗೆ ಆದರ್ಶಪ್ರಾಯ ಎಂದರಲ್ಲದೆ, ಕಷ್ಟದ ದಿನಗಳು ಅಂಬೇಡ್ಕರ್ ಅವರಿಗೂ ಬಿಟ್ಟಿಲ್ಲ. ಆದರೆ, ಅವರು ಬಾಲ್ಯದ ದಿನಗಳಲ್ಲಿ ಅನುಭವಿಸಿದ್ದಷ್ಟು ನೋವನ್ನು ನಾವು–ನೀವು ಅನುಭವಿಸಿಲ್ಲ. ಕಷ್ಟವಿದ್ದರೂ ಅವರ ಸಾಧನೆ ಇಂದಿನವರೂ ಯಾರು ಮಾಡಲು ಸಾಧ್ಯವಿಲ್ಲ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಎಲ್ಲರೂ ಮಲಗಿದ ನಂತರ ಒಬ್ಬರೆ ಕುಳಿತು ವ್ಯಾಸಂಗ ಮುಂದುವರೆಸಿ, ಹಲವು ಪದವಿಗಳನ್ನು ತಮ್ಮದಾಗಿಸಿಕೊಂಡರು. ಹಾಗಾಗಿ ಬಾಲ್ಯದಲ್ಲಿ ಕಷ್ಟದ ದಿನಗಳನ್ನು ಎದುರಿಸಿದ ವಿದ್ಯಾರ್ಥಿ, ಮುಂದಿನ ಜೀವನ ಕಟ್ಟಿಕೊಳ್ಳಲು ಸಮರ್ಥನಿರುತ್ತಾನೆ. ಇದಕ್ಕೆ ಡಾ.ಬಿ.ಆರ್.ಅಂಬೇಡ್ಕರ್, ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಸೇರಿದಂತೆ ಹಲವು ಸಾಧಕರೆ ಸಾಕ್ಷಿ ಎಂದರು.

ಕೋಟಿಗಾನಹಳ್ಳಿ ರಾಮಯ್ಯನವರು ತಮ್ಮ ಜೀವನದ ಉದ್ದಕ್ಕೂ ದಮನಿತ ಸಮುದಾಯಗಳ ದನಿಯಾಗಿ, ಹಾಡುಗಳನ್ನು ಕಟ್ಟುತ್ತಾ, ನಾಟಕಗಳನ್ನು ಆಡಿಸುತ್ತಾ, ನೂರಾರು ಕಥೆಗಳ ಬರೆದಿದ್ದಾರೆ. ಅವರ ಬರವಣಿಗೆಗಳು ಯುವ ಸಮುದಾಯಗಳಲ್ಲಿ ಸ್ವಾಭಿಮಾನದ ಕಿಚ್ಚು ಹಚ್ಚುತ್ತಾ, ಮಕ್ಕಳಲ್ಲಿ ಕನಸಿನ ಬೀಜಗಳನ್ನು ಬಿತ್ತುತ್ತಾ ಊರೂರು ಸುತ್ತುವ ಜ್ಞಾನ ಕಣಜ ಎಂದೇ ಕರೆಸಿಕೊಂಡಿದ್ದಾರೆ ಎಂದರು.

ಇಂತಹ ಸಾಧಕರ ಮಾರ್ಗದರ್ಶನದಲ್ಲಿ ಚಿಣ್ಣರ ಮೇಳದ ಮಕ್ಕಳು 12 ನಾಟಕಗಳನ್ನು ಕಲಿತು ಪ್ರದರ್ಶನ ನೀಡುತ್ತಿರುವುದು ಉತ್ತಮ ಬೆಳವಣಿಗೆ. ನಾಟಕ ಪ್ರದರ್ಶನ ಸಂದರ್ಭದಲ್ಲಿ ಮಾತು ಕಡಿಮೆ ಇರಬೇಕು. ಮಕ್ಕಳ ಅಭಿನಯವನ್ನು ಮನೆಮಂದಿಯೆಲ್ಲ ಕುಳಿತು ನೋಡಿ ಆನಂದಿಸಿ ಎಂದು ಸಲಹೆ ನೀಡಿದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಮಕ್ಕಳು ಓದಿನ ಜೊತೆ ಇತರೆ ಚಟುವಟಿಕೆಗಳಲ್ಲೂ ಭಾಗವಹಿಸಬೇಕು. ಮಕ್ಕಳು ಚಟುವಟಿಕೆಗಳಲ್ಲಿ ತೊಡಗಿದ್ದರೆ, ಆ ಮಗು ದಿನ ಪೂರ್ತಿ ಉತ್ಸಾಹದಲ್ಲಿರುತ್ತದೆ. ಆದರೆ, ಮಕ್ಕಳನ್ನು ಆಟ–ಪಾಠ– ಇತರೆ ಚಟುವಟಿಕೆಗಳಲ್ಲಿ ತೊಡಗಿಸಲು ಪ್ರೋತ್ಸಾಹಿಸುವುದು ಪೋಷಕರ ಜವಾಬ್ದಾರಿ ಎಂದರು.

ವೇದಿಕೆಯಲ್ಲಿ ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ, ರಂಗಸಮಾಜದ ಸದಸ್ಯರಾದ ಲಕ್ಷ್ಮೀ ಚಂದ್ರಶೇಖರ್, ಸುರೇಶ್ ಬಾಬು, ಶಿಬಿರದ ನಿರ್ದೇಶಕ ಅನಿಲ್ ರೇವೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು. ನಂತರ ರಂಗಕರ್ಮಿ ಎ.ಎಂ.ಕವಿತ ನಿರ್ದೇಶನ 'ಊರು ಮನೆ' ನಾಟಕ ಹಾಗೂ ಕಲಾವಿದೆ ಅಶೋಕ್ ಕೊಡಗು ನಿರ್ದೇಶನದ 'ಸಾವಿತ್ರಿಬಾಯಿ ಫುಲೆ' ನಾಟಕ ಪ್ರದರ್ಶನಗೊಂಡು, ಪ್ರೇಕ್ಷಕರ ಮನ ಸೆಳೆಯಿತು.

ಕಾಂತಾರ ಚಾಪ್ಟರ್ 1ರ ಸಹ ಕಲಾವಿದ ಸಾವು



ಉಡುಪಿ: ರಾಷ್ಟ್ರ ಪ್ರಶಸ್ತಿ ವಿಜೇತ ನಟ, ನಿರ್ದೇಶಕ ರಿಷಬ್ ಶೆಟ್ಟಿ ನಿರ್ದೇಶನದ ಕಾಂತಾರ ಚಾಪ್ಟರ್ 1 ಚಿತ್ರಕ್ಕೆ ಸಾಲು ಸಾಲು ಸಂಕಷ್ಟಗಳು ಎದುರಾಗುತ್ತಿವೆ. ಕೇರಳ ಮೂಲದ ಸಹ ಕಲಾವಿದ ಕಪಿಲ್ ಎಂಬುವರು ನದಿಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನ ಕೊಲ್ಲೂರಿನ ಸೌಪರ್ಣಿಕ ನದಿಯಲ್ಲಿ ಈಜಲು ತೆರಳಿದ್ದಾಗ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಕೊಲ್ಲೂರಿನಲ್ಲಿ ಚಿತ್ರದ ಶೂಟಿಂಗ್ ನಡೆಯುತ್ತಿದ್ದಾಗ ಚಿತ್ರದ ಸಹ ಕಲಾವಿದರ ಜೊತೆ ಕಪಿಲ್ ಹೋಗಿದ್ದಾಗ ಈ ಘಟನೆ ನಡೆದಿದೆ.

ಮೇಲುಕೋಟೆ ಬಳಿ ಶಿಕ್ಷಕಿ ದೀಪಿಕಾ ಬರ್ಬರ ಹತ್ಯೆ ಪ್ರಕರಣ

ಹತ್ಯೆ ಪ್ರಕರಣದ ಆರೋಪಿ ತಂದೆಯ ಭೀಕರ ಕೊಲೆ

● ಮಗಳ ಕೊಲೆಗೆ ತಂದೆಯ ಪ್ರತೀಕಾರ ● ಮೇಲುಕೋಟೆ ಠಾಣೆ ವ್ಯಾಪ್ತಿ ಬೆಳ್ಳಾಳೆ ಬಳಿ ಘಟನೆ


ಮೇಲುಕೋಟೆ, ಮೇ 6– ಕಳೆದ ವರ್ಷ ರಾಜ್ಯವನ್ನೇ ಬೆಚ್ಚಿ ಬೀಳಿಸಿದ್ದ ಪ್ರಸಿದ್ಧ ಯಾತ್ರಾಸ್ಥಳ ಮೇಲುಕೋಟೆ ಬಳಿ ಖಾಸಗಿ ಶಾಲೆಯ ಶಿಕ್ಷಕಿ ದೀಪಿಕಾ ಹತ್ಯೆ ಪ್ರಕರಣದ ಆರೋಪಿ ನಿತೀಶ್ ತಂದೆಯನ್ನು ಭೀಕರವಾಗಿ ಹತ್ಯೆ ಮಾಡಲಾಗಿರುವ ಘಟನೆ ಪಾಂಡವಪುರ ತಾಲೂಕಿನ ಮೇಲುಕೋಟೆ ಪೊಲೀಸ್ ಠಾಣಾ ವ್ಯಾಪ್ತಿಯ ಬೆಳ್ಳಾಳೆ ಗ್ರಾಮದಲ್ಲಿ ಮಂಗಳವಾರ ಬೆಳಿಗ್ಗೆ ಸಂಭವಿಸಿದೆ.

ಮಾಣಿಕ್ಯನಹಳ್ಳಿ ಗ್ರಾಮದ ನಿವಾಸಿ ನರಸಿಂಹ (52) ಹತ್ಯೆಗೀಡಾಗಿದ್ದು, ಮಗಳ ಕೊಲೆಗೆ ಪ್ರತೀಕಾರವಾಗಿ ದೀಪಿಕಾಳ ತಂದೆ, ತನ್ನ ಸ್ನೇಹಿತನೊಂದಿಗೆ ಸೇರಿ ಆರೋಪಿ ನಿತೀಶ್ ತಂದೆಯನ್ನು ಚಾಕುವಿನಿಂದ ಇರಿದು ಬರ್ಬರವಾಗಿ ಹತ್ಯೆ ಮಾಡಿದ್ದಾರೆ ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.

ಮಂಗಳವಾರ ಬೆಳಿಗ್ಗೆ ಸುಮಾರು 7.45ರಲ್ಲಿ ಬೆಳ್ಳಾಳೆ ಗ್ರಾಮದ ಶ್ರೀ ಭೈರವೇಶ್ವರ ಚಿಕನ್ ಸೆಂಟರ್ ಬಳಿ ಈ ಘಟನೆ ನಡೆದಿದ್ದು, ಕೊಲೆ ಮಾಡಿದ ಆದೇ ಮಾಣಿಕ್ಯನಹಳ್ಳಿ ಗ್ರಾಮದ ವೆಂಕಟೇಶ್ ಹಾಗೂ ಆತನ ಸ್ನೇಹಿತ ಮಂಜುನಾಥ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಪ್ರಕರಣದ ವಿವರ: ಮಾಣಿಕ್ಯನಹಳ್ಳಿ ಗ್ರಾಮದ ವೆಂಕಟೇಶ್ ಅವರ ಮಗಳು ದೀಪಿಕಾ ಮತ್ತು ನರಸಿಂಹನ ಪುತ್ರ ನಿತೀಶ್ ಸ್ನೇಹಿತರಾಗಿದ್ದರು. ಇಬ್ಬರ ನಡುವೆ ಜಗಳ ನಡೆದು ನಿತೀಶ್ 2024 ಜನವರಿ 20ರಂದು ಮೇಲುಕೋಟೆಯ ಶ್ರೀ ಯೋಗಾನರಸಿಂಹ ಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ದೀಪಿಕಾಳ ಹತ್ಯೆ ಮಾಡಿ, ಜೈಲು ಸೇರಿದ್ದ. ಇದಾದ ಬಳಿಕ ಎರಡು ಕುಟುಂಬದ ನಡುವೆ ವೈಷಮ್ಯ ಏರ್ಪಟ್ಟಿದ್ದು, ನರಸಿಂಹನ ಮಗಳ ಮದುವೆ ಇದೇ ಭಾನುವಾರ ಧರ್ಮಸ್ಥಳದಲ್ಲಿ ನಿಗದಿಯಾಗಿತ್ತು. ಮಗ ನಿತೀಶ್ ಇತ್ತೀಚೆಗೆ ಜಾಮೀನಿನ ಮೇಲೆ ಹೊರಬಂದಿದ್ದ. ಭಾನುವಾರ ಮದುವೆ ಇದ್ದಿದ್ದರಿಂದ ತಯಾರಿ ಜೋರಾಗಿ ನಡೆದಿತ್ತು. ಆಹ್ವಾನ ಪತ್ರಿಕೆ ಹಂಚಲಾಗಿತ್ತು. ಇಂದು ಆಕಸ್ಮಿಕವಾಗಿ ಟೀ ಅಂಗಡಿಯೊಂದರ ಮುಂದೆ ನರಸಿಂಹ ಮತ್ತು ವೆಂಕಟೇಶ್ ಮುಖಾಮುಖಿಯಾಗಿದ್ದಾರೆ. ಈ ವೇಳೆ ಮಾತಿಗೆ ಮಾತು ಬೆಳೆದು, ಈ ಹತ್ಯೆ ನಡೆದಿದೆ ಎಂದು ಹೇಳಲಾಗಿದೆ.

ಈ ಸಂಬಂಧ ಸ್ಥಳಕ್ಕೆ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಬೆರಳಚ್ಚು ತಜ್ಞರು, ಶ್ವಾನದಳ ಭೇಟಿ ನೀಡಿ ಪರಿಶೀಲನೆ ನಡೆಸಿತು. ಶವವನ್ನು ಪಾಂಡವಪುರ ಸರ್ಕಾರಿ ಆಸ್ಪತ್ರೆಗೆ ರವಾನಿಸಿ, ಮರಣೋತ್ತರ ಪರೀಕ್ಷೆ ನಡೆಸಿ



ವರ್ಷದ ಹಿಂದೆ ಕೊಲೆಯಾಗಿದ್ದ ದೀಪಿಕಾ



ಕೊಲೆಯಾದ ನರಸಿಂಹ

ದೇಹ ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ. ಮೇಲುಕೋಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ವಿಚಾರಣೆ ನಡೆಸುತ್ತಿದ್ದಾರೆ.

ಘಟನೆ ಬಗ್ಗೆ ನರಸಿಂಹನ ಮಗ ನಿತೀಶ್ ಮಾತನಾಡಿ, ನನ್ನ ಮತ್ತು ದೀಪಿಕಾ ನಡುವೆ ಸ್ನೇಹವಿತ್ತು. ಆದರೆ ಆಕೆಯ ಕೊಲೆಗೂ ನನಗೂ ಸಂಬಂಧವಿಲ್ಲ. ಆಕೆಯ ಕೊಲೆಯನ್ನು ನನ್ನ ಮೇಲೆ ಹಾಕಿದ್ದಾರೆ. ದೀಪಿಕಾಳನ್ನು ನಾನು ಕೊಲೆ ಮಾಡಿದ್ದೀನಾ ಅಥವಾ ಇಲ್ಲವೇ ಎಂಬುದನ್ನು ಕೋರ್ಟ್ ನಿರ್ಧಾರ ಮಾಡುತ್ತದೆ. ಆದರೆ ಅದೇ ದ್ವೇಷದಲ್ಲಿ ನಮ್ಮ ಅಪ್ಪನನ್ನ ಹತ್ಯೆ ಮಾಡಿದ್ದಾರೆ. ನಮ್ಮ ಅಪ್ಪನ ಸಾವಿಗೆ ನ್ಯಾಯ ಬೇಕು.

ಘಟನೆ ಬಗ್ಗೆ ಪ್ರತಿಕ್ರಿಯಿಸಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಮಂಗಳವಾರ ಬೆಳಿಗ್ಗೆ 8 ಗಂಟೆ ಸಮಯದಲ್ಲಿ ಬೆಳ್ಳಾಳೆ ಗ್ರಾಮದಲ್ಲಿ ಈ ಕೊಲೆ ನಡೆದಿದ್ದು, ಮಾಣಿಕ್ಯನಹಳ್ಳಿ ಗ್ರಾಮದ ನರಸಿಂಹ ಎಂಬ ವ್ಯಕ್ತಿ ಹತ್ಯೆಯಾಗಿದ್ದಾನೆ. ಮೇಲುಕೋಟೆ ಠಾಣೆಯ ಇನ್ಸ್‌ಪೆಕ್ಟರ್ ಅಶೋಕ್‌ಕುಮಾರ್ ನೇತೃತ್ವದಲ್ಲಿ ವಿಚಾರಣೆ ನಡೆಯುತ್ತಿದೆ. ಹಳೇ ದ್ವೇಷದ ಹಿನ್ನಲೆಯಲ್ಲಿ ವೆಂಕಟೇಶ್ ಮತ್ತು ಆತನ ಸ್ನೇಹಿತ ಕೊಲೆ ಮಾಡಿದ್ದಾರೆಂಬ ಪ್ರಾಥಮಿಕ ಮಾಹಿತಿ ನಮಗೆ ಲಭ್ಯವಾಗಿದೆ ಎಂದು ಸ್ಪಷ್ಟಪಡಿಸಿದರು.

ಕಳೆದ ವರ್ಷ ನರಸಿಂಹನ ಮಗ ನಿತೀಶ್ ಹಾಗೂ ಕೊಲೆಯಾದ ವೆಂಕಟೇಶ್ ಮಗಳು ದೀಪಿಕಾ ನಡುವೆ ಸ್ನೇಹ ಮತ್ತು ಪ್ರೀತಿ ಇತ್ತು ಎನ್ನಲಾಗಿದ್ದು, ಇಬ್ಬರ ನಡುವೆ ಮನಸ್ತಾಪ ಉಂಟಾಗಿ ನಿತೀಶ್ ದೀಪಿಕಾಳನ್ನು ಹತ್ಯೆ ಮಾಡಿರುವ ಆರೋಪದ ಮೇಲೆ ಜೈಲಿಗೆ ಹೋಗಿ ಬಂದಿದ್ದ. ಭಾನುವಾರ ನರಸಿಂಹನ ಮಗಳ ಮದುವೆ ನಿಗದಿಯಾಗಿತ್ತು. ಇಂದು ನರಸಿಂಹ ಮತ್ತು ವೆಂಕಟೇಶ್ ಮುಖಾಮುಖಿಯಾಗಿದ್ದು, ನನ್ನ ಮಗಳನ್ನು ಕೊಂದು ನಿನ್ನ ಮಗಳ ಮದುವೆ ಮಾಡುತ್ತಿದ್ದೀಯಾ ಎಂದು ಜಗಳ ಶುರುವಾಗಿದೆ. ಜಗಳ ವಿಕೋಪಕ್ಕೆ ಹೋಗಿ ವೆಂಕಟೇಶ್ ಮತ್ತು ಮಂಜುನಾಥ್, ನರಸಿಂಹನ ಮೇಲೆ ಚಾಕುವಿನಿಂದ ಹಲ್ಲೆ ಮಾಡಿ ಕೊಂದಿದ್ದಾರೆಂಬ ಮಾಹಿತಿ ಲಭ್ಯವಾಗಿದೆ ಎಂದು ತಿಳಿಸಿದರು.

ಓರ್ವ ಆರೋಪಿಯ ಕೈಗೆ ಪೆಟ್ಟು ಬಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಮಗಳ ಕೊಲೆಯಿಂದ ವೆಂಕಟೇಶ್ ಮತ್ತು ಅವರ ಕುಟುಂಬಕ್ಕೆ ನರಸಿಂಹ ಮತ್ತು ಆತನ ಮಗನ ವಿರುದ್ಧ ಕೋಪವಿತ್ತು. ಜೊತೆಗೆ ನರಸಿಂಹ ತನ್ನ ಮಗ ಇನ್ನಷ್ಟು ಅಪರಾಧ ಮಾಡಿದರೂ ಆತನನ್ನು ಬಿಡಿಸಿಕೊಂಡು ಬರುತ್ತೇನೆಂದು ಗ್ರಾಮದಲ್ಲಿ ಹೇಳಿಕೊಂಡಿದ್ದ. ಆದ್ದರಿಂದ ಪ್ರತೀಕಾರವಾಗಿ ಈ ಹತ್ಯೆ ನಡೆದಿದೆ ಎಂದು ಎಸ್ಪಿ ವಿವರಿಸಿದ್ದಾರೆ.

ಹುಟ್ಟುಹಬ್ಬದ ಶುಭಾಶಯಗಳು



ಮಂಗಳವಾರ ಹುಟ್ಟುಹಬ್ಬ ಆಚರಿಸಿಕೊಂಡ ಉದ್ಯಮಿ ಹಾಗೂ ಸಮಾಜಸೇವಕ ಬಂಡಿಪಾಳ್ಯ ಗಿರೀಶ್ ಅವರನ್ನು ಹಿತೈಷಿಗಳು ಹಾಗೂ ಅಭಿಮಾನಿಗಳು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಪರಿಶಿಷ್ಟ ಜಾತಿ ಸಮೀಕ್ಷೆಯಲ್ಲಿ ವಿವಿಧ ಹೆಸರಿನ ಪರಿಶಿಷ್ಟರು 'ಹೊಲೆಯ' ಎಂದು ಬರೆಸಲು ಮನವಿ

ಮೈಸೂರು, ಮೇ6(ಎಂಟಿವೈ)– ಕರ್ನಾಟಕದಲ್ಲಿ ಆರಂಭವಾಗಿರುವ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯಲ್ಲಿ ವಿವಿಧ ಹೆಸರಿಂದ ಕರೆಯಲ್ಪಡುವ ಹೊಲೆಯ ಮತ್ತು ಆದಿ ಕರ್ನಾಟಕ ಪಂಗಡದ ಜನ ಕಡ್ಡಾಯವಾಗಿ ಸಮೀಕ್ಷೆಯಲ್ಲಿ ಹೊಲೆಯ ಎಂದು ಬರೆಸುವಂತೆ ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಸದಸ್ಯ ದಾಸಯ್ಯ ಕೋರಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯಲ್ಲಿ ಹೊಲೆಯ, ಛಲವಾದಿ, ಬಲಗೈ, ಮಹರ್ ಸೇರಿದಂತೆ ಹೊಲೆಯ ಸಮುದಾಯಕ್ಕೆ ಸೇರಿದ ಪಂಗಡಗಳು ಹಾಗೂ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ಕರೆಯುವವರು ಸಮೀಕ್ಷೆಯಲ್ಲಿ ಹಿಂಜರಿಕೆಯಿಲ್ಲದೆ ಹೊಲೆಯ ಎಂದು ಬರೆಸಬೇಕು. ಈ ಹೆಸರಿನಿಂದ ಕರೆಯಲ್ಪಡುವ ಜನ ಪ್ರತ್ಯೇಕ ಜಾತಿಗೆ ಸೇರಿದವರಲ್ಲ. ಅದು ಉಪಜಾತಿಗಳ ಗುಂಪುಗಳಿಗೆ ನೀಡಿರುವ ಪದಗಳಾಗಿವೆ. ಹಾಗಾಗಿ ಜಾತಿ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿ ಎಂದು ನಮೂದಿಸುವುದರ ಜೊತೆಗೆ ಕಡ್ಡಾಯವಾಗಿ ತಮ್ಮ ಉಪ ಜಾತಿಯನ್ನೂ ನಮೂದಿಸಬೇಕು ಎಂದು ಸಲಹೆ ನೀಡಿದರು.

ಎಲ್ಲಾ ಜಿಲ್ಲೆ, ತಾಲೂಕು, ಹೋಬಳಿ, ಗ್ರಾ.ಪಂ., ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ಮಹಾ ನಗರಪಾಲಿಕೆ ಮಟ್ಟದಲ್ಲಿ ಹೊಲೆಯ ಸಮುದಾಯದ ಮುಖಂಡರು ಸಭೆ ನಡೆಸಿ ಬಲಗೈ ಸಮುದಾಯದ ಪ್ರತಿಯೊಬ್ಬರಿಗೂ ಜಾತಿ ಗಣತಿ ಬಗ್ಗೆ ಅರಿವು ಮೂಡಿಸಬೇಕು. ಯಾರೂ ಸಮೀಕ್ಷೆಯಿಂದ ಹೊರಗುಳಿಯದಂತೆ ಸಲಹೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಎನ್.ಭಾಸ್ಕರ್, ವಕೀಲರಾದ ನವೀನ್ ಮನಿಯ, ಎಂ.ವಿ.ಚಂದ್ರಶೇಖರ್, ಕಾಂತರಾಜು, ಆದಿ ಕರ್ನಾಟಕ ಹಿತರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಕೆ.ಮುರಳಿ, ಜಿಲ್ಲಾ ಕಾಂಗ್ರೆಸ್ ಕಿಸಾನ್ ಘಟಕದ ಅಧ್ಯಕ್ಷ ಜಿ.ಮಹದೇವ್, ಸಮುದಾಯದ ಮುಖಂಡ ಜೆ.ಪ್ರಭು ಇದ್ದರು.

ಟಿಂಬರ್ ಮಾಫಿಯಾಕ್ಕೆ ಕಡಿವಾಣ ಹಾಕಲು ಎಲ್ಲಾ ಜಿಲ್ಲೆಯಲ್ಲೂ ಮರ ಪ್ರಾಧಿಕಾರ ರಚನೆ

● ಪರಿಸರಕ್ಕಾಗಿ ನಾವು ಸಂಘಟನೆ ಅಧ್ಯಕ್ಷರೂ ಆದ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಆಗ್ರಹ
● ಮರಗಳ ಹನನ ವ್ಯಾಪಕವಾಗಿ ಸಾಗಿದೆ; ಪರಿಸರದ ಮೇಲೆ ಭಾರಿ ಪರಿಣಾಮದ ಎಚ್ಚರಿಕೆ

ಮೈಸೂರು, ಮೇ 6(ಎಂಟಿವೈ)– ಮಿತಿ ಮೀರಿದ ಪ್ರಮಾಣದಲ್ಲಿ ಟಿಂಬರ್ ಮಾಫಿಯಾ ನಡೆಯುತ್ತಿದ್ದು, ಅದಕ್ಕೆ ಕಡಿವಾಣ ಹಾಕಿ ಪರಿಸರ ಸಮತೋಲನ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಮರ ಪ್ರಾಧಿಕಾರ (ಟ್ರೀ ಅಥಾರಿಟಿ) ರಚಿಸಬೇಕು ಎಂದು ಪರಿಸರಕ್ಕಾಗಿ ನಾವು ಸಂಘಟನೆಯ ಅಧ್ಯಕ್ಷ ಎ.ಟಿ.ರಾಮಸ್ವಾಮಿ ಒತ್ತಾಯಿಸಿದ್ದಾರೆ.



ಎ.ಟಿ.ರಾಮಸ್ವಾಮಿ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಟಿಂಬರ್ ಮಾಫಿಯಾ ಎಗ್ಗಿಲ್ಲದೆ ನಡೆಯುತ್ತಿದೆ. ಇದರಿಂದ ಮರಗಳ ಹನನ ವ್ಯಾಪಕವಾಗಿ ನಡೆಯುತ್ತಿದೆ. ಯಾರ ಭಯವೂ ಇಲ್ಲದೆ ಮರಗಳನ್ನು ಕಡಿಯಲಾಗುತ್ತಿದೆ. ಇದರಿಂದ ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗಿ, ಹವಾಮಾನ ವೈಪರೀತ್ಯಕ್ಕೆ ಕಾರಣವಾಗುತ್ತಿದೆ ಎಂದು ವಿಷಾದಿಸಿದರು.

ಅರಣ್ಯ ಇಲಾಖೆ ವೈಫಲ್ಯ: ಟಿಂಬರ್ ಮಾಫಿಯಾ ನಿಯಂತ್ರಿಸಲು ಸರ್ಕಾರ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಅರಣ್ಯ ಇಲಾಖೆಯೂ ನಿರ್ಲಕ್ಷಿಸುತ್ತಿದೆ. 1976ರಲ್ಲಿ ಮರಗಳ ಸಂರಕ್ಷಣಾ ಕಾಯ್ದೆ ಜಾರಿಗೊಂಡಿದ್ದರೂ, ಇದುವರೆಗೂ ಮರಗಳ ಸಂರಕ್ಷಣೆಗೆ ಅಗತ್ಯ ಕಟ್ಟುನಿಟ್ಟಿನ ಕ್ರಮ ಕೈಗೊಂಡಿಲ್ಲ. ಮರಗಳ ಸಂರಕ್ಷಣಾ ಕಾಯ್ದೆಯನ್ವಯ ಸ್ಥಳೀಯವಾಗಿ ಮರ ಪ್ರಾಧಿಕಾರ ರಚಿಸಬೇಕಾಗಿದೆ. ಅಭಿವೃದ್ಧಿ ಹೆಸರಿನಲ್ಲಿ ಮರಗಳ ಹನನ ವ್ಯಾಪಕವಾಗಿ ನಡೆಯುತ್ತಿದೆ. ಮರಗಳ ಹನನದ ಹಿಂದೆ ಮಾಫಿಯಾ ಕೆಲಸ ಮಾಡುತ್ತಿದೆ. ಅದಕ್ಕೆ ಕಡಿವಾಣ ಹಾಕಲು ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುತ್ತಿದೆ. ಕಾನೂನು ರಚಿಸುವವರೇ ತಪ್ಪು ಮಾಡುವವರಿಗೆ ರಕ್ಷಣೆ ನೀಡುತ್ತಿದ್ದಾರೆ ಎಂದು ಕಿಡಿಕಾರಿದರು.

ರಾಜ್ಯದ ಭೌಗೋಳಿಕ ವಿಸ್ತೀರ್ಣದಲ್ಲಿ ಶೇ.33ರಷ್ಟು ಅರಣ್ಯ ಇರಬೇಕಾಗಿತ್ತು. ಆದರೆ ಇದೀಗ ಅಗತ್ಯಕ್ಕಿಂತ ಕಡಿಮೆ ಪ್ರಮಾಣದ ಅರಣ್ಯ ಪ್ರದೇಶವಿದೆ. ಒತ್ತುವರಿ, ಅಭಿವೃದ್ಧಿ ಹೆಸರಿನಿಂದಾಗಿ ದಟ್ಟಾರಣ್ಯಗಳು, ಹಸಿರು ವಲಯಗಳಿಗೆ ತೊಂದರೆ ಆಗುತ್ತಿದೆ. ತಪ್ಪುಗಳನ್ನು ತಿದ್ದಿಕೊಳ್ಳದಿದ್ದರೆ ಮುಂದಿನ ಪೀಳಿಗೆಗೆ ಸ್ವಚ್ಛ ವಾತಾವರಣ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಕೆಡಕನ್ನು ಮಾಡುವವರನ್ನು ನೋಡುತ್ತಾ ಸುಮ್ಮನಿರಲಾಗದು. ಹೀಗಾಗಿ ರಾಜ್ಯದಾದ್ಯಂತ ಸಂಘಟನೆಯು ಹೋರಾಟ ನಡೆಸಲಿದೆ ಎಂದು ಎಚ್ಚರಿಸಿದರು.

ಜಾಗತಿಕ ತಾಪಮಾನ: ಇತ್ತೀಚಿನ ವರ್ಷಗಳಲ್ಲಿ ಮರಗಳನ್ನು ಎಗ್ಗಿಲ್ಲದೆ ಕಡಿಯುತ್ತಿರುವುದರಿಂದ ಜಾಗತಿಕ ತಾಪಮಾನ ಹೆಚ್ಚಾಗುತ್ತಿದೆ. ಅತಿವೃಷ್ಟಿ–ಅನಾವೃಷ್ಟಿ, ಭೂಕಂಪ, ಸುನಾಮಿ ಇತ್ಯಾದಿ ಪ್ರಾಕೃತಿಕ ಅವಘಡಗಳು ಆಗಿಂದಾಗ್ಗೆ ಸಂಭವಿಸುತ್ತಿವೆ. ಕರ್ನಾಟಕ ಸಂಪದ್ಭರಿತ ರಾಜ್ಯವಾಗಿತ್ತು. ಇಂದು ಎಲ್ಲವನ್ನೂ ಧ್ವಂಸ ಮಾಡಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಎಲ್ಲರೂ ಒಂದಾಗಿ ಹೋರಾಟ ಮಾಡಿದಾಗ ಮಾತ್ರ ಪರಿಸರವನ್ನು ಉಳಿಸಲು ಸಾಧ್ಯ ಎಂದು ಎಚ್ಚರಿಸಿದರು.

ಜಲಮೂಲಗಳು ತ್ಯಾಜ್ಯ ಸಂಗ್ರಹ ತಾಣಗಳಾಗಿವೆ. ನದಿ ಮಾಲಿನ್ಯ ಹೆಚ್ಚಾಗುತ್ತಿದೆ. ಕಾವೇರಿ ಆರತಿಗೆ ಕೋಟ್ಯಾಂತರ ರೂ. ವಿನಿಯೋಗಿಸುವುದರಿಂದ ಯಾವ ಸಾರ್ಥಕತೆಯೂ ಇಲ್ಲ. ಅದರ ಬದಲಾಗಿ ನದಿಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ಮೂಲಗಳು ತ್ಯಾಜ್ಯ ಬಿಸಾಡುವ ತಾಣಗಳಾಗಿವೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಪರಿಸರಕ್ಕಾಗಿ ನಾವು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ, ಕಾರ್ಯದರ್ಶಿ ಗಂಟಯ್ಯ, ಪಿಯುಸಿಎಲ್‌ನ ಕಮಲ್ ಗೋಪಿನಾಥ್, ನಂಜಮ್ಮ, ಕ್ಲೀನ್ ಮೈಸೂರು ಫೌಂಡೇಷನ್‌ನ ಲೀಲಾ ವೆಂಕಟೇಶ್ ಇದ್ದರು.

ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷ ಎಸ್.ರಘುನಾಥ್, ಉಪಾಧ್ಯಕ್ಷ ಆರ್.ಲಕ್ಷ್ಮಿಕಾಂತ್‌ಗೆ ಸನ್ಮಾನ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾಗಿ ನೇಮಕಗೊಂಡಿರುವ ಕಾಂಗ್ರೆಸ್ ಮುಖಂಡರಾದ ಎನ್.ಎಂ.ನವೀನ್‌ಕುಮಾರ್ ಅವರು ರಾಜ್ಯಾಧ್ಯಕ್ಷ ಎಸ್.ರಘುನಾಥ್, ಹಿರಿಯ ಉಪಾಧ್ಯಕ್ಷ ಆರ್.ಲಕ್ಷ್ಮಿಕಾಂತ್ ಅವರನ್ನು ಬೆಂಗಳೂರಿನ ಗಾಯತ್ರಿ ಭವನದಲ್ಲಿ ಸನ್ಮಾನಿಸಿದರು. ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿರ್ದೇಶಕ ಸಿ.ವಿ.ಪಾರ್ಥಸಾರಥಿ, ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರ ಸಂಘದ ನಿರ್ದೇಶಕ ನಾ.ನಾಗಚಂದ್ರ, ಚಾಮುಂಡಿಪುರಂ ಭೂಮಿಕಾ ಅಸೋಸಿಯೇಟ್ಸ್‌ನ ಕೆ.ಎಸ್.ಸುರೇಶ್, ಪತ್ರಕರ್ತ ಅನಿಲ್‌ಕುಮಾರ್, ಮೈಸೂರಿನ ವಿಪ್ರ ಮುಖಂಡರಾದ ಆರ್.ಎಸ್.ಸತ್ಯನಾರಾಯಣ, ಗದಾಧರ, ಪ್ರವೀಣ್‌ಕುಮಾರ್ ಮತ್ತಿತರರಿದ್ದರು.

ಒಕ್ಕಲಿಗ ಸಮುದಾಯದ ಶ್ರೇಯೋಭಿವೃದ್ಧಿಗೆ ಒಗ್ಗಟ್ಟಿನ ಪ್ರಯತ್ನ ಅನಿವಾರ್ಯ

ಕೆ.ಆರ್.ನಗರ–ಸಾಲಿಗ್ರಾಮ ಅವಳಿ ತಾಲೂಕು ಒಕ್ಕಲಿಗರ ಸಂಘದ ನಿರ್ದೇಶಕ ಹೊಸಹಳ್ಳಿ ಮಂಜುಗೌಡ ಅಭಿಮತ

ಕೆ.ಆರ್.ನಗರ, ಮೇ 6– ಒಕ್ಕಲಿಗ ಸಮಾಜಕ್ಕೆ ಒಂದು ಐತಿಹಾಸಿಕ ಪರಂಪರೆ ಇದ್ದು, ಇಂದಿನ ಯುವ ಪೀಳಿಗೆ ಅದನ್ನು ಅರ್ಥೈಸಿಕೊಂಡು ಅದರ ಸಂರಕ್ಷಣೆ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಬೇಕಿದೆ ಎಂದು ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕು ಒಕ್ಕಲಿಗರ ಸಂಘದ ನಿರ್ದೇಶಕ ಹೊಸಹಳ್ಳಿ ಮಂಜುಗೌಡ ಅಭಿಪ್ರಾಯಪಟ್ಟಿದ್ದಾರೆ.

ತಾಲೂಕು ಒಕ್ಕಲಿಗರ ಸಂಘಕ್ಕೆ ನೂತನ ನಿರ್ದೇಶಕರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಹಿತೈಷಿಗಳಿಂದ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಒಕ್ಕಲಿಗ ಜನಾಂಗವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಪ್ರತಿಯೊಬ್ಬರ ಸಹಕಾರ ಅತೀ ಮುಖ್ಯವಾಗಿದೆ. ಆದ್ದರಿಂದ ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ ಒಕ್ಕಲಿಗ ಸಮಾಜದ ಬಲವರ್ಧನೆಗೆ ಶೀಘ್ರದಲ್ಲೇ ಸಭೆ ನಡೆಸಿ ಚರ್ಚಿಸಲಾಗುವುದು ಎಂದರು.

ಸಮಾಜದ ದುಡಿಯುವ ಕೈಗಳಿಗೆ ಉದ್ಯೋಗ, ಶೈಕ್ಷಣಿಕವಾಗಿ ಹಿಂದುಳಿದ ಯುವಕರಿಗೆ ಉನ್ನತ ಶಿಕ್ಷಣದ ಅರಿವು ಮೂಡಿಸುವ ಕಾರ್ಯವಾಗಬೇಕಿದೆ. ಅದೇ ರೀತಿಯಲ್ಲಿ ಒಕ್ಕಲಿಗ ಜನಾಂಗಕ್ಕೆ ಅನ್ಯಾಯವಾದಾಗ ಹೋರಾಟ ಮಾಡಬೇಕಿದೆ. ಪ್ರಸ್ತುತ ಸರ್ಕಾರ ಜಾತಿ ಗಣತಿ ಜಾರಿಗೆ ತರಲು ಚಿಂತನೆ ಮಾಡಿದ್ದು, ಈ ಜಾತಿ ಗಣತಿಯಲ್ಲಿ ಒಕ್ಕಲಿಗ ಜನಾಂಗಕ್ಕೆ ಅನ್ಯಾಯವಾಗಿದೆ. ಇದರ ಬಗ್ಗೆ ಒಗ್ಗೂಡಿ ಹೋರಾಡಬೇಕಿದೆ ಎಂದರು.



ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕು ಒಕ್ಕಲಿಗರ ಸಂಘದ ನಿರ್ದೇಶಕರಾಗಿ ಆಯ್ಕೆಯಾದ ಹೊಸಹಳ್ಳಿ ಮಂಜುಗೌಡ ಅವರನ್ನು ಅವರ ಅಭಿಮಾನಿಗಳು, ಹಿತೈಷಿಗಳು ನೆನಪಿನ ಕಾಣಿಕೆ ನೀಡಿ, ಅಭಿನಂದಿಸಿದರು.

ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಮೂಲಕ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಆತ್ಮಸ್ಥೈರ್ಯ ತುಂಬುವ ಕೆಲಸ ಹಿಂದಿನಿಂದಲೂ ಮಾಡಲಾಗುತ್ತಿದ್ದು, ಮುಂದೆಯು ಆ ಪ್ರಯತ್ನಗಳಾಗಲಿದೆ ಎಂದರು.

ಒಕ್ಕಲಿಗ ಸಂಘದ ನಿರ್ದೇಶಕರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಹೊಸಳ್ಳಿ ಮಂಜುಗೌಡ ದಂಪತಿಗೆ ಮೈಸೂರು ಪೇಟ, ಕೊಡಗಿನ ಏಲಕ್ಕಿ ಹಾರಹಾಕಿ, ಶಾಲು ಹೊದಿಸಿ ಅಭಿನಂದಿಸಲಾಯಿತು. ಮೈಸೂರು ಜಿಲ್ಲಾ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷ ಎ.ಟಿ.ಸೋಮಶೇಖರ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಬಸವರಾಜಪುರದ ಯೋಗಾನಂದ್, ಲಾಳಂದೇವನಹಳ್ಳಿ ಗ್ರಾ.ಪಂ. ಮಾಜಿ ಸದಸ್ಯ ಹೊಸಳ್ಳಿ ಪುಟ್ಟರಾಜು, ರಾಜ್ಯಶಾಸ್ತ್ರ ಉಪನ್ಯಾಸಕ ಕೆ.ಎಲ್.ರಮೇಶ್, ನಿವೃತ್ತ ಶಿಕ್ಷಕರಾದ ನಾಗಣ್ಣ, ನಂಜನಗೂಡು ತಾಲೂಕು ಸರ್ಕಾರಿ ನೌಕರರ ಸಂಘ ಅಧ್ಯಕ್ಷ ಡಾ.ದೀಪು ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಬುಧವಾರ 7 ಮೇ 2025

ಮೇ 17ರಂದು ಮಹೇಶ್ ಜೋಶಿ ವಿರುದ್ಧ ಮಂಡ್ಯದಲ್ಲಿ ಬೃಹತ್ ಪ್ರತಿಭಟನಾ ಸಮಾವೇಶ



ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮಂಡ್ಯ: ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಮಹೇಶ್ ಜೋಶಿ ಅವರನ್ನು ಅಮಾನತು ಮಾಡಿ ಕನ್ನಡ ಸಾಹಿತ್ಯ ಪರಿಷತ್ತು ಉಳಿಸಿ ಅಂದೋಲನವನ್ನು ಮೇ 17ರಂದು ಮಂಡ್ಯದಲ್ಲಿ ಮೈಸೂರು ವಿಭಾಗ ಮಟ್ಟದ ವಿವಿಧ ಕನ್ನಡ ಪರ, ಜನ ಪರ ಸಂಘಟನೆಗಳ ಮುಖ್ಯಸ್ಥರು, ಸಾಹಿತಿಗಳ ನೇತೃತ್ವದಲ್ಲಿ ಬೃಹತ್ ಪ್ರತಿಭಟನಾ ಸಮಾವೇಶ ಹಮ್ಮಿಕೊಳಲಾಗಿದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಅನೇಕ ಆರ್ಥಿಕ ಅಶಿಸ್ತು ಮತ್ತು ಸರ್ವಾಧಿಕಾರದ ಬಗ್ಗೆ ಕಸಾಪ ಅಧ್ಯಕ್ಷ ಡಾ. ಮಹೇಶ್ ಜೋಶಿ ಅವರು ರಾಜ್ಯಾದ್ಯಂತ ವ್ಯಾಪಕ ಚರ್ಚೆಯಾಗುತ್ತಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲಾ ಆಡಳಿತ ಮಂಡಳಿಯನ್ನು ತಿದ್ದುಪಡಿ ಮೂಲಕ ತನ್ನ ನಿಯಂತ್ರಣದಲ್ಲಿರಿಸಿಕೊಳ್ಳಲು ಹುನ್ನಾರ ನಡೆಸುತ್ತಿದ್ದಾರೆ ಎಂದರು.

ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಪಾತ್ರ ಸಲ್ಲಿಸಿದ್ದು ಈ ಕುರಿತು ಸರ್ಕಾರ ಯಾವುದೇ ಮಾಹಿತಿ ನೀಡಿಲ್ಲ ಎಂದು ವಿಷಾದ ವ್ಯಕ್ತಪಡಿಸಿ ತತ್‌ಕ್ಷಣ ಸರ್ಕಾರ ಮಧ್ಯೆ ಪ್ರವೇಶ ಮಾಡಿ, ಮಹೇಶ್ ಜೋಶಿಯನ್ನು ಅಮಾನತಿನಲ್ಲಿಟ್ಟು ಕಸಾಪದಲ್ಲಿನ ಅವ್ಯವಹಾರವನ್ನು ವಿಚಾರಣೆ ಮಾಡಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ಮಾತನಾಡಿ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರ್ಕಾರ ನೀಡಿದ್ದ 30 ಕೋಟಿ ಅನುದಾನದಲ್ಲಿ 2.5 ಕೋಟಿಯನ್ನು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಪಡೆದಿರುತ್ತದೆ, ಈಗಾಗಲೇ ಜಿಲ್ಲಾಡಳಿತ ಮತ್ತು ಸ್ವಾಗತ ಸಮಿತಿಯು 27.50 ಕೋಟಿಗೆ ಕೆಎಸ್‌ಎಂಸಿ & ಎ ಅಡಿಯಲ್ಲಿ ವೆಚ್ಚ ಮಾಡಿ ಲೆಕ್ಕ ಪತ್ರಗಳನ್ನು ನೀಡಿರುತ್ತಾರೆ. ಆದರೆ ಮಹೇಶ್ ಜೋಶಿಯವು 2.5 ಕೋಟಿಗೆ ಇದುವರೆಗೂ ಲೆಕ್ಕ ನೀಡದೆ, ಇನ್ನೂ 6 ತಿಂಗಳ ಸಮಯವಿದೆ, ನಂತರ ಲೆಕ್ಕ ಕೊಡುತ್ತೇನೆಂದು ಹೇಳುವ ಮೂಲಕ ಉದ್ಧಟತನ ಮೆರೆದಿರುತ್ತಾರೆ ಎಂದು ಹೇಳಿದರು.

ಗೋಷ್ಠಿಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರುಗಳಾದ ಪ್ರೊ.ಜಿ. ಟಿ.ವೀರಪ್ಪ, ಎಂ.ವಿ.ಧರಣೇಂದ್ರಯ್ಯ, ಮುಖಂಡರಾದ ಎಸ್.ಕೆ.ಮಹೇಶ್, ಸಿ.ಕುಮಾರಿ ಹಾಜರಿದ್ದರು.

ಕಾರು-ಕ್ಯಾಂಟರ್ ಡಿಕ್ಕಿ: ಕಾರಿನ ಚಾಲಕ ಸಾವು, ತಾಯಿಗೆ ಗಾಯ



ನಾಗಮಂಗಲ, ಮೇ 6– ನಾಗಮಂಗಲ ಸಮೀಪ ಹೊಣಕೆರೆ ಬಳಿ ಕಾರು-ಕ್ಯಾಂಟರ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಸ್ಥಳದಲ್ಲಿ ಓರ್ವ ಸಾವನ್ನಪ್ಪಿದ ಘಟನೆ ನಡೆದಿದೆ.

ತಾಲೂಕಿನ ಹೊಣಕೆರೆ ಸಮೀಪ ಮೈಸೂರಿನಿಂದ ನಾಗಮಂಗಲದ ಕಡೆ ಬರುತ್ತಿದ್ದ ಕಾರು ಹಾಗೂ ನಾಗಮಂಗಲದಿಂದ ಮೈಸೂರು ಕಡೆ ಹೋಗುತ್ತಿದ್ದ ಕ್ಯಾಂಟರ್ ಮುಖಾಮುಖಿ ಡಿಕ್ಕಿಯಾಗಿರುವ ಕಾರಣ ಸ್ಥಳದಲ್ಲೇ ಕಾರಿನ ಚಾಲಕ ರವಿಕುಮಾರ್(33) ಮೃತಪಟ್ಟಿದ್ದು ಅವರ ತಾಯಿ ದೇವಿ ಅವರಿಗೆ ಗಾಯಗಳಾಗಿವೆ ಎಂದು ತಿಳಿದು ಬಂದಿದೆ.

ಇವರು ಮೂಲತಃ ಚಟ್ಟನಹಳ್ಳಿ ಗ್ರಾಮದವರೆಂದು ತಿಳಿದು ಬಂದಿದೆ. ಪ್ರಕರಣವನ್ನು ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಕೆಆರ್‌ಎಸ್‌ನಲ್ಲಿ ಪ್ರವೇಶ, ಪಾರ್ಕಿಂಗ್ ಶುಲ್ಕ ಯದ್ವಾ-ತದ್ವಾ ಹೆಚ್ಚಳ ವಿರೋಧಿಸಿ

ಬೃಂದಾವನ ಪ್ರವೇಶ ದ್ವಾರದಲ್ಲಿ ಪ್ರತಿಭಟನೆ

ಶ್ರೀರಂಗಪಟ್ಟಣ, ಮೇ 6– ಕೆ.ಆರ್.ಸಾಗರದ ಬೃಂದಾವನ ಪ್ರವೇಶ ದರ, ಪಾರ್ಕಿಂಗ್ ಹಾಗೂ ಸೇತುವೆ ಶುಲ್ಕ ಹೆಚ್ಚಿಸಿರುವುದನ್ನು ಖಂಡಿಸಿ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ಬೃಂದಾವನ ಪ್ರವೇಶ ದ್ವಾರದ ಬಳಿ ಪ್ರತಿಭಟನೆ ನಡೆಸಲಾಯಿತು.

ಭಾನುವಾರದಿಂದ ಸೋಮವಾರ ರಾತ್ರಿ ವರೆಗೆ ಟೋಲ್ ಬಂದ್ ಮಾಡಲಾಗಿತ್ತು, ಆದರೆ ಇಂದು ಮತ್ತೆ ಏಕಾಏಕಿ ಟೋಲ್ ವಸೂಲಾತಿ ಪ್ರಾರಂಭಿಸಲಾಗಿತ್ತು. ಇದರ ಮಾಹಿತಿ ತಿಳಿದ ದೂರುದಾರ ನಾರ್ತ್ ಬ್ಯಾಂಕ್ ಜಗದೀಶ್, ರೈತಸಂಘದ ಜಿಲ್ಲಾಧ್ಯಕ್ಷ ಕೆಂಪೂಗೌಡ ಹಾಗೂ ಕೆ.ಆರ್.ಸಾಗರ ಗ್ರಾ.ಪಂ ಮಾಜಿ ಅಧ್ಯಕ್ಷ ನಾಗೇಂದ್ರ, ನರಸಿಂಹ, ಮಂಜುನಾಥ್, ಉಪಾಧ್ಯಕ್ಷ ಪಾಪಣ್ಣ ಸೇರಿದಂತೆ ಇತರರು ಸ್ಥಳಕ್ಕೆ ಬಂದು ಟೋಲ್ ವಸೂಲಿ ಮಾಡುತ್ತಿದ್ದ ಸಿಬ್ಬಂದಿಗಳನ್ನು ತರಾಟೆ ತೆಗೆದುಕೊಂಡರು. ಇದರ ಕುರಿತು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಮಾಹಿತಿ ನೀಡಲಾಯಿತು. ನಂತರ ಟೋಲ್ ವಸೂಲಾತಿ ಸಂಪೂರ್ಣ ನಿಲ್ಲಿಸಲಾಯಿತು.

ನಂತರ ಪ್ರವೇಶ ದ್ವಾರದ ಬಳಿ ತೆರಳಿದ ಪ್ರತಿಭಟನಾಕಾರರು ಪ್ರವೇಶದ್ವಾರದ ಮುಂಭಾಗದಲ್ಲಿ ಅಕ್ರಮವಾಗಿ ಯಾವುದೇ ಟೆಂಡರ್ ಕರಾರು ಇಲ್ಲದೆ ಹೊಸ ದರ ವಸೂಲಿ ಮಾಡುತ್ತಿದ್ದ ಕೆಸಿಐಸಿ ಸಿಬ್ಬಂದಿಗಳನ್ನು ತರಾಟೆ ತೆಗೆದುಕೊಂಡು, ಈ ಸಂದರ್ಭದಲ್ಲಿ ಫೋನ್ ಮೂಲಕ ಕಾವೇರಿ ನೀರಾವರಿ ನಿಗಮ ಹಿರಿಯ ಅಧಿಕಾರಿಗಳು ಯಾವುದೇ ಪ್ರವೇಶ ದರ ವಸೂಲಿ ಮಾಡದಂತೆ ತಿಳಿಸಿದ್ದರ ಹಿನ್ನೆಲೆಯಲ್ಲಿ ಸುಮಾರು ಮೂರು ಘಂಟೆಗಳ ಕಾಲ ಪ್ರವಾಸಿಗರಿಗೆ ಉಚಿತ ಪ್ರವೇಶ ನೀಡಲಾಯಿತು.



ನಂತರ ಸ್ಥಳಕ್ಕೆ ಬಂದ ಕಾವೇರಿ ನೀರಾವರಿ ನಿಗಮ ಅಧೀಕ್ಷಕ ಅಭಿಯಂತರ ರಘುರಾಮ ಪ್ರತಿಭಟನಾಕಾರರಿಂದ ಮಾಹಿತಿ ಪಡೆದರು. ಪ್ರಸ್ತುತ ಟೆಂಡರ್ ಕರಾರು ಇನ್ನೂ ಆಗಿಲ್ಲ, ಕೆಲವು ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದೆ, 75–25ರ ಅನುಪಾತದಲ್ಲಿ ಕಾ.ನೀ. ನಿಗಮ-ಕೆ.ಸಿ.ಐ.ಸಿ ಸಂಸ್ಥೆ ವಸೂಲಿ ಮಾಡುತ್ತಿದೆ, ಮುಂದಿನ ಆದೇಶದ ತನಕ ಇದು ಮುಂದುವರೆಯಲಿದೆ, ಸೇತುವೆ ಶುಲ್ಕ ಈಗ ಟೋಲ್ ವಸೂಲಿ ಮಾಡದಂತೆ ಖಾಸಗಿ ಸಂಸ್ಥೆಗೆ ತಿಳಿಸಲಾಗಿತ್ತು ಅದೂ ಅವರು ವಸೂಲಿ ಮಾಡಿದ್ದು ಸರಿಯಲ್ಲ ಎಂದರು. ಹಳೆ ಪ್ರವೇಶ ಹಾಗೂ ಪಾರ್ಕಿಂಗ್ ದರ ಮಾತ್ರ ವಸೂಲಿ ಮಾಡುವಂತೆ ಸೂಚಿಸಲಾಗಿದೆ ಎಂದರು.

ಬೃಂದಾವನದಲ್ಲಿ ಕುಡಿಯು ನೀರಿನ ಸಮಸ್ಯೆ, ಶೌಚಾಲಯ ಅವ್ಯವಸ್ಥೆ, ಸಿ.ಸಿ.ಕ್ಯಾಮರ ಸ್ಥಗಿತ ಸೇರಿದಂತೆ ಹಲವಾರು ಸಮಸ್ಯೆಗಳಿವೆ ಇದರಿಂದ ಪ್ರವಾಸಿಗರಿಗೆ ಅನೇಕ ತೊಂದರೆಯಿದೆ. ಆದರೂ ಕೂಡ ಪ್ರವೇಶ ದರ ಹೆಚ್ಚಳವಾಗಿದೆ ಇದು ಸರಿಯಲ್ಲ, ಮೊದಲಿಗೆ ಪ್ರವಾಸಿಗರಿಗೆ ಸರಿಯಾದ ಮೂಲ ಭೂತ ಸೌಕರ್ಯ ಕಲ್ಪಿಸಿ ನಂತರ ಪ್ರವೇಶ ದರ ಹೆಚ್ಚಸಲಿ ಎಂದರು,

ಕೆವಿಎಸ್ ದೂರದೃಷ್ಟಿ ಸಾಕಾರಗೊಳಿಸುವಲ್ಲಿ ಪ್ರೊ.ಜೆಪಿ ಪಾತ್ರ ಮಹತ್ವವಾದದ್ದು: ಸಿ.ಎಸ್.ಪುಟ್ಟರಾಜು ಶ್ಲಾಘನೆ



ಪ್ರೊ.ಬಿ.ಜಯಪ್ರಕಾಶಗೌಡ ಹಾಗೂ ಎನ್.ನಾಗರಾಜು ದಂಪತಿಯನ್ನು ಗೌರವಿಸಲಾಯಿತು.

ಮಂಡ್ಯ: ನಿತ್ಯ ಸಚಿವ ಕೆ.ವಿ.ಶಂಕರಗೌಡರ ದೂರದೃಷ್ಟಿಯ ಯೋಜನೆಗಳನ್ನು ಸಾಕಾರಗೊಳಿಸುವಲ್ಲಿ ಹಿರಿಯ ಸಾಂಸ್ಕೃತಿಕ ಸಂಘಟಕ ಪ್ರೊ.ಬಿ.ಜಯಪ್ರಕಾಶಗೌಡ ಅವರ ಪಾತ್ರ ಮಹತ್ವವಾದದ್ದು ಎಂದು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ತಿಳಿಸಿದರು.

ನಗರದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ನಾಗರಿಕ ಅಭಿನಂದನಾ ಸಮಿತಿ ವತಿಯಿಂದ ಕನ್ನಡ ಪುಸ್ತಕ ಪ್ರಾಧಿಕಾರದ 'ಡಾ.ಜಿ.ಪಿ.ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ' ಪುರಸ್ಕೃತ ಪ್ರೊ.ಬಿ.ಜಯಪ್ರಕಾಶಗೌಡ ಹಾಗೂ 'ಮತ್ತೆ ಮತ್ತೆ ಶಂಕರಗೌಡ' ಪುಸ್ತಕಕ್ಕೆ ಕನ್ನಡ ಪುಸ್ತಕ ಪ್ರಾಧಿಕಾರದ ಪುಸ್ತಕ ಮುದ್ರಣ ಸೊಗಸು ಬಹುಮಾನ ಪುರಸ್ಕೃತ ಎನ್.ನಾಗರಾಜು ಅವರನ್ನು ಅಭಿನಂದಿಸಿ ಅವರು ಮಾತನಾಡಿದರು.

ಕೆ.ವಿ.ಶಂಕರಗೌಡರು ಅನೇಕ ಶಿಷ್ಯರನ್ನು ಬೆಳೆಸಿದ್ದಾರೆ. ಅಂತಹವರ ಸಾಲಿನಲಿ ಪ್ರೊ.ಬಿ.ಜಯಪ್ರಕಾಶಗೌಡರು ಸಹ ಒಬ್ಬರಾಗಿದ್ದಾರೆ. ಅತ್ಯಂತ ಕ್ರಿಯಾಶೀಲ ವ್ಯಕ್ತಿಯಾಗಿರುವ ಜಯಪ್ರಕಾಶಗೌಡರು ಶಂಕರಗೌಡರು ನಡೆಸುತ್ತಿದ್ದ ದಾರಿಯಲ್ಲಿ ಸಾಗುತ್ತಾ, ಜಿಲ್ಲೆಯ ಸಾಂಸ್ಕೃತಿಕ, ಸಾಮಾಜಿಕ ಚಟುವಟಿಕೆಗಳನ್ನು ಮುಂದುವರಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಜಯಪ್ರಕಾಶಗೌಡರು ಕರ್ನಾಟಕ ಸಂಘದ ಅಧ್ಯಕ್ಷರಾದ ನಂತರ ಸಂಘದಲ್ಲಿ ಸದಾ ಚಟುವಟಿಕೆ ನಡೆಯುತ್ತಲೇ ಇವೆ. ಕೆ.ವಿ.ಎಸ್. ಭವನದ ಕಟ್ಟಡ ನಿರ್ಮಾಣಕ್ಕೆ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ತಾವು ಜಿಲ್ಲಾ ಉಸ್ತುವಾರಿ ಸಚಿವನಾಗಿ ಒಂದು ಕೋಟಿ ಅನುದಾನವನ್ನು ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಬದಲಾದರ ರಾಜಕೀಯ ಪರಿಸ್ಥಿತಿಯಲ್ಲಿ ಅದನ್ನು ಶ್ರೀಕಂಠೇಗೌಡರು ಮುಂದುವರಿಸಿ ಸಂಪೂರ್ಣವಾಗುವಂತೆ ನೋಡಿಕೊಂಡರು ಎಂದು ವಿವರಿಸಿದರು.

ಅದೇ ರೀತಿಯ ರೈತ ಸಭಾಂಗಣದಲ್ಲಿ ಆದಿಚುಂಚನಗಿರಿ ಶ್ರೀಗಳ ನೇತೃತ್ವದಲ್ಲಿ ನಡೆಯುತ್ತಿದ್ದ ಸಮಾರಂಭದಲ್ಲಿ ನಾನು ಸೇರಿದಂತೆ ಜಿಲ್ಲೆಯ ಜನಪ್ರತಿನಿಧಿಗಳು ಭಾಗವಹಿಸಿದ್ದರು. ಅಂತಹ ಸಂದರ್ಭದಲ್ಲೇ ಕೆ.ವಿ.ಶಂಕರಗೌಡರು ರಾಜ್ಯದಲ್ಲೇ ಮಾದರಿಯಾದ ರೈತ ಭವನ ನಿರ್ಮಾಣ ಮಾಡಿದ್ದಾರೆ. ಅದರ ಪುನರ್ ನವೀಕರಣ ಮಾಡಲಿಲ್ಲ ಎಂದು ಜಯಪ್ರಕಾಶಗೌಡರು ಬೇಸರ ಹೊರಹಾಕಿದರು. ಅಂದೇ ನಮ್ಮ ನಾಯಕರಾದ ಎಚ್.ಡಿ.ಕುಮಾರಸ್ವಾಮಿಯವರನ್ನು ಸಂಪರ್ಕಿಸಿ 4.28 ಕೋಟಿ ರೂಗಳ ಸಿಎಸ್‌ಆರ್ ಅನುದಾನದಲ್ಲಿ ನವೀಕರಣಕ್ಕೆ ಯೋಜನೆ ರೂಪಿಸಲಾಯಿತು. 2 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಶೀಘ್ರದಲ್ಲೇ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಕಾರ್ಯ ಪ್ರಾರಂಭವಾಗಲಿದೆ ಎಂದು ಹೇಳಿದರು.

ಜಯಪ್ರಕಾಶಗೌಡರ ಮತ್ತೊಂದು ಕನಸಾಗಿರುವ ಕರ್ನಾಟಕ ಸಂಘವನ್ನು ಇಡೀ ರಾಜ್ಯದಲ್ಲೇ ಮಾದರಿ ಸಂಘವನ್ನಾಗಿ ಮಾಡಬೇಕೆಂಬುದಾಗಿದ್ದು, ಜೊತೆಗೆ ಸಭಾಂಗಣ ನಿರ್ಮಾಣವಾಗುತ್ತಿದ್ದು, ಶೀಘ್ರ ಪೂರ್ಣಗೊಂಡು ಸಾರ್ವಜನಿಕ ಸೇವೆಗೆ ಲಭಿಸುವಂತಾಗಲಿ. ಇದಕ್ಕೂ ಸಹ ಕುಮಾರಸ್ವಾಮಿ ಅವರ ಅನುದಾನ ಕೊಡಿಸುವ ಜವಾಬ್ದಾರಿ ಹೊತ್ತುಕೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ಪುಸ್ತಕ ಮುದ್ರಣ ಸೊಗಸು ಬಹುಮಾನ ಪುರಸ್ಕೃತ ನಾಗರಾಜು ಅವರು ಸಹ ಅವರ ಕ್ಷೇತ್ರದಲ್ಲಿ ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಕಾರ್ಯವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮಾಡಲಿ ಎಂದು ಶುಭ ಕೋರಿದರು. ಇದೇ ವೇಳೆ ಪ್ರೊ.ಬಿ.ಜಯಪ್ರಕಾಶಗೌಡ ದಂಪತಿ ಹಾಗೂ ಎನ್.ನಾಗರಾಜು ದಂಪತಿಯನ್ನು ಅಭಿನಂದಿಸಿ ಗೌರವಿಸಲಾಯಿತು.

ಮಾಜಿ ಶಾಸಕ ಎಂ.ಶ್ರೀನಿವಾಸ್ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ಕೆ.ಟಿ.ಶ್ರೀಕಂಠೇಗೌಡ, ಕರ್ನಾಟಕ ಸಂಘದ ಉಪಾಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್, ಸೇರಿದಂತೆ ಹಲವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಪಾಕಿಸ್ತಾನಿ ಪ್ರಜೆಗಳನ್ನು ಪತ್ತೆ ಹಚ್ಚಲು ಸರ್ಕಾರ ಕ್ರಮ ವಹಿಸಲಿ: ಇಂದ್ರೇಶ್


ಮಂಡ್ಯ: ಕೇಂದ್ರ ಸರ್ಕಾರ ಪಾಕಿಸ್ತಾನಿ ಪ್ರಜೆಗಳನ್ನು ದೇಶದಿಂದ ಹೊರ ಹೋಗಲು, ದೇಶದ ರಾಜ್ಯ ಸರ್ಕಾರಗಳು ಗಡಿಪಾರು ಮಾಡುವಂತೆ ಆದೇಶಿಸಿದ್ದು, ರಾಜ್ಯದ ಕಾಂಗ್ರೆಸ್ ಸರ್ಕಾರವು ರಾಜ್ಯದಲ್ಲಿ ಪಾಕಿಸ್ತಾನಿ ಪ್ರಜೆಗಳನ್ನು ಪತ್ತೆಹಚ್ಚಿ ಪಾಕಿಸ್ತಾನಕ್ಕೆ ಮರಳಲು ಕ್ರಮ ವಹಿಸಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಇಂದ್ರೇಶ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶ ತಲೆ ತಗ್ಗಿಸುವ ರೀತಿ ಪಹ ಲ್ಗಾಮ್ ಹತ್ಯಾಕಾಂಡ ನಡೆದ ಹಿನ್ನಲೆ ಪಾಕಿಸ್ತಾನಿ ಪ್ರಜೆಗಳ ವೀಸಾ ರದ್ದು ಮಾಡಿದೆ ಎಂದರು.

ದೇಶದ ಬಿಜೆಪಿ ಸರ್ಕಾರ ಇರುವ ಎಲ್ಲ ರಾಜ್ಯಗಳಲ್ಲಿ ಪಾಕಿಸ್ತಾನಿ ಪ್ರಜೆಗಳನ್ನು ದೇಶದಿಂದ ಹಿಂದಿರುಗಿಸಲು ಕ್ರಮವಹಿಸಿದ್ದು, ರಾಜ್ಯದಲ್ಲಿ ಮಾತ್ರ ಸದರಿ ಕೆಲಸ ಆಗುತ್ತಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದಾಗಿನಿಂದ ಕಾನೂನು ಸುವ್ಯವಸ್ಥೆ ಹಾಳಾಗಿದ್ದು, ಓಟ್ ಬ್ಯಾಂಕ್‌ಗಾಗಿ ಅಲ್ಪಸಂಖ್ಯಾತರ ಓಲೈಕೆಯಿಂದಾಗಿ ಅವರ ಮೇಲಿನ ಪ್ರಕರಣಗಳ ಖುಲಾಸೆ ಮಾಡಿ, ಬಿಡುಗಡೆ ಮಾಡಿದ್ದರಿಂದಾಗಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ ಎಂದು ಆರೋಪಿಸಿದರು.

ಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿವೇಕ್, ಸಿ.ಟಿ.ಮಂಜುನಾಥ್, ನಾಗಾನಂದ್, ಚಂದ್ರು ಇದ್ದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷ ಆಯ್ಕೆ



ನೂತನ ಅಧ್ಯಕ್ಷರನ್ನು ನಿರ್ದೇಶಕರು ಹಾಗೂ ಮುಖಂಡರು ಅಭಿನಂದಿಸಿದರು.

ಕೆಆರ್.ಪೇಟೆ:ಮೇ 6–ತಾಲೂಕು ಪಿಎಲ್‌ಡಿ ಬ್ಯಾಂಕ್‌ಗೆ ನೂತನ ಅಧ್ಯಕ್ಷರಾಗಿ ಕಬ್ಬಲಗೆರೆಪುರ ಪುಟ್ಟಸ್ವಾಮಿಗೌಡ ಹಾಗೂ ಉಪಾಧ್ಯಕ್ಷರಾಗಿ ಹೊಳೆ ಮಾರ್ಗೋನಹಳ್ಳಿ ಸಿಮೆಂಟ್ ರಮೇಶ್ (ಮಂಜು) ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಿಎಲ್‌ಡಿ ಬ್ಯಾಂಕ್ ಮುಂದಿನ ಐದು ವರ್ಷದ ಆಡಳಿತ ಮಂಡಳಿಯ ಅಧ್ಯಕ್ಷ–ಉಪಾಧ್ಯಕ್ಷರ ಸ್ಥಾನಗಳಿಗೆ ಬ್ಯಾಂಕಿನ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಬ್ಬಲಗೆರೆಪುರ ಪುಟ್ಟಸ್ವಾಮಿಗೌಡ, ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಹೊಳೆ ಮಾರ್ಗೋನಹಳ್ಳಿ ರಮೇಶ್ (ಸಿಮೆಂಟ್ ಮಂಜು) ಬಿಟ್ಟರೆ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ತಾ.ಪಂ ಕಾರ್ಯನಿರ್ವಹಣಾಧಿಕಾರಿ ಕೆ.ಸುಷ್ಮ, ಸಹ ಚುನಾವಣಾಧಿಕಾರಿಯಾಗಿ ಬ್ಯಾಂಕ್ ಕಾರ್ಯದರ್ಶಿ ರವಿಕುಮಾರ್ ಕಾರ್ಯ ನಿರ್ವಹಿಸಿದರು.

ಬೆಳಗೊಳ ದೇವರಾಜೇಗೌಡ ನಿಧನ



ಶ್ರೀರಂಗಪಟ್ಟಣ: ತಾಲೂಕಿನ ಬೆಳಗೊಳ ಗ್ರಾಮದ ದೇವರಾಜೇಗೌಡ (80) ವಯೋಸಹಜ ಕಾಯಿಲೆಯಿಂದ ಮಂಗಳವಾರ ಸಂಜೆ ನಿಧನರಾದರು.

ಮೃತರು ಪತ್ನಿ ವಿಜಯಮ್ಮ, ಮೂವರು ಪುತ್ರಿಯರು ಹಾಗೂ ಓರ್ವ ಪುತ್ರ ವಿಶ್ವ ಹಿಂದೂ ಪರಿಷತ್ ಮುಖಂಡ ಸುನೀಲ್ ಹಾಗೂ ಅಳಿಯ ರೈತ ಹೋರಾಟಗಾರ ಕೆ.ಎಸ್.ನಂಜುಂಡೇಗೌಡ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಬುಧವಾರ ಬೆಳಿಗ್ಗೆ 11 ಗಂಟೆಗೆ ಸ್ವ–ಗ್ರಾಮ ಬೆಳಗೊಳ ಗ್ರಾಮದಲ್ಲಿ ನಡೆಸುವುದಾಗಿ ಕುಟುಂಬ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಸಂಕಷ್ಟದಲ್ಲಿ ಸುರಕ್ಷತಾ ತಾಲೀಮು

ತಾಲೀಮು ಹೇಗಿರುತ್ತದೆ: ತಾಲೀಮಿನ ವೇಳೆ ಯುದ್ಧದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮಗಳು, ವಾಯುದಾಳಿ ಎಚ್ಚರಿಕಾ ಸೈರನ್‌ಗಳ ಸಕ್ರಿಯಗೊಳಿಸುವಿಕೆ ಜೊತೆಗೆ ನಾಗರಿಕರು ಮತ್ತು ವಿದ್ಯಾರ್ಥಿಗಳಿಗೆ ಪ್ರತಿಕೂಲ ದಾಳಿಯ ವೇಳೆ ತಮ್ಮನ್ನು ತಾವು ಹೇಗೆ ರಕ್ಷಿಸಿಕೊಳ್ಳಬೇಕೆಂದು ತರಬೇತಿ ನೀಡಲಾಗುತ್ತದೆ. ಗಡಿ ರಾಜ್ಯಗಳಾದ ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ರಾಜಸ್ಥಾನ, ಹಿಮಾಚಲ ಪ್ರದೇಶ, ಗುಜರಾತ್, ಕರ್ನಾಟಕ ಸೇರಿ ವಿವಿಧ ರಾಜ್ಯಗಳಿಗೆ ಕವಾಯತಿಗೆ ಸೂಚಿಸಲಾಗಿದೆ. ಪ್ರಧಾನಿ ಮೋದಿ ರಕ್ಷಣಾ ಅಧಿಕಾರಿಗಳೊಂದಿಗೆ ನಿರಂತರ ಉನ್ನತ ಸಭೆ ನಡೆಸಿದ ಬಳಿಕ ಈ ಸೂಚನೆ ಹೊರಬಿದ್ದಿರುವುದು ಗಮನಾರ್ಹ. ಭಾರತವು ಯಾವುದೇ ಬೆದರಿಕೆಯನ್ನು ಹಗುರವಾಗಿ ಪರಿಗಣಿಸುತ್ತಿಲ್ಲ ಎಂಬುದಕ್ಕೆ ಇದು ಸ್ಪಷ್ಟ ಸಂದೇಶವಾಗಿದೆ. ಇದು ನಿಯಮಿತ ಸನ್ನದ್ಧತೆಯ ಕ್ರಮವಾಗಿದ್ದರೂ ಕ್ಷೀಣಿಸುತ್ತಿರುವ ಪ್ರಾದೇಶಿಕ ಭದ್ರತಾ ಸನ್ನಿವೇಶಕ್ಕೆ ಸ್ಪಷ್ಟವಾದ ಪ್ರತಿಕ್ರಿಯೆಯಾಗಿದೆ ಎಂದು ಹಿರಿಯ ನಿವೃತ್ತ ಸೇನಾಧಿಕಾರಿಯೊಬ್ಬರು ಹೇಳಿದ್ದಾರೆ.

ಲೈಟ್ ಆಫ್: ಭಾನುವಾರವಷ್ಟೆ ಯುದ್ಧದ ಪರಿಸ್ಥಿತಿಯನ್ನು ಎದುರಿಸುವ ತಾಲೀಮಿನ ಭಾಗವಾಗಿ ಪಂಜಾಬ್‌ನ ಫಿರೋಜ್‌ಪುರದ ಕಂಟೋನೆಂಟ್ ಪ್ರದೇಶದಲ್ಲಿ ರಾತ್ರಿ 9ರಿಂದ 9.30ರವರೆಗೆ ವಿದ್ಯುತ್ ಕಡಿತ ಮಾಡಿ 'ಬ್ಲ್ಯಾಕೌಟ್ ಡ್ರಿಲ್' ನಡೆಸಲಾಗಿತ್ತು ಆ ವೇಳೆ ವಾಹನ ಸಂಚಾರವನ್ನೂ ನಿಲ್ಲಿಸಿ, ಅವುಗಳ ಲೈಟ್ ಆಫ್ ಕೂಡ ಮಾಡಿಸಲಾಗಿತ್ತು ಯುದ್ಧ ಸಂದರ್ಭದಲ್ಲಿ ವೈರಿಗಳಿಂದ ರಕ್ಷಣೆ ಪಡೆಯಲು ಭದ್ರತಾ ದೃಷ್ಟಿಯಿಂದ ವಿದ್ಯುತ್ ತೆಗೆಯಲಾಗುತ್ತದೆ. ಆದ್ದರಿಂದ ಪೂರ್ವಾಭ್ಯಾಸ ನಡೆಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದರು.

ಮಾಕ್ ಡ್ರಿಲ್ ಎಂದರೆ: ಅಣಕು ಕವಾಯತಿನಲ್ಲಿ ಒಂದು ಕಾಲ್ಪನಿಕ ತುರ್ತು ಪರಿಸ್ಥಿತಿಯನ್ನು ಸೃಷ್ಟಿ ಮಾಡಲಾಗುತ್ತದೆ. ಸರ್ಕಾರ, ಭದ್ರತಾ ಸಿಬ್ಬಂದಿ, ಸಾರ್ವಜನಿಕರ ಸಿದ್ಧತೆ ಪರೀಕ್ಷಿಸುವ ಅಭ್ಯಾಸವಾಗಿದ್ದರೂ ನೈಜ ಘಟನೆಯಂತೆಯೇ ನಡೆಯುತ್ತದೆ. ಈ ವೇಳೆ ಯಾವುದೇ ಹಾನಿಯಾಗದಂತೆ ಎಚ್ಚರಿಕೆ ವಹಿಸಲಾಗುತ್ತದೆ. ಸಂಕಷ್ಟದ ಸನ್ನಿವೇಶಗಳನ್ನು ಅಣಕು ಪ್ರದರ್ಶನ ಮಾಡಿ ಅಭ್ಯಾಸ ಮಾಡಲಾಗುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಭದ್ರತೆ, ಜನರ ರಕ್ಷಣೆಯ ಸಾಮರ್ಥ್ಯ ಬಲಪಡಿಸುವ ಉದ್ದೇಶದ ಜೊತೆಗೆ ಶತ್ರು ದಾಳಿ ವೇಳೆ ಸಾರ್ವಜನಿಕ ಸುರಕ್ಷತೆಯನ್ನು ಖಾತ್ರಿಪಡಿಸಲು ಅಗತ್ಯ ಸಿದ್ಧತೆ ಮಾಡಲು ಈ ಅಭ್ಯಾಸ ಸಹಾಯವಾಗಲಿದೆ.

ಯಾವುದೇ ತುರ್ತು ಸಂದರ್ಭದಲ್ಲಿ ರಾಜ್ಯ ಸರ್ಕಾರಗಳು, ಪೊಲೀಸ್, ಆರೋಗ್ಯ ಇಲಾಖೆ ಮತ್ತು ಇತರ ಸಂಸ್ಥೆಗಳ ಸಮನ್ವಯ ಬೇಕಾಗುತ್ತದೆ. ಜನರಲ್ಲಿ ತುರ್ತು ಸನ್ನಿವೇಶದ ಬಗ್ಗೆ ಜಾಗೃತಿ ಮೂಡಿಸಿ ಸುರಕ್ಷಿತವಾಗಿರಲು ತರಬೇತಿ ನೀಡಲಾಗುತ್ತದೆ. ವಾಯುದಾಳಿಯ ಸಂದರ್ಭದಲ್ಲಿ ನಗರಗಳು ಮತ್ತು ಹಳ್ಳಿಗಳಲ್ಲಿ ಸಂಪೂರ್ಣ ವಿದ್ಯುತ್ ಕಡಿತ ಮಾಡಲಾಗುತ್ತದೆ. ರಾತ್ರಿ ವಾಹನಗಳ ಸಂಚಾರವನ್ನೂ ಸ್ಥಗಿತಗೊಳಿಸಲಾಗುತ್ತದೆ. ವೈರಿ ದೇಶಗಳಿಗೆ ಊರುಗಳ ಗುರುತು ಪತ್ತೆಯಾಗದಂತೆ ಈ ಕ್ರಮ ಕೈಗೊಳ್ಳಲಾಗುತ್ತದೆ. ಇದು ಯುದ್ಧ ಅಥವಾ ತುರ್ತು ಸಂದರ್ಭದಲ್ಲಿ ಜನರನ್ನು ಮಾನಸಿಕ ಹಾಗೂ ದೈಹಿಕವಾಗಿ ಸಿದ್ಧಗೊಳಿಸುವುದಾಗಿದೆ. ಸೈರನ್‌ನ ಶಬ್ದವನ್ನು ಗುರುತಿಸಿ, ತಕ್ಷಣ ರಕ್ಷಣೆಗೆ ಕ್ರಮ ವಹಿಸುವ ಜಾಗೃತಿ ಮೂಡಿಸುವುದು. ಸರ್ಕಾರ, ಆಡಳಿತ, ಮತ್ತು ಸಾರ್ವಜನಿಕರ ನಡುವೆ ಸಮನ್ವಯ ಸುಧಾರಿಸುವುದು. ದೇಶದ ರಕ್ಷಣಾ ವ್ಯವಸ್ಥೆಯ ಸಾಮರ್ಥ್ಯವನ್ನು ಪರೀಕ್ಷಿಸುವುದು ಇದರ ಭಾಗವಾಗಿದೆ.

ಆತಂಕ ಬೇಡ: ಅಣಕು ಕವಾಯತಿನ ಸಂದರ್ಭದಲ್ಲಿ ಜನರು ಆತಂಕಕ್ಕೊಳಗಾಗಬಾರದು. ಏಕೆಂದರೆ ಇದು ಕೇವಲ ತರಬೇತಿ ವ್ಯಾಯಾಮವಾಗಿದೆ. ಸರ್ಕಾರದ ಸೂಚನೆಗಳನ್ನು ಮಾಧ್ಯಮಗಳ ಮೂಲಕ ಗಮನಿಸಿ ಕವಾಯತಿನ ಭಾಗವಾಗಿ, ಮನೆ–ಕಟ್ಟಡ, ಸರ್ಕಾರವು ಗೊತ್ತುಪಡಿಸಿದ ಬಂಕರ್ ಸೇರಿದಂತೆ ಸುರಕ್ಷಿತಾ ಸ್ಥಳಕ್ಕೆ ತೆರಳಬಹುದು. ವದಂತಿಗಳನ್ನು ನಂಬದೆ ಆಡಳಿತದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಬಹಳ ಮುಖ್ಯವಾಗುತ್ತದೆ.

ಬೆದರಿದ ಬಿಲಾವಲ್ ಶಾಂತಿ ಮಂತ್ರ

ಇಸ್ಲಾಮಾಬಾದ್: ಸಿಂಧೂ ನದಿಯ ನೀರನ್ನು ನಿಲ್ಲಿಸಿದರೆ ರಕ್ತ ಹರಿಯುತ್ತದೆ ಎಂಬ ರೋಷಾವೇಶದ ಮಾತುಗಳನ್ನಾಡಿದ ಪಾಕಿಸ್ತಾನ ಪೀಪಲ್ಸ್ ಪಾರ್ಟಿ ಅಧ್ಯಕ್ಷ ಬಿಲಾವಲ್ ಭುಟ್ಟೋ–ಜರ್ದಾರಿ ಈಗ ಭಾರತದೊಂದಿಗೆ ಶಾಂತಿಯನ್ನು ಕೋರಿದ್ದಾರೆ. ಪಾಕಿಸ್ತಾನ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಬದ್ಧವಾಗಿದೆ. ಆದರೆ ಸಂಘರ್ಷಕ್ಕಾಗಿ ಅಲ್ಲ ಎಂದು ಹೇಳಿರುವುದಾಗಿ ಡಾನ್ ವರದಿ ಮಾಡಿದೆ.

ಮಂಗಳವಾರ ಪಾಕಿಸ್ತಾನದ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಮಾತನಾಡಿದ ಜರ್ದಾರಿ, ಪಾಕಿಸ್ತಾನವು ಭಯೋತ್ಪಾದನೆಯ ಬಲಿಪಶುವಾಗಿದ್ದು, ಭಯೋತ್ಪಾದನೆಯನ್ನು ರಫ್ತು ಮಾಡುವುದಿಲ್ಲ. ಭಾರತ ಶಾಂತಿಯ ಹಾದಿಯಲ್ಲಿ ನಡೆಯಲು ಬಯಸಿದರೆ, ಅವರು ಮುಷ್ಟಿಯನ್ನು ಬಿಗಿಗೊಳಿಸದೆ ಬರೀ ಕೈಯಿಂದ ಬರಲಿ, ಸತ್ಯ ಅಥವಾ ಕಟ್ಟುಕಥೆಗಳೊಂದಿಗೆ ಬರಲಿ, ನಾವು ನೆರೆಹೊರೆಯವರಾಗಿ ಕುಳಿತು ಸತ್ಯವನ್ನು ಮಾತನಾಡೋಣ ಎಂದು ಹೇಳಿದ್ದಾರೆ. ಭಾರತದವರು ಹಾಗೆ ಮಾಡದಿದ್ದರೆ ಪಾಕಿಸ್ತಾನದ ಜನರು ಮಂಡಿಯೂರಲು ಬಿಡುವುದಿಲ್ಲ ಎಂಬುದನ್ನು ಅವರು ನೆನಪಿನಲ್ಲಿಟ್ಟುಕೊಳ್ಳಬೇಕು. ಪಾಕಿಸ್ತಾನದ ಜನರು ಹೋರಾಡುವ ಸಂಕಲ್ಪವನ್ನು ಹೊಂದಿದ್ದಾರೆ. ನಾವು ಸಂಘರ್ಷವನ್ನು ಪ್ರೀತಿಸುವುದಿಲ್ಲ, ಸ್ವಾತಂತ್ರ್ಯವನ್ನು ಪ್ರೀತಿಸುತ್ತೇವೆ ಎಂದು ಅವರು ಹೇಳಿರುವುದಾಗಿ ಡಾನ್ ವರದಿ ಮಾಡಿದೆ. ಇದಕ್ಕೂ ಮುನ್ನ ಏಪ್ರಿಲ್ 25 ರಂದು ಸುಕ್ಕೂರಿನಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಜರ್ದಾರಿ, ಸಿಂಧೂ ನದಿ ನೀರು ನಿಲ್ಲಿಸಿದ್ದರೆ ರಕ್ತ ಹರಿಯುತ್ತದೆ ಎಂದು ಅಬ್ಬರಿಸಿದ್ದ.

ಮಹಿಳೆ ಸೇರಿ 6 ಮಂದಿ ಸೆರೆ

ಸಂಪರ್ಕವಿರಿಸಿಕೊಂಡೇ ತನ್ನ ಸಹಚರರೊಂದಿಗೆ ಸೇರಿ ಕಾರ್ತಿಕ್‌ನನ್ನು ಕೊಲೆ ಮಾಡಲು ಸ್ಕೆಚ್ ಹಾಕಿದ್ದ. ಇಟ್ಟಿಗೆಗೂಡಿನ ಮೃಗಾಲಯ ಬಳಿ ಮಚ್ಚು, ಲಾಂಗ್ ಖರೀದಿ ಮಾಡಿದ ಪ್ರವೀಣ್, ಸುರೇಶ್ ಎಂಬುವರಿಗೆ ಸೇರಿದ ಸ್ಕಾರ್ಪಿಯೋ ಗಿರವಿ ಇಟ್ಟುಕೊಂಡಿದ್ದ ವೆಂಕಟೇಶ್‌ನನ್ನು ವಾಹನ ಸಮೇತ ಕರೆಸಿಕೊಂಡಿದ್ದಾನೆ. ಜೊತೆಗೆ ಅವಿನಾಶ್‌ನ ಬಜಾಜ್ ಪಲ್ಸರ್ ಬೈಕ್ ಅನ್ನು ಬಳಸಿಕೊಂಡು ಕಾರ್ಯಾಚರಣೆಗಿಳಿದಿದ್ದಾಗಿ ಬಂಧಿತ ಆರೋಪಿಗಳು ಪೊಲೀಸರಲ್ಲಿ ಹೇಳಿಕೆ ನೀಡಿದ್ದಾರೆ. ಮೈಸೂರಿನ ವಿದ್ಯಾರಣ್ಯಪುರಂನ ಕನಕಗಿರಿ ಬಡಾವಣೆಯ ನಳಂದ ಆಂಗ್ಲ ಮಾಧ್ಯಮ ಶಾಲೆ ಬಳಿಯ ಖಾಲಿ ಜಾಗದಲ್ಲಿ ಕಳೆದ ಒಂದು ವಾರದಿಂದ ಪ್ರತಿದಿನ ರಾತ್ರಿ 10 ಗಂಟೆ ನಂತರ ಸೇರುತ್ತಿದ್ದ ಈ 6 ಮಂದಿ, ಅಲ್ಲಿಯೇ ಕುಡಿಯುತ್ತಾ, ಕಾರ್ತಿಕ್ ಮುಗಿಸಲು ಸ್ಕೆಚ್ ಹಾಕಿದ್ದರು ಎಂಬ ವಿಷಯವೂ ಬೆಳಕಿಗೆ ಬಂದಿದೆ. ರಿಯಲ್ ಎಸ್ಟೇಟ್ ವ್ಯವಹಾರ ಮತ್ತು ಹೂದ ಲೇವಾದೇವಿ ಮಾಡುತ್ತಿದ್ದ ಕಾರ್ತಿಕ್ ಹಣಕಾಸು ವಿಷಯದಲ್ಲಿ ವೆಂಕಟೇಶ್‌ನೊಂದಿಗೂ ಜಗಳ, ಹೊಡೆದಾಡಿಕೊಂಡಿದ್ದರಿಂದ ವಿರೋಧಿ ಗುಂಪು ಒಂದಾಗಿ ಲಕ್ಷ್ಮಿಯನ್ನೂ ಬಳಸಿಕೊಂಡು ಕಾರ್ಯಾಚರಣೆ ನಡೆಸಿ, ಕಡೆಗೂ ವಿರೋಧಿ ಕಾರ್ತಿಕ್‌ನನ್ನು ಕೊಚ್ಚಿ ಕೊಂದಿದ್ದಾರೆ ಎಂಬುದು ಪೊಲೀಸರ ವಿಚಾರಣೆಯಿಂದ ತಿಳಿದು ಬಂದಿದೆ.

ಬಂಧಿತ ಆರೋಪಿಗಳನ್ನು ಇಂದು ಮಧ್ಯಾಹ್ನ ಘಟನೆ ನಡೆದ ವರುಣದ ಹೋಟೆಲ್ ಬಳಿಗೆ ಕರೆದೊಯ್ದು ಮಹಜರು ನಡೆಸಿದ ಬಳಿಕ ಸಂಜೆ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು ಎಂದು ಎಸ್ಪಿ ಎನ್. ವಿಷ್ಣುವರ್ಧನ್ ತಿಳಿಸಿದ್ದಾರೆ. ಎಸ್ಪಿ ವಿಷ್ಣುವರ್ಧನ್ ಅವರ ಮಾರ್ಗದರ್ಶನದಲ್ಲಿ ಎಎಸ್ಪಿ ಸಿ. ಮಲ್ಲಿಕ, ನಾಗೇಶ ನಡೆಸಿದ ಪತ್ತೆ ಕಾರ್ಯಾಚರಣೆಯಲ್ಲಿ ಡಿವೈಎಸ್ಪಿ ಕರೀಂ ರಾವತರ್, ಇನ್‌ಸ್ಪೆಕ್ಟರ್‌ಗಳಾದ ಶಿವನಂಜಶೆಟ್ಟಿ, ಶೇಖರ್, ಸಬ್‌ಇನ್‌ಸ್ಪೆಕ್ಟರ್‌ಗಳಾದ ಲೋಕೇಶ್, ಮಹೇಶ್, ಪ್ರಕಾಶ್ ಎತ್ತಿನಹೊಳೆ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

69 ವಾಹನ, 13.54 ಲಕ್ಷ ರೂ. ನಗದು ಜಪ್ತಿ



ಪೊಲೀಸರು ವಶಪಡಿಸಿಕೊಂಡಿರುವ ಬೈಕ್‌ಗಳು.

ಕಾರ್ಯಕ್ರಮದಲ್ಲಿ ವಾರಸುದಾರರಿಗೆ ಆಭರಣಗಳನ್ನು ಹಿಂದಿರುಗಿಸ ಲಾಯಿತು. ಸಿಸಿಬಿ ಘಟಕದ ಪೊಲೀಸರು ನಾಲ್ವರು ಆರೋಪಿಗಳನ್ನು ಬಂಧಿಸಿ 22 ಕಳವು ಪ್ರಕರಣ ಪತ್ತೆ ಮಾಡಿದ್ದು, 62,71,500 ರೂ. ಬೆಲೆಯ 802.575 ಗ್ರಾಂ ಚಿನ್ನಾಭರಣ, 1,520 ಗ್ರಾಂ ಬೆಳ್ಳಿ ಪದಾರ್ಥ, ಐದು ವಾಹನಗಳು, 1 ಪಿಸ್ತೂಲ್ ಮತ್ತು 2 ಜೀವಂತ ಗುಂಡುಗಳನ್ನು ವಶ ಪಡಿಸಿಕೊಂಡಿದ್ದಾರೆ. ಸರಸ್ವತಿಪುರಂ ಠಾಣೆ ಪೊಲೀಸರು, 5 ಕನ್ನಕಳವು ಪ್ರಕರಣ ಭೇದಿಸಿದ್ದು, 38,82,024 ರೂ. ಮೌಲ್ಯದ 539.17 ಗ್ರಾಂ ಚಿನ್ನಾಭರಣವನ್ನು ವಶಪಡಿಸಿಕೊಂಡಿದ್ದಾರೆ.

ಆಲನಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ 7 ಸರಗಳ್ಳತನ ಪ್ರಕರಣಗಳನ್ನು ಪತ್ತೆ ಮಾಡಿರುವ ಪೊಲೀಸರು, 4 ಮಂದಿಯನ್ನು ಬಂಧಿಸಿ ಅವರಿಂದ 15 ಲಕ್ಷ ರೂ. ಬೆಲೆಬಾಳುವ 190 ಗ್ರಾಂ ಚಿನ್ನಾಭರಣವನ್ನು ವಶಕ್ಕೆ ಪಡೆದಿದ್ದಾರೆ. ನಜರ್‌ಬಾದ್ ಠಾಣಾ ವ್ಯಾಪ್ತಿಯಲ್ಲಿ ಓರ್ವನನ್ನು ಬಂಧಿಸಿದ್ದು, 11 ವಾಹನ ಕಳವು ಪ್ರಕರಣಗಳನ್ನು ಭೇದಿಸಿದ್ದು, 7 ಲಕ್ಷ ರೂ. ಮೌಲ್ಯದ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಎನ್‌ಡಿಪಿಎಸ್ ಕಾಯ್ದೆಯಡಿ ದಾಖಲಾಗಿದ್ದ 25 ಪ್ರಕರಣ ಗಳಲ್ಲಿ 52 ಆರೋಪಿಗಳನ್ನು ಬಂಧಿಸಿದ್ದು, 57,47,850 ರೂ. ಮೌಲ್ಯದ 224 ಕೆಜಿ 375 ಗ್ರಾಂ ಗಾಂಜಾ, 96 ಗ್ರಾಂ 16 ಮಿಲಿ ಸಿಂಥಟಿಕ್ಸ್ ಡ್ರಗ್ಸ್ ಅನ್ನು ವಶ ಪಡಿಸಿಕೊಳ್ಳಲಾಗಿದೆ ಎಂದ ಸೀಮಾ ಲಾಟ್ಕರ್, ಸೈಬರ್ ಠಾಣೆ ಪೊಲೀಸರು 4 ಷೇರ್ ಮಾರ್ಕೆಟ್, 1 ಜಾಬ್ ಫ್ರಾಡ್, 1 ಡಿಜಿಟಲ್ ಅರೆಸ್ಟ್, 1 ಟಿಪ್‌ಲೈನ್ ಪ್ರಕರಣಗಳನ್ನು ಪತ್ತೆ ಮಾಡಿ 13 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ ಎಂದರು. ಈ ಸಂದರ್ಭ ಡಿಸಿಪಿಗಳಾದ ಎಂ. ಮುತ್ತುರಾಜ್, ಸುಂದರರಾಜ್, ಎಲ್ಲಾ ಉಪವಿಭಾಗಗಳ ಎಸಿಪಿಗಳು ಹಾಗೂ ಎಲ್ಲಾ ಠಾಣೆಗಳ ಇನ್‌ಸ್ಪೆಕ್ಟರ್‌ಗಳು ಉಪಸ್ಥಿತರಿದ್ದರು.

ಇನ್ನೂ ನಾಲ್ಕು ಸಲ ಕಿತ್ತುಕೊಳ್ಳಲಿ! ನಾನು ಚೈನ್ ಹಾಕದೇ ಇರಲಾರೆ!!

84ರ ವಯೋವೃದ್ಧೆ ವಿಜಯಲಕ್ಷ್ಮಿ ಸರಗಳ್ಳರಿಗೆ ಸವಾಲು

ಮೈಸೂರು, ಮೇ 6(ಆರ್‌ಕೆ)– ಇನ್ನೂ ನಾಲ್ಕು ಸಲ ಕಿತ್ತುಕೊಳ್ಳಲಿ, ನಾನಂತೂ ಚಿನ್ನದ ಸರ, ಒಡವೆ ಹಾಕಿಕೊಳ್ಳದೇ ಇರಲಾರೆ ಎಂದು ಮೈಸೂರಿನ ಕುವೆಂಪುನಗರ ಎಂ–ಬ್ಲಾಕ್ ನಿವಾಸಿ, 84 ವರ್ಷದ ವಿಜಯಲಕ್ಷ್ಮಿ ಅವರು ಸರಗಳ್ಳರಿಗೆ ಸವಾಲು ಹಾಕಿದ್ದಾರೆ.



ಮೈಸೂರಿನ ನಗರ ಪೊಲೀಸ್ ಕಮಿಷ್ನರ್ ಕಚೇರಿ ಆವರಣದಲ್ಲಿ ಇಂದು ನಡೆದ ಪ್ರಾಪರ್ಟಿ ರಿಟರ್ನ್ ಪರೇಡ್‌ನಲ್ಲಿ ಭಾಗವಹಿಸಿದ್ದ ಅವರು, ಖದೀಮರು ಕಿತ್ತುಕೊಂಡು ಹೋಗಿದ್ದ 11.5 ಗ್ರಾಂ ಚಿನ್ನದ ಸರ ಪತ್ತೆ ಮಾಡಿ ಹಿಂದಿರುಗಿಸಿದ ಪೊಲೀಸರು, ಇನ್ನು ಮುಂದೆ ಹುಷಾರಾಗಿರಿ ಎಂಬ ಸಲಹೆಗೆ ಪ್ರತಿಕ್ರಿಯಿಸಿ, ಕಳ್ಳರು ಕಿತ್ತುಕೊಳ್ಳುತ್ತಾರೆಂದು ನಾನು ಆಭರಣ ತೊಡಬಾರದೆ? ಹಿಂದಿನಿಂದಲೂ ನಾವು ಒಡವೆಗಳನ್ನು ತೊಟ್ಟಿದ್ದೇವೆ ಅದಿಲ್ಲದೇ ಇರಲಾರೆನು. ಬೇಕಿದ್ದರೆ ಇನ್ನೂ ನಾಲ್ಕು ಸಲ ಕಿತ್ತುಕೊಳ್ಳಲಿ, ನಾನಂತೂ ಸರ ತೊಡುವುದನ್ನು ಬಿಡಲಾರೆ ಎಂದು ವಿಜಯಲಕ್ಷ್ಮಿ ಅವರು ಹೇಳುತ್ತಿದ್ದಂತೆಯೇ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್ ಸೇರಿದಂತೆ ನೆರೆದಿದ್ದವರು ಅವಾಕ್ಕಾದರು.

ಈ ಬಗ್ಗೆ ಅಲ್ಲೇ ಇದ್ದ ಅವರ ಹೆಣ್ಣು ಮಕ್ಕಳು ಕಿವಿಮಾತು ಹೇಳು ಮುಂದಾದಾಗ ಅವರ ವಿರುದ್ಧವೇ ತಿರುಗಿ ಬಿದ್ದ ವೃದ್ಧೆ, ತಾಯಿ, ನೀವ್ ಬೇಕಾದರೆ ಹಾಗೆಯೇ ಇರಿ, ನಾನಂತೂ ಒಡವೆ ಹಾಕಿಕೊಳ್ಳುತ್ತೇನೆ ಎಂದು ಅವಾಜ್ ಹಾಕಿದರು. ವಾಯು ವಿಹಾರ ಮುಗಿಸಿ ಮನೆಗೆ ಹಿಂದಿರುಗುತ್ತಿದ್ದಾಗ ಹಿಂದಿನಿಂದ ಬೈಕ್‌ನಲ್ಲಿ ಬಂದ ಅಪರಿಚಿತ ಯುವಕರಿಬ್ಬರು, ಕುವೆಂಪುನಗರದ ಮೆಗಾ ಮೆಡಿಕಲ್ ಸ್ಟೋರ್ ಬಳಿ ವಿಜಯಲಕ್ಷ್ಮಿ ಅವರ ಕೊರಳಿನಲ್ಲಿದ್ದ 11.5 ಗ್ರಾಂ ಚಿನ್ನದ ಸರ ಎಗರಿಸಿ ಪರಾರಿಯಾಗಿದ್ದರು. ಪೊಲೀಸರು ಅದನ್ನು ಪತ್ತೆ ಮಾಡಿ, ಅವರಿಗೆ ಇಂದು ಹಿಂದಿರುಗಿಸಿದರು.

ಶಾಸಕ ಜನಾರ್ದನ ರೆಡ್ಡಿಗೆ ಏಳು ವರ್ಷ ಜೈಲು ಶಿಕ್ಷೆ

ಜನಾರ್ದನ ರೆಡ್ಡಿ, ಕೋರ್ಟ್‌ಗೆ ಮನವಿ ಮಾಡಿದ್ದರು. ನಾನು ಈಗಾಗಲೇ ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ಬಂಧನದಲ್ಲಿ ಕಳೆದಿದ್ದೇನೆ. ನನ್ನ ವಯಸ್ಸು ಮತ್ತು ನಾನು ಮಾಡಿದ ಸಾರ್ವಜನಿಕ ಸೇವೆಯನ್ನು ಪರಿಗಣಿಸಿ. ಬಳ್ಳಾರಿ ಮತ್ತು ಗಂಗಾವತಿಯ ಜನರು ನನ್ನನ್ನು ಭಾರಿ ಬಹುಮತದಿಂದ ಆಯ್ಕೆ ಮಾಡಿದ್ದಾರೆ. ನಾನು ಸಾರ್ವಜನಿಕ ಸೇವೆಗೆ ಸಮರ್ಪಿತನಾಗಿದ್ದೇನೆ. ಸಾರ್ವಜನಿಕರಿಂದ ನನಗೆ ಸಿಗುವ ಬೆಂಬಲವು ಆ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ದಯವಿಟ್ಟು ಶಿಕ್ಷೆ ಪ್ರಮಾಣವನ್ನು ಕಡಿಮೆ ಮಾಡಿ ಎಂದು ರೆಡ್ಡಿ ಕೋರ್ಟ್‌ಗೆ ಅಂಗಲಾಚಿದ್ದಾರೆ. ಆದರೆ, ಕೋರ್ಟ್ ಇದನ್ನು ನಿರಾಕರಿಸಿದೆ. ನಿಮಗೆ 10 ವರ್ಷಗಳ ಶಿಕ್ಷೆಯನ್ನು ಏಕೆ ನೀಡಬಾರದು. ನೀವು ಜೀವಾವಧಿ ಶಿಕ್ಷೆಗೆ ಅರ್ಹರು ಎಂದು ತಪರಾಕಿ ಹಾಕಿ ರೆಡ್ಡಿ ಮನವಿಯನ್ನು ತಿರಸ್ಕರಿಸಿದೆ.


ರೆಡ್ಡಿಗೆ ಮುಂದಿರುವ ಆಯ್ಕೆ: 3 ವರ್ಷಕ್ಕಿಂತ ಹೆಚ್ಚು ಶಿಕ್ಷೆ ಆಗಿರುವುದರಿಂದ ಶಾಸಕ ಜನಾರ್ದನ ರೆಡ್ಡಿ ಜೈಲು ಖಚಿತವಾಗಿದೆ. ಹಾಗೇ ಒಂದು ತಿಂಗಳೊಳಗೆ ರೆಡ್ಡಿಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಹೀಗಾಗಿ ಹೈಕೋರ್ಟ್‌ನಿಂದ ತಡೆ ಸಿಕ್ಕರಷ್ಟೇ ರೆಡ್ಡಿ ಬಚಾವ್ ಆಗಲಿದ್ದಾರೆ.

ಹೀಗಾಗಿ ರೆಡ್ಡಿ ಜಾಮೀನಿಗಾಗಿ ಹೈದರಾಬಾದ್‌ನ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಆದರೆ, ಹೈಕೋರ್ಟ್ ಜಾಮೀನು ನೀಡುವವರೆಗೆ ಜೈಲಿನಲ್ಲಿರಬೇಕು. ಇನ್ನು ಶಿಕ್ಷೆಗೆ ತಡೆಯಾಜ್ಞೆ ಸಿಗದಿದ್ದರೆ ಶಾಸಕ ಸ್ಥಾನದಿಂದ ಅನರ್ಹಗೊಳ್ಳುವ ಭೀತಿಯೂ ಇದೆ.

ಏನಿದು ಪ್ರಕರಣ: ಆಂಧ್ರ ಪ್ರದೇಶದಲ್ಲಿ ವೈ.ಎಸ್ ರಾಜಶೇಖರರೆಡ್ಡಿ ಹಾಗೂ ಕರ್ನಾಟಕದಲ್ಲಿ ಬಿ.ಎಸ್. ಯಡಿಯೂರಪ್ಪ ಸಿಎಂ ಆಗಿದ್ದಾಗ ಓಬಳಾಪುರಂ ಅಕ್ರಮ ಗಣಿಕಾರಿಕೆ ಪ್ರಕರಣ ಬೆಳಕಿಗೆ ಬಂದಿತ್ತು. ಆಂಧ್ರ-ಕರ್ನಾಟಕದ ಗಡಿಗೆ ಹೊಂದಿಕೊಂಡ ಓಬಳಾಪುರಂ ಹಾಗೂ ಡಿ. ಹಿರೇಹಾಳದಲ್ಲಿ ಕ್ರಮವಾಗಿ 68.5 ಹಾಗೂ 39.5 ಹೆಕ್ಟೇರ್ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆದಿದೆ ಎಂದು ಆರೋಪಿಸಲಾಗಿತ್ತು. ಗಣಿಗಾರಿಕೆ ಮಂಜೂರಾತಿ ವೇಳೆ 23 ಅರ್ಜಿದಾರರನ್ನು ನಿರ್ಲಕ್ಷಿಸಿ ಓಎಂಸಿ ಕಂಪನಿಗೆ ಗುತ್ತಿಗೆ ನೀಡಲಾಗಿತ್ತು. ಹಾಗಾಗಿ ಅರಣ್ಯ ಇಲಾಖೆ, ಗಣಿ ಇಲಾಖೆಯಿಂದ ಅಕ್ರಮ ಆಗಿದೆ ಎಂದು ಆರೋಪಿಸಲಾಗಿತ್ತು. ಓಬಳಾಪುರ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ 884 ಕೋಟಿ ಅಕ್ರಮ ಎಸಗಿರುವುದು ಸಾಬೀತಾಗಿದೆ. ಒಟ್ಟು 29 ಲಕ್ಷ ಟನ್ ಅದಿರು ಲೂಟಿ ಮಾಡಿರುವ ಆರೋಪ ಇವರ ಮೇಲಿದೆ. ಈಗಾಗಲೇ ಇದೇ ಪ್ರಕರಣದಲ್ಲಿ ಮೂರೂವರೇ ವರ್ಷ ಜೈಲು ಶಿಕ್ಷೆ ಅನುಭವಿಸಿ ಜಾಮೀನಿನ ಮೇಲೆ ಆಚೆ ಬಂದಿದ್ದಾರೆ.

ನ್ಯಾಯ ಸಿಕ್ಕಿದೆ

ಈ ತೀರ್ಪು ತಮ್ಮ ದೀರ್ಘಕಾಲದ ಹೋರಾಟಕ್ಕೆ ಸಿಕ್ಕ ಜಯ. ಜನಾರ್ದನ ರೆಡ್ಡಿಯವರಿಗೆ ಶಿಕ್ಷೆ ಪ್ರಕಟವಾಗಿದ್ದರಿಂದ ನಮ್ಮ ತಂದೆ–ತಾಯಿಯ ಆತ್ಮಕ್ಕೆ ಶಾಂತಿ ಸಿಕ್ಕಿದೆ. ಜನಾರ್ದನ ರೆಡ್ಡಿಯವರು ರಾಜಕೀಯ ಬೆಂಬಲದಿಂದ ಮೊದಲಿನಿಂದಲೂ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ್ದರು. ಆಂಧ್ರಪ್ರದೇಶದಲ್ಲಿ ಪರವಾನಗಿ ಪಡೆದು ಕರ್ನಾಟಕದಲ್ಲಿ ಗಣಿಗಾರಿಕೆ ನಡೆಸಿದ್ದಾರೆ. ಒತ್ತುವರಿ ಮಾಡಿಕೊಂಡ ಭೂಮಿಯಲ್ಲಿ ಅಕ್ರಮವಾಗಿ ಗಣಿಗಾರಿಕೆ ಮಾಡಿದ್ದಾರೆ. ಕರ್ನಾಟಕದಲ್ಲಿ 29 ಲಕ್ಷ ಟನ್‌ಗೂ ಅಧಿಕ ಅದಿರನ್ನು ಅಕ್ರಮವಾಗಿ ಸಾಗಿಸಿದ್ದಾರೆ. ಈ ವಿಚಾರದಲ್ಲಿ ನಮ್ಮ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಅಧಿಕಾರಿಗಳೇ ರೆಡ್ಡಿಯವರಿಗೆ ಸಹಕಾರ ನೀಡಿದ್ದರು. ನಮ್ಮ ಮೇಲೆ ಮಾರಣಾಂತಿಕ ಹಲ್ಲೆಗಳು, ಕೊಲೆ ಯತ್ನಗಳು ನಡೆದವು. ಕರ್ನಾಟಕ ಮತ್ತು ಆಂಧ್ರ ಪ್ರದೇಶದಲ್ಲಿ ನನ್ನ ವಿರುದ್ಧ ಹಲವು ಕೇಸ್‌ಗಳನ್ನು ಸಹ ದಾಖಲಿಸ ಲಾಯಿತು. ಆದರೆ, ಎಲ್ಲಾ ಕೇಸ್‌ಗಳಿಂದ ಖುಲಾಸೆಗೊಂಡು, ಎದೆಗುಂದದೇ ಹೋರಾಟ ಮುಂದುವರಿಸಿದೆವು.



– ಟಪಾಲ್ ಗಣೇಶ್, ದೂರುದಾರ



ಬಂಬೂಬಜಾರ್‌ನ ಎಪಿಎಂಸಿ ಆವರಣದಲ್ಲಿ ಕೊಚ್ಚೆ, ದುರ್ವಾಸನೆ ನಡುವೆ ಹಣ್ಣುಗಳ ಮಾರಾಟ!

● ಇಡೀ ಆವರಣದಲ್ಲಿ ಕೊಚ್ಚೆ ನೀರು; ಜೊತೆ ದುರ್ವಾಸನೆ ● ಇಲ್ಲಿ ಸ್ವಚ್ಛತೆ ಎಂಬುದು ಕನಸಿನ ಮಾತಂತೆ ● ಹಣ್ಣು ವ್ಯಾಪಾರಿಗಳ ಅಳಲು ಕೇಳುವವರೇ ಇಲ್ಲ



ಮೈಸೂರು, ಮೇ 6(ಎಂಕೆ)– ಮೈಸೂರಿನ ಬಂಬೂಬಜಾರ್‌ನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ)ಯ ಹಣ್ಣುಗಳ ಸಗಟು ಮಾರುಕಟ್ಟೆ(ಉಪ ಪ್ರಾಂಗಣ)ಯಲ್ಲಿ ಕೊಳಚೆ ನೀರು ಹರಿಯುತ್ತಿದ್ದು, ಎಲ್ಲೆಂದರಲ್ಲಿ ಕಸ, ಕೊಳೆತ ಹಣ್ಣುಗಳ ರಾಶಿ, ದುರ್ವಾಸನೆಯಿಂದ ಅನೈರ್ಮಲ್ಯತೆ ತಾಂಡವವಾಡುತ್ತಿದೆ.

ಪ್ರತಿನಿತ್ಯ ಸಾವಿರಾರು ಮಂದಿ ವ್ಯಾಪಾರಿಗಳು ಭೇಟಿ ನೀಡುವ ಹಣ್ಣುಗಳ ಸಗಟು ಮಾರುಕಟ್ಟೆಯಲ್ಲಿ ಕಸದ ರಾಶಿ ಕಣ್ಣಿಗೆ ರಾಚುತ್ತಿದೆ. ಕೊಳೆತ ಹಣ್ಣುಗಳ ದುರ್ವಾಸನೆ ತಲೆ ತಿರುಗಿಸಿದರೆ, ಚರಂಡಿಯಿಂದ ಹರಿಯುತ್ತಿರುವ ಕೊಳಚೆ ನೀರು ವ್ಯಾಪಾರಿಗಳು, ಗ್ರಾಹಕರನ್ನು ನಿತ್ಯ ನರಳುವಂತೆ ಮಾಡಿದ್ದು, ಅದೇ ಕೊಚ್ಚೆ, ದುರ್ವಾಸನೆ ನಡುವೆಯೇ ಹಣ್ಣುಗಳ ಮಾರಾಟ ಮಾಡಲಾಗುತ್ತಿದೆ.

ಸುಮಾರು 150ಕ್ಕೂ ಹೆಚ್ಚು ಮಳಿಗೆಗಳಿರುವ ಮಾರುಕಟ್ಟೆಯಲ್ಲಿ ಶುಚಿತ್ವ ಎಂಬುದು ಮರೆಯಾಗಿದ್ದು, ಕೊಳೆತ ಹಣ್ಣುಗಳು ರಾಶಿ ಜೊತೆಗೆ ಕೊಳಚೆ ನೀರು ನಿಂತು ಸೊಳ್ಳೆಯ ಉತ್ಪಾದನೆ ಕೇಂದ್ರವಾಗಿಯೂ ಮಾರುಕಟ್ಟೆ ಬದಲಾಗಿದೆ. ವಿಶಾಲ ಮಾರುಕಟ್ಟೆಯಲ್ಲಿ ಕಣ್ಣು ಹಾಯಿಸಿದ ಕಡೆ ಎಲ್ಲಾ ಪೇಪರ್, ಒಣ ಹುಲ್ಲು, ಕೊಳತೆ ಹಣ್ಣು–ತರಕಾರಿಗಳು, ಗುಂಡಿಗಳಲ್ಲಿ ನಿಂತಿರುವ ಕೊಳಚೆ ನೀರು, ಕೊಳೆತು ಗಬ್ಬೆದ್ದು ನಾರುತ್ತಿರುವ ಕಸ ನೋಡಿದರೆ ಅಸಹ್ಯ ಉಂಟಾಗಲಿದೆ.

ಅಲ್ಲದೆ ಮೈಸೂರಿನಲ್ಲಿ ಕೆಲ ದಿನಗಳಿಂದ ನಿರಂತರ ಮಳೆಯಾಗುತ್ತಿರುವುದು ಮಾರುಕಟ್ಟೆಯ ಸಗಟು ವ್ಯಾಪಾರಿಗಳ ನಿದ್ದೆಗೆಡಿಸಿದೆ. ಸಣ್ಣ ಮಳೆ ಬಿದ್ದರೂ ಒಳಚರಂಡಿಗಳಿಂದ ಉಕ್ಕುವ ಕೊಳಚೆ ನೀರು, ಗೂಡ್ಸ್ ವಾಹನಗಳು ಮತ್ತು ಲೋಡ್ ಲಾರಿಗಳು ಸಂಚರಿಸುವ (ಬಂಬೂ ಬಜಾರ್ ಕಡೆಯ ಗೇಟ್) ಗೇಟ್, ಸಮೀಪದ ಮಳಿಗೆಗಳು ಹಾಗೂ ಕಸ ಸುರಿಯುವ ಸ್ಥಳದಲ್ಲಿ ಕೆರೆ–ಕಟ್ಟೆಯಂತೆ ನಿಲ್ಲಲಿದೆ. ಇದರಿಂದ ಸಂಚಾರಕ್ಕೆ ತೀವ್ರ ತೊಂದರೆಯಾಗುವುದು ಮಾತ್ರವಲ್ಲದೆ ಕೊಳಚೆ ನೀರಿನ ನಡುವೆಯೇ ಮಾರಾಟ ಮಾಡಬೇಕಾದ ದುಸ್ಥಿತಿ ನಿರ್ಮಾಣವಾಗುತ್ತಿದೆ. ಹಾಗೆಯೇ ರೈಲ್ವೆ ನಿಲ್ದಾಣದ ಕಡೆಯಿಂದ ದೊಡ್ಡ ಮೋರಿಯಲ್ಲಿ ಹರಿಯುವ ಕೊಳಚೆ ನೀರು ಸಹ ಹಲವು ದಿನಗಳಿಂದ ಉಕ್ಕಿ ಹರಿಯುತ್ತಿರುವುದು ವ್ಯಾಪಾರಿಗಳನ್ನು ಹೈರಾಣಾಗಿಸಿದೆ. ಹತ್ತಾರು ಮಳಿಗೆಗಳ ಸುತ್ತಲೂ ಕೊಳಚೆ ನೀರು ಆವರಿಸುತ್ತಿದ್ದು, ವ್ಯಾಪಾರಕ್ಕೆ ತೀವ್ರ ತೊಂದರೆ ಉಂಟಾಗುತ್ತದೆ. ನಿತ್ಯ ಹರಿಯುವ ಕೊಳಚೆ ನೀರಿನಿಂದಾಗುತ್ತಿರುವ ವ್ಯಾಪಾರ ಮಾಡಲು ಸಾಧ್ಯವಾಗಷ್ಟು ಹಲವು ಮಳಿಗೆಗಳನ್ನು ಬಂದ್ ಮಾಡಲಾಗಿದೆ.

ಮಳೆ ಬಂದರೇ ನರಕ ದರ್ಶನ...!

“ಮಾರುಕಟ್ಟೆಯೊಳಗಿನ ಎಲ್ಲಾ ಚರಂಡಿಗಳು ಮುಚ್ಚಿ ಹೋಗಿದ್ದು, ಮಳೆ ಬಂದರೆ ಮಳಿಗೆಗಳ ಸುತ್ತಲೂ ನೀರು ಆವರಿಸಲಿದೆ. ಮಳೆ ನೀರು ಜೊತೆಗೆ ಒಳಚರಂಡಿ ಕೊಳಚೆ ನೀರು ಮಳಿಗೆಗಳ ಒಳಗೆ ತುಂಬಿಕೊಳ್ಳಲಿದೆ ಲಕ್ಷಾಂತರ ರೂ. ಬಂಡವಾಳ ಹಾಕಿ ತಂದಿರುವ ಹಣ್ಣುಗಳು ಕೊಳಚೆ ನೀರಿನಿಂದ ಹಾಳಾಗುತ್ತಿವೆ. ಮಳೆ ಬಂದರೆ ನರಕ ನೋಡುತ್ತೇವೆ.

–ನೊಂದ ವ್ಯಾಪಾರಸ್ಥರು

ಅಸಮರ್ಪಕ ಕಸ ವಿಲೇವಾರಿ: ಹಣ್ಣುಗಳ ಸಗಟು ಮಾರುಕಟ್ಟೆ(ಎಪಿಎಂಸಿ ಉಪ ಪ್ರಾಂಗಣ)ಯಲ್ಲಿ ಕಸ ವಿಲೇವಾರಿ ಅಸಮರ್ಪಕವಾಗಿರುವುದೇ ಅನೈರ್ಮಲ್ಯಕ್ಕೆ ಕಾರಣವಾಗಿದೆ. ಮೂರು ಅಥವಾ ನಾಲ್ಕು ದಿನಗಳಿಗೊಮ್ಮೆ ಕಸ ವಿಲೇವಾರಿ ಮಾಡುತ್ತಿರುವುದರಿಂದ ಎಲ್ಲೆಂದರಲ್ಲಿ ಕಸದ ರಾಶಿ ಹೆಚ್ಚಾಗುತ್ತಿದೆ. ಪ್ಯಾಕಿಂಗ್ ಆಗಿ ಬರುವ ಹಣ್ಣುಗಳನ್ನು ಟ್ರೈಗೆ ಹಾಕುವಾಗ ಪೇಪರ್ ಮತ್ತು ಒಣ ಹುಲ್ಲಿನ ಕಸ ಉಂಟಾಗಲಿದ್ದು, ಆಯಾ ದಿನದಲ್ಲೇ ವಿಲೇವಾರಿ ಮಾಡದಿದ್ದರೆ ಕಸದ ಪ್ರಮಾಣ ಹೆಚ್ಚಾಗಲಿದೆ. ಮಾರುಕಟ್ಟೆಯ ಕಸ ವಿಲೇವಾರಿ ಗುತ್ತಿಗೆಯನ್ನು ಮೂವರು ಪಡೆದಿದ್ದು, ಯಾರೊಬ್ಬರೂ ವ್ಯವಸ್ಥಿತವಾಗಿ ಕಸ ವಿಲೇವಾರಿ ಮಾಡುತ್ತಿಲ್ಲ ಎಂದು ಮಳಿಗೆದಾರರು ಆರೋಪಿಸಿದ್ದಾರೆ.

7 ಮಂದಿ ಸ್ವಚ್ಛತಾ ಸಿಬ್ಬಂದಿ: 150ಕ್ಕೂ ಹೆಚ್ಚು ಮಳಿಗೆಗಳಿರುವ ಮಾರುಕಟ್ಟೆಯಲ್ಲಿ ಸ್ವಚ್ಛತೆಗೆ ಕೇವಲ 7 ಮಂದಿ ಸಿಬ್ಬಂದಿಗಳನ್ನು ನೇಮಿಸಲಾಗಿದೆ. ಅವರಲ್ಲಿ ಇಬ್ಬರು ಮಹಿಳೆಯರು ಗುಡಿಸಿ, ಕಸ ಗುಡ್ಡೆ ಮಾಡಿದರೆ, ಐವರು ವಿಲೇವಾರಿ ಮಾಡುತ್ತಾರೆ. ಇಡೀ ದಿನ ಗುಡಿಸಿದರೂ ಮಾರುಕಟ್ಟೆಯ ಎಲ್ಲಾ ಕಡೆ ಕಸ ಗುಡಿಸಲು ಇಬ್ಬರು ಮಹಿಳೆಯರಿಂದ ಸಾಧ್ಯವಾಗುತ್ತಿಲ್ಲ. ಒಂದು ಕಡೆಯಿಂದ ಗುಡಿಸುತ್ತಾ ಬಂದಂತೆ, ಹಿಂದಿನಿಂದ ಮತ್ತೆ ಮಳಿಗೆಗಳಿಂದ ಕಸ ಬೀಳುತ್ತಿರಲಿದೆ. ಆದರೂ ಕಳೆದ ಹಲವು ವರ್ಷಗಳಿಂದ ಸ್ವಚ್ಛತಾ ಸಿಬ್ಬಂದಿಗೆ ಹೆಚ್ಚಿಸದೇ ನಿರ್ವಹಣೆ ಮಾಡಲಾಗುತ್ತಿದೆ ಎಂದು ಸ್ವಚ್ಛತಾ ಸಿಬ್ಬಂದಿಯೊಬ್ಬರು ಕಸ ವಿಲೇವಾರಿಯ ಸ್ಥಿತಿಯನ್ನು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ತ್ವರಿತವಾಗಿ ಕಸ ವಿಲೇವಾರಿಗೆ ಸೂಚನೆ...

“ರಾಜಕಾಲುವೆ ಹೊಸದಾಗಿ ಮಾಡಿದ್ದು, ಅಲ್ಲಲ್ಲಿ ಬ್ಲಾಕ್ ಆಗಿದೆ. ಬ್ಲಾಕ್ ಆಗಿರುವ ಸ್ಥಳಗಳಲ್ಲಿ ಒಡೆಸಿ ಮರು ದುರಸ್ಥಿ ಮಾಡುವಂತೆ ಇಂಜಿನಿಯರ್‌ಗಳಿಗೆ ತಿಳಿಸಲಾಗಿದ್ದು, ಒಂದೆರಡು ದಿನಗಳಲ್ಲಿ ದುರಸ್ಥಿ ಪಡಿಸಲಾಗುವುದು. ಕಸ ವಿಲೇವಾರಿ ಸಮಸ್ಯೆ ಇದ್ದು, ಜೆಸಿಬಿ ಮೂಲಕ ವಿಲೇವಾರಿ ಮಾಡುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ. ಮಳೆ ಬಂದಿದ್ದರಿಂದ ಕಸ ಜಾಸ್ತಿಯಾಗಿದ್ದು, ತ್ವರಿತವಾಗಿ ವಿಲೇವಾರಿ ಮಾಡಲಾಗುವುದು.

–ಸಿ.ಎಸ್.ರೇಖಾ, ಸಹಾಯಕ ಕಾರ್ಯದರ್ಶಿ, ಎಪಿಎಂಸಿ

ಕೊಳಚೆ ನೀರು ನಿಂತಿಲ್ಲ: ರೈಲ್ವೆ ನಿಲ್ದಾಣದ ಕಡೆಯಿಂದ ಹರಿದು ಬರುವ ಕೊಳಚೆ ನೀರಿನ ಮೋರಿ ಮಾರುಕಟ್ಟೆಯೊಳಗೆ ಉಕ್ಕಿ ಹರಿದು ಮಳಿಗೆಗಳಿಗೆ ನುಗ್ಗುತ್ತಿದೆ. ಕಳೆದ ಎರಡ್ಮೂರು ತಿಂಗಳಿಂದಲೂ ಕೊಳಚೆ ನೀರು ಹರಿಯುತ್ತಿದ್ದು, ಬೆಳಗಿನ ಜಾವ ಕೆರೆಯಂತೆ ಕೊಳಚೆ ನೀರು ತುಂಬಿರುತ್ತದೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಾಕಷ್ಟು ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ವ್ಯಾಪಾರಕ್ಕೆ ತೀವ್ರ ತೊಂದರೆಯಾಗುತ್ತಿದೆ ಎಂದು ಅಳಲು ತೋಡಿಕೊಂಡರು.

ಮೋದಿಯವರೇ ಜಾತಿಗಣತಿಗೆ ನಿರ್ಧರಿಸಿರುವುದು ಅನುಮಾನ



ಬಿ.ಸುಬ್ರಹ್ಮಣ್ಯ

ಮೈಸೂರು, ಮೇ 6– ಈ ಹಿಂದೆ ಜಾತಿ ಜನಗಣತಿ ನಡೆಸಬೇಕು ಎಂಬ ಬೇಡಿಕೆಯು ನಗರ ನಕ್ಸಲ್ ಯೋಚನೆಯಾಗಿದೆ ಎಂದಿದ್ದ ಪ್ರಧಾನಿ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರವೇ ಈಗ ಜಾತಿಗಣತಿಗೆ ನಿರ್ಧಾರ ಮಾಡಿರುವುದು ಭಾರಿ ಅನುಮಾನ ಹುಟ್ಟುಹಾಕಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಟೀಕಿಸಿದ್ದಾರೆ.

ಜಾತಿಜನಗಣತಿ ವರದಿಯನ್ನು ಕ್ಯಾಬಿನೆಟ್‌ನಲ್ಲಿ ಮಂಡಿಸಲು ಸಿದ್ದರಾಮಯ್ಯ ಅವರು ಮೇ 2ರಂದು ದಿನಾಂಕ ನಿಗದಿಪಡಿಸಿದ್ದರು. ಇದೀಗ ಮೇ 9ಕ್ಕೆ ಮುಂದೂಡಿದ್ದಾರೆ. ಈ ನಡುವೆ ಕೇಂದ್ರ ಸರ್ಕಾರ ಜಾತಿಗಣತಿ ನಡೆಸುವ ನಿರ್ಧಾರವನ್ನು ತೆಗೆದುಕೊಂಡಿದೆ. ಅದಕ್ಕೆ ನಮ್ಮ ಸ್ವಾಗತವಿದೆ. 2015ರಲ್ಲೇ ಸಾಮಾಜಿಕ, ಆರ್ಥಿಕ ಸಮೀಕ್ಷೆಗೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರ 165 ಕೋಟಿ ರೂ. ಮೀಸಲಿಟ್ಟಿತ್ತು. ಆದರೆ ಕೇಂದ್ರ ಸರ್ಕಾರ 575 ಕೋಟಿ ರೂ. ಮೀಸಲಿಟ್ಟಿದೆ. ಈ ಹಣ ಒಂದು ರಾಜ್ಯಕ್ಕೂ ಸಾಲುವುದಿಲ್ಲ. 2025–26ನೇ ಸಾಲಿನ ಬಜೆಟ್‌ನಲ್ಲೂ ಹಣ ಮೀಸಲಿಟ್ಟಿಲ್ಲ. ಇದೆಲ್ಲವನ್ನ ನೋಡಿದರೆ, ಬಿಹಾರ ಚುನಾವಣೆಯ ನಾಟಕ ಅನ್ನಿಸುತ್ತದೆ ಎಂದು ಸುಬ್ರಹ್ಮಣ್ಯ ಅನುಮಾನಿಸಿದ್ದಾರೆ.

2024ರ ಚುನಾವಣೆ ಪ್ರಣಾಳಿಕೆಯಲ್ಲೇ ಜಾತಿ ಜನಗಣತಿ ಪ್ರಸ್ತಾಪವನ್ನು ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಸೇರಿಸಿತ್ತು. ಇದನ್ನು ಬಲವಾಗಿ ವಿರೋಧಿಸಿದ್ದ ಮೋದಿ, ನಗರ ನಕ್ಸಲ್ ಯೋಚನೆ ಎಂದು ಕರೆದಿದ್ದರು. ಅಲ್ಲದೇ ಜೆಡಿಎಸ್ ನಾಯಕರೂ ಬಿಜೆಪಿ ನಾಯಕರಿಗೆ ಬೆಂಬಲ ನೀಡಿದ್ದರು. ಜಾತಿ ಹೆಸರಿನಲ್ಲಿ ದೇಶ ಮತ್ತು ರಾಜ್ಯವನ್ನು ಒಡೆಯುವ ಹುನ್ನಾರ ಎಂದು ಬೊಬ್ಬೆ ಹೊಡೆದುಕೊಳ್ಳುತ್ತಿದ್ದರು. ಈಗ ಮೋದಿ ನೇತೃತ್ವದ ಸಂಪುಟವೇ ಜಾತಿ ಜನಗಣತಿಗೆ ಅನುಮೋದನೆ ನೀಡಿದ್ದು, ಇದಕ್ಕೆ ಜೆಡಿಎಸ್ ಕೂಡ ಬೆಂಬಲ ವ್ಯಕ್ತಪಡಿಸಿರುವುದು ಇಬ್ಬಗೆಯ ನೀತಿಯನ್ನು ತೋರಿಸಿದೆ.

ಪಹಲ್ಗಾಮ್‌ನಲ್ಲಿ ನರಮೇಧ ನಡೆಸಿದ ಉಗ್ರರಿಗೆ ಇನ್ನೂ ತಕ್ಕ ಶಿಕ್ಷೆಯಾಗಿಲ್ಲ. ಇಡೀ ದೇಶ ಶೋಕಾಚರಣೆಯಲ್ಲಿ ಮುಳುಗಿದೆ. ಅತ್ತ ಶತ್ರು ರಾಷ್ಟ್ರಗಳು ಯುದ್ಧ ಸಾರಲು ಸಜ್ಜಾಗಿವೆ. ಮೇಲಿಂದ ಮೇಲೆ ಸಭೆ ನಡೆಸುತ್ತಿರುವ ಮೋದಿ ಸರ್ಕಾರ ಈಗ ಜಾತಿ ಜನಗಣತಿ ಪ್ರಸ್ತಾಪವನ್ನು ಮುಂದಿಟ್ಟಿರುವುದು ಪ್ರಕರಣದ ದಿಕ್ಕುತಪ್ಪಿಸಲು ಮಾಡಿರುವ ಪ್ರಯತ್ನದಂತೆ ಕಾಣುತ್ತಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಸಂಸ್ಥಾಪನಾ ದಿನಾಚರಣೆ



ಮೈಸೂರಿನ ಗಾಂಧಿಚೌಕದ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನಲ್ಲಿ 119ನೇ ವರ್ಷದ ಬ್ಯಾಂಕಿನ ಸಂಸ್ಥಾಪನಾ ದಿನ ಆಚರಿಸಲಾಯಿತು. ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಎನ್.ಯೋಗಾನಂದ್, ಜಿ.ನಿರಂಜನ್, ಆರ್.ಸೋಮಣ್ಣ, ಪಡುವಾರಹಳ್ಳಿ ಎಂ.ರಾಮಕೃಷ್ಣ, ಸಿ.ಚಂದ್ರಶೇಖರ್, ಪಿ.ರಾಜೇಶ್ವರಿ, ಪ್ರಮೀಳಾ, ಕಾರ್ಯದರ್ಶಿ ಹರ್ಷಿತ್‌ಗೌಡ, ಸಹಾಯಕ ಕಾರ್ಯದರ್ಶಿ ಗಾಯಿತ್ರಿ ಹಾಗೂ ಬ್ಯಾಂಕಿನ ಸಿಬ್ಬಂದಿ ಉಪಸ್ಥಿತರಿದ್ದರು.

ಕಣ್ಣಿನ ಉಚಿತ ತಪಾಸಣಾ ಶಿಬಿರ



ಮೈಸೂರು, ಮೇ.6(ಎಂಟಿವೈ)– ಮೈಸೂರಿನ ಪುರಭವನದಲ್ಲಿ ಮೇ.11ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 3ರವರೆಗೆ ಕಣ್ಣಿನ ಉಚಿತ ತಪಾಸಣೆ, ಉಚಿತ ಕನ್ನಡಕ ವಿತರಣೆ ಮತ್ತು ಕರ್ನಾಟಕ ಫ್ಯಾಶನ್ ಶೋ 2025 ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ ಖಜಾಂಚಿ ತೇಜಸ್ ಪೃಥ್ವಿರಾಜ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಸಾಂಸ್ಕೃತಿಕ ಹಾಗು ಸಾಹಿತ್ಯ ಪರಿಷತ್ತು ಮತ್ತು ಎ.ಎಸ್.ಜಿ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಕಣ್ಣಿನ ಉಚಿತ ತಪಾಸಣೆ ಹಾಗೂ ಉಚಿತ ಕನ್ನಡಕ ವಿತರಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 11ರಿಂದ 3ರವರೆಗೆ ಕಣ್ಣಿನ ತಪಾಸಣೆ ನಡೆಯಲಿದೆ. ಮಧ್ಯಾಹ್ನ 3ಕ್ಕೆ ಫ್ಯಾಶನ್ ಶೋ ಕಾರ್ಯಕ್ರಮ ನೆರವೇರಲಿದೆ. ಫ್ಯಾಶನ್ ಶೋನಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ಪ್ರಶಸ್ತಿ ಪತ್ರ ಮತ್ತು ಫಲಕ ವಿತರಿಸಲಾಗುತ್ತದೆ ಎಂದರು. ಗೋಷ್ಠಿಯಲ್ಲಿ ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ತಿನ ಮಹಿಳಾ ಜಿಲ್ಲಾಧ್ಯಕ್ಷೆ ಬಿ.ಅಮೀನಾ ಬೇಗಂ, ಕಾರ್ಯದರ್ಶಿ ಹೇಮಲತಾ, ಎಎಸ್‌ಜಿ ಕಣ್ಣಿನ ಆಸ್ಪತ್ರೆಯ ಮಮತಾ, ರಘುವರ್ ಇದ್ದರು.

ಕನ್ನಡಿಗರ ಮೇಲೆ ದಬ್ಬಾಳಿಕೆ ತಡೆಗೆ ಕಾನೂನು

ಬೆಂಗಳೂರು: ಕನ್ನಡಿಗರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಬಾಲಿವುಡ್ ಗಾಯಕ ಸೋನು ನಿಗಮ್ ವಿರುದ್ಧ ಸರ್ಕಾರ ಕ್ರಮಕೈಗೊಳ್ಳಲಿದೆ. ಕನ್ನಡ, ಕನ್ನಡಿಗರ ಮೇಲೆ ನಡೆಯುವ ದಬ್ಬಾಳಿಕೆ ವಿರುದ್ಧ ಕಾನೂನು ತರುವ ಕುರಿತು ಚರ್ಚೆ ಮಾಡುತ್ತಿದ್ದೇವೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕರ್ನಾಟಕಕ್ಕೆ ಬಂದು ಕನ್ನಡ ಹಾಡು ಹಾಡಿ ಹಣ ಮಾಡುವಂಥವರು ಹಗುರವಾಗಿ ಮಾತನಾಡುವುದನ್ನು ಸಹಿಸುವುದಿಲ್ಲ. ಸೋನು ನಿಗಮ್ ವಿರುದ್ಧ ಈಗಾಗಲೇ ಎಫ್‌ಐಆರ್ ಆಗಿದೆ. ಅವರನ್ನು ಬಂಧಿಸುವ ಕುರಿತು ಮುಖ್ಯಮಂತ್ರಿ, ಗೃಹ ಸಚಿವರ ಜೊತೆ ಚರ್ಚೆ ಮಾಡುತ್ತೇನೆ ಎಂದರು.

ಸಮೀಕ್ಷೆಯಿಂದ ಗೊತ್ತಾಗಲಿದೆ: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ಸಮೀಕ್ಷೆ ನಡೆಯುತ್ತಿರುವ ಕುರಿತು ಪ್ರತಿಕ್ರಿಯಿಸಿದ ತಂಗಡಗಿ, ಒಳ ಮೀಸಲಾತಿ ಸಮೀಕ್ಷೆಯ ವರದಿ ಬಂದ ನಂತರ ಪರಿಶಿಷ್ಟ ಜಾತಿಯ ಉಪ ಜಾತಿಗಳ ಜನಸಂಖ್ಯೆ, ಸ್ಥಿತಿಗತಿಯ ವಾಸ್ತವ ಗೊತ್ತಾಗಲಿದೆ ಎಂದರು.


ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರ
ಮೋದಿಗೆ ಸಂಪೂರ್ಣ ಬೆಂಬಲವಿದೆ

● ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಘೋಷಣೆ ● ಇದೇ ಮೊದಲು ಮೋದಿ ಸೇನೆಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿರುವುದು ಶ್ಲಾಘನೀಯ

ಬೆಂಗಳೂರು, ಮೇ 6(ಕೆಎಂಶಿ)– ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಸಂಬಂಧಿಸಿದಂತೆ ಪ್ರತೀಕಾರವಾಗಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೈಗೊಳ್ಳುತ್ತಿರುವ ಎಲ್ಲಾ ಕ್ರಮಗಳನ್ನು ಸಂಪೂರ್ಣವಾಗಿ ಬೆಂಬಲಿಸುವುದಾಗಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಮಾಜಿ ಪ್ರಧಾನಿಗಳಾದ ಹೆಚ್.ಡಿ. ದೇವೇಗೌಡರು ಘೋಷಿಸಿದರು.

ನವದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಹಲ್ಗಾಮ್ ಘಟನೆ ಅಮಾನವೀಯ. ಮೊದಲ ಬಾರಿಗೆ ಭಯೋತ್ಪಾದಕರು ಪ್ರವಾಸಿಗರ ಮೇಲೆ ದಾಳಿ ಮಾಡಿದ್ದಾರೆ. ಇದು ಅತ್ಯಂತ ಹೇಯ. ಈ ಕೆಲಸ ಮಾಡಿದವರಿಗೆ ತಕ್ಕ ಶಾಸ್ತಿ ಆಗಲೇಬೇಕು. ಈ ಹಿನ್ನೆಲೆಯಲ್ಲಿ ಪ್ರಧಾನಿಗಳು ಕೈಗೊಳ್ಳುವ ನಿರ್ಧಾರಕ್ಕೆ ಜೆಡಿಎಸ್ ಬದ್ಧವಾಗಿರುತ್ತದೆ ಎಂದು ಸ್ಪಷ್ಟಪಡಿಸಿದರು.

ರಕ್ಷಣಾ ಪಡೆಗಳಿಗೆ ಮೋದಿ ಅವರು ಮುಕ್ತ ಸ್ವಾತಂತ್ರ್ಯ ನೀಡಿದ್ದಾರೆ. ಮೊದಲ ಬಾರಿಗೆ ದೇಶದ ಪ್ರಧಾನಿ ಮೋದಿ ಅವರು ಇಂತಹ ದಿಟ್ಟ ನಿರ್ಧಾರ ಮಾಡಿದ್ದಾರೆ.



ಇತಿಹಾಸ'ದಲ್ಲಿ ಈ ರೀತಿ ಎಂದೂ ನಿ ದ, ರ್ಾ ರ' ಆಗಿರಲಿಲ್ಲ ಎಂದ ಮಾಜಿ ಪ್ರಧಾನಿಗಳು, ಗೃಹ, ರಕ್ಷಣೆ ಹಾಗೂ ವಿದೇಶಾಂಗ ಖಾತೆಗಳನ್ನು ನಿಭಾಯಿಸುತ್ತಿರುವ ಸಚಿವರುಗಳು ಅತ್ಯಂತ ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ದೇವೇಗೌಡರು ಮೆಚ್ಚುಗೆ ವ್ಯಕ್ತಪಡಿಸಿದರು.

ಇಡೀ ದೇಶ ಪ್ರಧಾನಿ ಮೋದಿಯವರ ಜೊತೆ ನಿಂತಿದೆ. ಎಲ್ಲಾ ರಾಜಕೀಯ ಪಕ್ಷಗಳು ಮೋದಿಯವರ ನಿರ್ಧಾರವನ್ನು ಬೆಂಬಲಿಸಿವೆ. ಭಯೋತ್ಪಾದಕರಿಗೆ ತಕ್ಕ ಪಾಠ ಕಲಿಸಬೇಕಾಗಿದೆ. ಪಾಕಿಸ್ತಾನ ಪ್ರೇರಿತ ಉಗ್ರರನ್ನು ಸದೆಬಡಿಯುವವರೆಗೆ ವಿರಮಿಸುವುದಿಲ್ಲ ಎಂದು ಮೋದಿ ಹೇಳಿದ್ದಾರೆ. ನಾನು, ನಮ್ಮ ಪಕ್ಷ ಇಡೀ ದೇಶ ಪ್ರಧಾನಿ ಮೋದಿ ಜೊತೆಗಿರುತ್ತೇವೆ ಎಂದು ದೇವೇಗೌಡರು ಹೇಳಿದರು.

1971ರ ಯುದ್ಧ ಕಾಲಕ್ಕೂ ಈಗಿನ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಹೋಲಿಕೆ ಮಾಡಲು ಸಾಧ್ಯವಿಲ್ಲ. ಭಾರತ ಅಗಾಧವಾಗಿ ಬೆಳೆದಿದೆ. ಕಳೆದ ಹತ್ತು ವರ್ಷಗಳಲ್ಲಿ ದೇಶವು ಸಾಕಷ್ಟು ಅಭಿವೃದ್ಧಿ, ಬದಲಾವಣೆಯನ್ನು ಕಂಡಿದೆ ಎಂದ ಅವರು; ಇಲ್ಲಿ ಹಿಂದೂ ಮುಸ್ಲಿಂ ಎನ್ನುವ ಪ್ರಶ್ನೆಯಲ್ಲ. ಧರ್ಮ, ಜಾತಿ ಪ್ರಶ್ನೆ ಉದ್ಭವವಾಗುವುದಿಲ್ಲ. ದೇಶದ ಭದ್ರತೆ ಮುಖ್ಯ ಯುದ್ಧ ಮಾಡಬೇಕೋ ಬೇಡವೋ ಎನ್ನುವ ನಿರ್ಧಾರವನ್ನು ಸೇನೆಗೆ ಬಿಡಲಾಗಿದೆ. ಮೂರು ಸೇನೆಗಳ ಮುಖ್ಯಸ್ಥರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ ಎಂದು ಮಾಜಿ ಪ್ರಧಾನಿಗಳು ಹೇಳಿದರು.

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆರೋಗ್ಯ ಕುರಿತು ನಿಖಿಲ್ ಸ್ಪಷ್ಟನೆ

ಬೆಂಗಳೂರು: ಕೇಂದ್ರ ಸಚಿವ ಮತ್ತು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಆರೋಗ್ಯ ಸಮಸ್ಯೆ ಕುರಿತು ವದಂತಿಗಳು ಹರಡಿದ್ದು, ಈ ಬಗ್ಗೆ ಕುಮಾರಸ್ವಾಮಿಯವರ ಪುತ್ರ ಹಾಗೂ ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿಯವರು ಸ್ಪಷ್ಟನೆ ನೀಡಿದ್ದಾರೆ.

ಮಂಡ್ಯ ಜಿಲ್ಲೆಯ ಬೆಟ್ಟಹಳ್ಳಿ ಗ್ರಾಮದಲ್ಲಿ ಸೋಮೇಶ್ವರಸ್ವಾಮಿ ದೇವಸ್ಥಾನದ ಪುನರ್ ಪ್ರತಿಷ್ಠಾಪನೆ ಮತ್ತು ಶಿಖರ ಕಳಸ ಪ್ರತಿಷ್ಠಾಪನಾ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕುಮಾರಣ್ಣ ಅರೋಗ್ಯ ಸರಿ ಇಲ್ಲ ಅಂತ ರಾಜ್ಯದಲ್ಲೆಡೆ ಚರ್ಚೆಗಳು ಶುರುವಾಗಿದೆ, ಸೋಮೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ನಿಂತು ಒಂದು ಮಾತನ್ನು ತಿಳಿಸುತ್ತೇನೆ. ಅವರ ತಂದೆ ತಾಯಿ ಆಶೀರ್ವಾದ, ಭಗವಂತನ ಕೃಪೆ, ಜೊತೆಯಲ್ಲಿ ನಿಮ್ಮೆಲ್ಲರ ಪ್ರೀತಿಯ ಹಾರೈಕೆಯಿಂದ ಕುಮಾರಣ್ಣ ಅವರು ಆರೋಗ್ಯವಾಗಿದ್ದಾರೆ. ಯಾವುದೇ ಆರೋಗ್ಯದ ಸಮಸ್ಯೆ ಇಲ್ಲ, ಯಾರು ಕೂಡ ಆತಂಕ ಪಡುವ ಅಗತ್ಯವಿಲ್ಲ ಎಂದು ಹೇಳಿದರು.

ಇಂದು ನೂತನ ಪದಾಧಿಕಾರಿಗಳಿಗೆ ಅಭಿನಂದನೆ

ಮೈಸೂರು, ಮೇ 6– ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಪದಾಧಿಕಾರಿಗಳಿಗೆ ಅಭಿನಂದನಾ ಸಮಾರಂಭ ಹಾಗೂ ನೂತನ ಸದಸ್ಯರಿಗೆ ಗುರುತಿನ ಚೀಟಿ ವಿತರಣಾ ಕಾರ್ಯಕ್ರಮವನ್ನು ಕೃಷ್ಣಮೂರ್ತಿಪುರಂನ ಶ್ರೀರಾಮಮಂದಿರದಲ್ಲಿ ಮೇ 7ರಂದು ಸಂಜೆ 5.30ಕ್ಕೆ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್.ಶ್ರೀವತ್ಸ, ಮೇಲುಕೋಟೆ ವೆಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಯೋಗ ನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕೆ.ಆರ್.ಮೋಹನ್‌ಕುಮಾರ್, ಮೈಸೂರು ನಗರ–ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಆದರ್ಶ ಸೇವಾ ಸಂಘದ ಅಧ್ಯಕ್ಷ ಜಿ.ಆರ್.ನಾಗರಾಜ್, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಸತ್ಯನಾರಾಯಣ್, ವಿಪ್ರ ಪ್ರೊಫೆಷನಲ್ ಅಧ್ಯಕ್ಷ ಶ್ರೀಹರಿ, ಹೋಟೆಲ್ ಮಾಲೀಕರ ಸಂಘದ ರಾಜ್ಯ ಉಪಾಧ್ಯಕ್ಷ ರವಿಶಾಸ್ತ್ರಿ, ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ ಆಗಮಿಸುವರು.

ದೇಶ – ವಿದೇಶ

ವಿದೇಶಿ ನಿರ್ಮಾಣದ ಚಿತ್ರಗಳ ಮೇಲೆ ಶೇ.100ರಷ್ಟು ತೆರಿಗೆ ವಿಧಿಸಲು ಚಿಂತನೆ: ಟ್ರಂಪ್



ನ್ಯೂಯಾರ್ಕ್: ದೇಶದ ಹೊರಗೆ ನಿರ್ಮಾಣವಾಗುವ ಎಲ್ಲ ಚಲನಚಿತ್ರಗಳ ಮೇಲೆ ಹೊಸದಾಗಿ ಶೇ 100ರಷ್ಟು ಹೊಸ ಆಮದು ತೆರಿಗೆ ವಿಧಿಸಲು ಅಮೆರಿಕ ಚಿಂತನೆ ನಡೆಸಿದೆ. ವಿದೇಶಿ ನಿರ್ಮಾಣದ ಚಿತ್ರಗಳ ಮೇಲೆ ಆಮದು ತೆರಿಗೆ ವಿಧಿಸುವ ಪ್ರಕ್ರಿಯೆ ಆರಂಭಿಸಬೇಕು ಎಂದು ವಾಣಿಜ್ಯ ಇಲಾಖೆಗೆ ಸೂಚಿಸಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. 'ಅಮೆರಿಕದ ಚಿತ್ರ ನಿರ್ಮಾಣದ ಸಾಮರ್ಥ್ಯವನ್ನು ಇತರೆ ರಾಷ್ಟ್ರಗಳು ಕಸಿಯುತ್ತಿವೆ' ಎಂದೂ ಆರೋಪಿಸಿದ್ದಾರೆ. ರಾಷ್ಟ್ರೀಯ ಭದ್ರತೆ ಕಾರಣ ಉಲ್ಲೇಖಿಸಿರುವ ಟ್ರಂಪ್ ಹೊಸದಾಗಿ ತೆರಿಗೆ ವಿಧಿಸುವ ಚಿಂತನೆ ಯನ್ನು ಸಮರ್ಥಿಸಿಕೊಂಡಿದ್ದಾರೆ. ಕೆಲವು ರಾಷ್ಟ್ರಗಳಲ್ಲಿ ಹೀಗೇ ಆಮದು ಸುಂಕ ವಿಧಿಸಲಾಗುತ್ತಿದೆ ಎಂದು ಹೇಳಿದ್ದಾರೆ. 'ಉದ್ದೇಶಿತ ಆಮದು ತೆರಿಗೆ ವಿಧಿಸುವ ಕುರಿತು ಚಿತ್ರೋದ್ಯಮದವರ ಜೊತೆಗೂ ಚರ್ಚೆ ನಡೆಸುತ್ತೇನೆ. ಆದರೆ, ಉದ್ದೇಶಿತ ತೆರಿಗೆಯು ಚಿತ್ರೋದ್ಯಮ, ವಿದೇಶಗಳಲ್ಲಿ ಚಿತ್ರ ನಿರ್ಮಾಣದ ಮೇಲೆ ಬೀರುವ ಪರಿಣಾಮಗಳೇನು' ಎಂಬುದು ಅಸ್ಪಷ್ಟವಾಗಿದೆ.

ಭದ್ರತಾ ಪಡೆಗಳ ಕಾರ್ಯಾಚರಣೆ: ಶಸ್ತ್ರಾಸ್ತ್ರ, ಸ್ಫೋಟಕ ಜಪ್ತಿ



ನವದೆಹಲಿ: ಕಾಶ್ಮೀರದ ಪಹಲ್ಗಾಮ್ ಭಯೋತ್ಪಾದಕ ದಾಳಿಯ ಬೆನ್ನಲ್ಲೇ ಭಾರತ ಮತ್ತು ಪಾಕಿಸ್ತಾನದ ನಡುವಿನ ಉದ್ವಿಗ್ನತೆ ಹೆಚ್ಚಿರುವ ನಡುವೆಯೇ ಪಂಜಾಬ್ ಪೊಲೀಸರು ಐಎಸ್‌ಐ ಬೆಂಬಲಿತ ಗಡಿಯಾಚೆಗಿನ ಭಯೋತ್ಪಾದನೆ ವಿರುದ್ಧ ಕಾರ್ಯಾಚರಣೆ ನಡೆಸಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರ, ಸ್ಫೋಟಕಗಳನ್ನು ಜಪ್ತಿ ಮಾಡಿದ್ದಾರೆ. ಎಸ್‌ಬಿಎಸ್ ನಗರದ ಟಿಬ್ಬಾ ನಂಗಲ್–ಕುಲಾರ್ ರಸ್ತೆಯ ಬಳಿಯ ಅರಣ್ಯ ಪ್ರದೇಶದಲ್ಲಿ ಪಂಜಾಬ್ ಪೊಲೀಸರು ಮತ್ತು ಕೇಂದ್ರ ತನಿಖಾ ದಳದ ಸಿಬ್ಬಂದಿ ಜಂಟಿಯಾಗಿ ಕಾರ್ಯಾಚರಣೆ ನಡೆಸಿದ್ದು, ಎರಡು ರಾಕೆಟ್ ಚಾಲಿತ ಗ್ರೆನೇಡ್ (ಆರ್‌ಪಿಜಿ), ಎರಡು ಸುಧಾರಿತ ಸ್ಫೋಟಕ ಸಾಧನಗಳು (ಐಇಡಿ), ಐದು ಪಿ–86 ಹ್ಯಾಂಡ್ ಗ್ರೆನೇಡ್‌ಗಳು, ಒಂದು ಮೊಬೈಲ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಸೇರಿದಂತೆ ಭಯೋತ್ಪಾದಕ ಸಂಘಟನೆಗಳು ಪಂಜಾಬ್‌ನಲ್ಲಿ ಸ್ಲೀಪರ್ ಸೆಲ್‌ಗಳನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಿಸುತ್ತಿವೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿರುವುದಾಗಿ ಪಂಜಾಬ್ ಡಿಜಿಪಿ ಹೇಳಿದ್ದಾರೆ.

ಪಾಕಿಸ್ತಾನ: ಪ್ರಕ್ಷುಬ್ಧ ಬಲೂಚಿಸ್ತಾನ ಪ್ರಾಂತ್ಯದಲ್ಲಿ ದುರಂತ, 19 ಮಂದಿ ಸಾವು



ಇಸ್ಲಾಮಾಬಾದ್: ಇರಾನ್ ಹಾಗೂ ಅಫ್ಘಾನಿಸ್ತಾನದ ಗಡಿಯಲ್ಲಿರುವ ನೈಋತ್ಯ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಉಗ್ರಗಾಮಿಗಳು ಹಾಗೂ ಪಾಕ್ ಸೇನೆ ನಡುವಿನ ಗುಂಡಿನ ಕಾಳಗ ಪ್ರತಿದಿನ ನಡೆಯುತ್ತಿದ್ದು, ದೀರ್ಘಕಾಲದಿಂದ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿದೆ. ಇತ್ತೀಚೆಗೆ ನಡೆದ ಗುಂಡಿನ ಕಾಳಗದಲ್ಲಿ 10 ಮಂದಿ ಸೈನಿಕರು ಮೃತಪಟ್ಟಿದ್ದರು.

ಈ ಮಧ್ಯೆ ನೈಋತ್ಯ ಪಾಕಿಸ್ತಾನದಲ್ಲಿ ತೈಲ ಟ್ಯಾಂಕರ್ ಸ್ಫೋಟದಿಂದ ಮೃತಪಟ್ಟವರ ಸಂಖ್ಯೆ 19 ಕ್ಕೆ ಏರಿದೆ ಎಂದು ಘಟನೆಯ ವಾರದ ನಂತರ ಅಧಿಕಾರಿಗಳು ತಿಳಿಸಿದ್ದಾರೆ. ಮಾರುಕಟ್ಟೆಯೊಂದರ ಬಳಿ ತೈಲ ಟ್ಯಾಂಕರ್ ಸ್ಫೋಟಗೊಂಡ ನಂತರ ಬೆಂಕಿಯನ್ನು ನಂದಿಸಲು ಭಾರಿ ಜನಸ್ತೋಮ ನೆರೆದಿತ್ತು. ಈ ವೇಳೆ 40 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ, ಅವರಲ್ಲಿ ಅನೇಕರನ್ನು ಚಿಕಿತ್ಸೆಗಾಗಿ ಮೆಗಾ ಸಿಟಿ ಕರಾಚಿಗೆ ಸಾಗಿಸಲಾಯಿತು.

ಸಾವಿನ ಸಂಖ್ಯೆ 19ಕ್ಕೆ ಏರಿದೆ ಎಂದು ಸ್ಥಳೀಯ ಪೊಲೀಸ್ ಅಧಿಕಾರಿ ಮುಹಮ್ಮದ್ ಹಸನ್ ಮೆಂಗಲ್ ಸುದ್ದಿಸಂಸ್ಥೆ AFPUಗೆ ತಿಳಿಸಿದ್ದಾರೆ. ಏ.28ರಂದು ಬಲೂಚಿಸ್ತಾನ್ ಪ್ರಾಂತ್ಯದ ನೋಶ್ಕಿ ಜಿಲ್ಲೆಯಲ್ಲಿ ಈ ಘಟನೆ ನಡೆದಿತ್ತು. ನಿರ್ಲಕ್ಷ್ಯದ ಸಾಧ್ಯತೆ ಬಗ್ಗೆ ತನಿಖೆ ನಡೆಸುತ್ತಿದ್ದಾರೆ.

ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ಮಹಿಳಾ ಕೇಡರ್ ಹತ್ಯೆ



ರಾಯ್‌ಪುರ: ತೆಲಂಗಾಣಕ್ಕೆ ಹೊಂದಿಕೊಂಡಿರುವ ಬಿಜಾಪುರದ ನೈಋತ್ಯ ಅರಣ್ಯ ಗಡಿ ಪ್ರದೇಶದಲ್ಲಿ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಸಮವಸ್ತ್ರದಲ್ಲಿದ್ದ ಮಹಿಳಾ ಮಾವೋವಾದಿಯೊಬ್ಬರು ಹತರಾಗಿದ್ದಾರೆ ಎಂದು ಬಸ್ತಾರ್ ಪೊಲೀಸರು ಮಂಗಳವಾರ ತಿಳಿಸಿದ್ದಾರೆ. ಏಪ್ರಿಲ್ 24ರಂದು ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಮಹಿಳಾ ನಕ್ಸಲರನ್ನು ಹತ್ಯೆ ಮಾಡಲಾಗಿತ್ತು. ಕಳೆದ 12 ದಿನಗಳಲ್ಲಿ 10,000ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ಒಳಗೊಂಡ "ನಿರ್ಣಾಯಕ" ಅಂತರ–ರಾಜ್ಯ ಕಾರ್ಯಾಚರಣೆಯಲ್ಲಿ ಇದುವರೆಗೆ ನಿಷೇಧಿತ ಸಿಪಿಐ (ಮಾವೋವಾದಿಗಳ ಮಹಿಳಾ ಕೇಡರ್‌ಗಳು)ನ ನಾಲ್ವರ ಶವಗಳು, ಹಲವಾರು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪಹಲ್ಗಾಮ್ ದಾಳಿ ಖಂಡಿಸಿದ ವಿಶ್ವಸಂಸ್ಥೆ ಮುಖ್ಯಸ್ಥ; ಯುದ್ಧ ಮಾಡದಿರಲು ಒತ್ತಾಯ



ಜಿನಿವಾ: ಭಾರತ ಹಾಗೂ ಪಾಕಿಸ್ತಾನದ ನಡುವಿನ ಉದ್ವಿಗ್ನತೆ ಹೆಚ್ಚಾಗಿದೆ. ಯುದ್ಧದ ವಾತಾವರಣ ನಿರ್ಮಾಣವಾಗಿದ್ದು, ವಿಶ್ವಸಂಸ್ಥೆ ಮಧ್ಯಸ್ಥಿಕೆ ವಹಿಸಿದೆ. ವಿಶ್ವಸಂಸ್ಥೆ ಮುಖ್ಯಸ್ಥರು ಭಾರತ ಮತ್ತು ಪಾಕಿಸ್ತಾನಗಳು ಸಂಘರ್ಷದ ಅಂಚಿನಿಂದ ಹಿಂದೆ ಸರಿಯುವಂತೆ ಕೇಳಿಕೊಂಡಿದ್ದಾರೆ. ಏ.22ರಂದು ಪಹಲ್ಗಾಮ್ ಭಯೋತ್ಪಾದಕ ದಾಳಿಯ ಬಳಿಕ ಭಾರತ ಪಾಕಿಸ್ತಾನದ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಹೇಳಿದೆ. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಯುಎನ್‌ಎಸ್‌ಸಿ ವೇದಿಕೆಯಿಂದ ಪತ್ರಿಕಾಗೋಷ್ಠಿಯಲ್ಲಿ ಭಯೋತ್ಪಾದಕ ದಾಳಿಯನ್ನು ಖಂಡಿಸಿದ್ದಾರೆ.

ಪಹಲ್ಗಾಮ್‌ನಲ್ಲಿ ನಡೆದ ಭೀಕರ ಭಯೋತ್ಪಾದಕ ದಾಳಿ ನಂತರ ಭಾರತದ ಭಾವನೆ ನಮಗೆ ಅರ್ಥವಾಗುತ್ತದೆ. ಇಂತಹ ವಿಧ್ವಂಸಕ ಕೃತ್ಯ ಎಸಗಿರುವುದು ಅಪರಾಧ. ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡುವಲ್ಲಿ ಸಂಪೂರ್ಣ ಬೆಂಬಲವಿದೆ ಎಂದು ಹೇಳಿದ್ದಾರೆ. ಎಲ್ಲದಕ್ಕೂ ಯುದ್ಧವೇ ಪರಿಹಾರವಲ್ಲ ಎಂದು ಹೇಳಿದ ಗುಟೆರೆಸ್, ಪಾಕಿಸ್ತಾನಕ್ಕೆ ಕಠಿಣವಾಗಿ ಪ್ರಶ್ನೆ ಮಾಡಿದ ಅವರು ಇಂತಹ ಕೃತ್ಯಗಳನ್ನು ಏಕೆ ಬೆಂಬಲಿಸುತ್ತೀರಿ ಎಂದು ಹೇಳಿದ್ದಾರೆ. ದಾಳಿಯಲ್ಲಿ ಎಲ್‌ಇಟಿ ಭಾಗಿಯಾಗಿದೆಯೇ? ಎಂದು ಪ್ರಶ್ನಿಸಿದ್ದಾರೆ.

ಪಾಕಿಸ್ತಾನಿ, ಬಾಂಗ್ಲಾದೇಶಿಗರನ್ನು ಹೊರಗಟ್ಟಲು ಆಗ್ರಹ



ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಸುಜಾ ಕುಶಾಲಪ್ಪ, ನಾಪಂಡ ರವಿ ಕಾಳಪ್ಪ ಮತ್ತಿತರರು ಉಪಸ್ಥಿತರಿದ್ದರು

ಮಡಿಕೇರಿ, ಮೇ 6–ಜಿಲ್ಲೆಯಲ್ಲಿ ನಕಲಿ ದಾಖಲೆಗಳೊಂದಿಗೆ ಇರುವ ಪಾಕಿಸ್ತಾನಿ ಮತ್ತು ಬಾಂಗ್ಲಾದೇಶಿಯರನ್ನು ಗುರುತಿಸಿ ಹೊರಗಟ್ಟುವಂತೆ ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಆಗ್ರಹಿಸಿದ್ದಾರೆ.

ಪಹಲ್ಗಾಮ್ ಭಯೋತ್ಪಾದಕ ದಾಳಿಯ ಹಿನ್ನೆಲೆಯಲ್ಲಿ ಈಗಾಗಲೆ ಭಾರತ ಬಿಟ್ಟು ತೆರಳುವಂತೆ ಕೇಂದ್ರ ಸರ್ಕಾರ ಸ್ಪಷ್ಟ ಸೂಚನೆ ನೀಡಿದೆ. ಅದರಂತೆಯೆ ಜಿಲ್ಲೆಯಲ್ಲಿ ಇರಬಹುದಾದ ಪಾಕಿಸ್ತಾನಿಗಳು, ಬಾಂಗ್ಲಾದೇಶಿಗರನ್ನು ಅವರ ದಾಖಲೆ ಪತ್ರಗಳನ್ನು ಪತ್ತೆ ಹಚ್ಚಿ ಹೊರ ಕಳಿಸಲು ಜಿಲ್ಲಾಡಳಿತ ಮತ್ತು ಜಿಲ್ಲಾ ಪೊಲೀಸ್ ಇಲಾಖೆ ಮುಂದಾಗಬೇಕು ಎಂದರು. ನಿರಂತರವಾಗಿ ಭಯೋತ್ಪಾದಕರಿಗೆ ನೆರವು ನೀಡುತ್ತಾ ಭಾರತದ ನೆಲದಲ್ಲಿ ಕ್ಷೋಭೆಯನ್ನು ಉಂಟು ಮಾಡುತ್ತಿರುವ ಪಾಕಿಸ್ತಾನವನ್ನು ಭೂಪಟದಲ್ಲೆ ಇಲ್ಲದಂತೆ ಮಾಡಬೇಕೆಂದು ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ಗಣತಿಗೆ ಬೆಂಬಲ : ಸದಾಶಿವ ಆಯೋಗದಲ್ಲಿ ಸೂಚಿಸಿರುವಂತೆ ಪರಿಶಿಷ್ಟ ಸಮುದಾಯದ ಉಪ ಪಂಗಡಗಳನ್ನು ಗುರುತಿಸುವ ನಿಟ್ಟಿನಲ್ಲಿ ನಡೆಯುತ್ತಿರುವ ಜಾತಿ ಗಣತಿಯನ್ನು ಬೆಂಬಲಿಸುತ್ತೇವೆ. ಅತ್ಯಂತ ಸಣ್ಣ ಸಮುದಾಯಗಳನ್ನು ಈ ಗಣತಿ ಕಾರ್ಯದ ಮೂಲಕ ಗುರುತಿಸಿ ಅವರ ಆಚಾರ, ವಿಚಾರ, ಸಂಸ್ಕೃತಿಯನ್ನು ಉಳಿಸುವ ಕಾರ್ಯದೊಂದಿಗೆ, ಸಣ್ಣ ಸಮುದಾಯಗಳಿಗೂ ಉನ್ನತ ಸ್ಥಾನಕ್ಕೇರುವ ಅವಕಾಶಗಳು ತೆರೆದುಕೊಳ್ಳುತ್ತವೆ ಎಂದು ಅಭಿಪ್ರಾಯಿಸಿದರು. ಎಂಎಲ್‌ಸಿ ಸುಜಾ ಕುಶಾಲಪ್ಪ ಮಾತನಾಡಿ, ಜಿಲ್ಲೆಯಲ್ಲಿ ನಕಲಿ ಆಧಾರ್ ಹಾಗೂ ಇನ್ನಿತರ ದಾಖಲೆಗಳೊಂದಿಗೆ ನೆಲೆಸಿರುವ ಅಕ್ರಮ ವಲಸಿಗರನ್ನು ಹೊರ ಕಳುಹಿಸುವ ಕೆಲಸವಾಗಬೇಕೆಂದು ಒತ್ತಾಯಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, ಕೇಂದ್ರ ಸರ್ಕಾರ ರಾಷ್ಟ್ರೀಯ ಜನಗಣತಿಯ ಸಂದರ್ಭದಲ್ಲೆ ಜಾತಿ ಗಣತಿ ಮಾಡಲು ನಿರ್ಧರಿಸಿರುವುದು ಸರಿಯಾದ ಕ್ರಮವಾಗಿದೆ ಎಂದು ಅಭಿಪ್ರಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಪಕ್ಷದ ಜಿಲ್ಲಾ ವಕ್ತಾರ ಮಹೇಶ್ ಜೈನಿ, ನಗರಾಧ್ಯಕ್ಷ ಉಮೇಶ್ ಸುಬ್ರಮಣಿ ಉಪಸ್ಥಿತರಿದ್ದರು.

ತಾಲೂಕಿನ ವಿವಿಧ ಗ್ರಾಪಂಗಳಿಗೆ ರಾಜ್ಯ 5ನೇ ಹಣಕಾಸು ತಂಡ ಭೇಟಿ



ಆಯೋಗದ ಅಧ್ಯಕ್ಷ ಡಾ.ಸಿ. ನಾರಾಯಣ ಸ್ವಾಮಿ ಗ್ರಾಪಂ ಅಧಿಕಾರಿಗಳ ಸಭೆ ನಡೆಸಿದರು.

ಮಡಿಕೇರಿ, ಮೇ 6– ವಿರಾಜಪೇಟೆ ತಾಲೂಕಿನ ಕೆ.ಬಾಡಗ, ನಾಲ್ಕೇರಿ ಹಾಗೂ ಪಾಲಿಬೆಟ್ಟ ಗ್ರಾಮ ಪಂಚಾಯಿತಿಗಳಿಗೆ ರಾಜ್ಯ 5 ನೇ ಹಣಕಾಸು ಆಯೋಗದ ಅಧ್ಯಕ್ಷರಾದ ಡಾ.ಸಿ.ನಾರಾಯಣಸ್ವಾಮಿ ಭೇಟಿ ನೀಡಿ ಸರ್ಕಾರದ ವಿವಿಧ ಯೋಜನೆಗಳನ್ನು ಸಮರ್ಪವಾಗಿ ಬಳಸಿಕೊಂಡು ಗ್ರಾಮ ಪಂಚಾಯಿತಿಗಳ ಅಭಿವೃದ್ದಿಗೆ ಶ್ರಮಿಸುವಂತೆ ಕರೆ ನೀಡಿದರು.

ಕೆ.ಬಾಡಗ ಹಾಗೂ ನಾಲ್ಕೇರಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಹಾಡಿಗಳಿದ್ದು, ಇಲ್ಲಿನ ಜನರ ಜೀವನ ಮಟ್ಟ ಸುಧಾರಿಸುವಲ್ಲಿ ಕ್ರಮವಹಿಸಿ ಎಂದರು.

ಕೆ.ಬಾಡಗ ಗ್ರಾಪಂ ಅಧ್ಯಕ್ಷ ರಿತೇಶ್ ಬಿದ್ದಪ್ಪ ಮಾತನಾಡಿ, ಚಿಕ್ಕ ಗ್ರಾಮ ಪಂಚಾಯಿತಿಯಾದರೂ ಸಹ ಸರ್ಕಾರದ ವಿವಿಧ ಯೋಜನೆಗಳ ಅನುದಾನವನ್ನು ಉತ್ತಮವಾಗಿ ಬಳಸಿಕೊಂಡು ಅಭಿವೃದ್ದಿಯನ್ನು ಸಾಧಿಸಲಾಗಿದೆ ಎಂದರೆ, ಸಹಾಯಕ ನಿರ್ದೇಶಕ ಎಂ.ಡಿ.ಶ್ರೀನಿವಾಸ್ ಮಾತನಾಡಿ, ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ತೋಡು ಅಭಿವೃದ್ದಿ, ಕೆರೆ ಅಭಿವೃದ್ಧಿ, ಕಾಂಕ್ರೀಟ್ ರಸ್ತೆ ಹಾಗೂ ಹಲವು ವೈಯಕ್ತಿಕ ಸೌಲಭ್ಯಗಳನ್ನು ನೀಡುವಲ್ಲಿ ಉತ್ತಮವಾಗಿ ಪ್ರಗತಿ ಸಾಧಿಸಿ, ಬಾಡಗೆ ಗ್ರಾಮ ಪಂಚಾಯಿತಿಗೆ ರಾಜ್ಯ ಪ್ರಶಸ್ತಿ ಲಭಿಸಿದೆ ಎಂದು ಹೇಳಿದರು.

ಕೆ.ಬಾಡಗ ಹಾಗೂ ನಾಲ್ಕೇರಿ ಗ್ರಾಪಂ ಅಧ್ಯಕ್ಷರುಗಳಾದ ರಿತೇಶ್ ಬಿದ್ದಪ್ಪ, ಸೋಮಯ್ಯ, ಆಯೋಗದ ಸದಸ್ಯರಾದ ಆರ್.ಎಸ್.ಪೋಂಡೆ, ಮಹಮ್ಮದ್ ಸನಾವುಲ್ಲಾ, ಕೆಂಪೇಗೌಡ, ಕೆ.ಯಾಲಕ್ಕಿಗೌಡ, ಸುಪ್ರಸನ್ನ, ತಾ.ಪಂ.ಇ.ಒ. ಕೆ.ಸಿ.ಅಪ್ಪಣ್ಣ, ಹೇಮಂತ್ ಕುಮಾರ್, ಪಿ.ವಿ.ಶ್ರೀನಿವಾಸ್, ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಗ್ರಾಮಸ್ಥರು ಇದ್ದರು.

ಗುಂಡು ಹಾರಿಸಿ ಕಾಫಿ ಪ್ಲಾಂಟರ್ ಹತ್ಯೆ

ಮಡಿಕೇರಿ, ಮೇ 6– ಸ್ಪ್ರಿಂಕ್ಲರ್ ಪೈಪುಗಳನ್ನು ದಾಸ್ತಾನು ಮಾಡುವ ಕೆಲಸದಲ್ಲಿ ನಿರತರಾಗಿದ್ದ ಕಾಫಿ ಪ್ಲಾಂಟರನ್ನು ಗುಂಡು ಹೊಡೆದು ಕೊಲೆ ಮಾಡಿದ ಘಟನೆ ಚೆಟ್ಟಳ್ಳಿ ಸಮೀಪದ ಅಭ್ಯತ್ ಮಂಗಲ ಗ್ರಾಮದಲ್ಲಿ ನಡೆದಿದೆ.



ಕುಶಾಲನಗರ ತಾಲೂಕಿನ ನಂಜರಾಯಪಟ್ಟಣ ನಿವಾಸಿ ಕೊಳಂಬೆ ವಿನು (50) ಎಂಬವರೇ ಹತ್ಯೆಗೀಡಾದ ವ್ಯಕ್ತಿ. ಅಭ್ಯತ್ ಮಂಗಲದಲ್ಲಿನ ತೋಟದಲ್ಲಿದ್ದ ಸ್ಪ್ರಿಂಕ್ಲರ್ ಪೈಪುಗಳನ್ನು ಕಾರ್ಮಿಕರಿಬ್ಬರ ಸಹಕಾರದಿಂದ ಗೋದಾಮಿಗೆ ದಾಸ್ತಾನು ಮಾಡುತ್ತಿರುವ ಸಂದರ್ಭದಲ್ಲೇ ಹಿಂಬದಿಯಿಂದ ಗುಂಡು ಹಾರಿಸಲಾಗಿದೆ.

ಗುಂಡಿನ ಸದ್ದು ಕೇಳಿ ಕಾರ್ಮಿಕರು ಸ್ಥಳಕ್ಕಾಗಮಿಸಿದಾಗ ಕೊಳಂಬೆ ವಿನು ಅವರು ರಕ್ತದ ಮಡುವಿನಲ್ಲಿ ಬಿದ್ದಿದ್ದು, ಸ್ಥಳದಲ್ಲೇ ಮೃತಪಟ್ಟಿರುವುದು ಕಂಡು ಬಂದಿದೆ. ಘಟನಾ ಸ್ಥಳಕ್ಕೆ ಮಡಿಕೇರಿ ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಈ ಕೃತ್ಯಕ್ಕೆ ಆಸ್ತಿ ವೈಷಮ್ಯ ಕಾರಣ ಎನ್ನುವ ಮಾತುಗಳು ಕೇಳಿ ಬರುತ್ತಿದ್ದು, ಓರ್ವ ಶಂಕಿತ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿರುವುದಾಗಿ ತಿಳಿದು ಬಂದಿದೆ. ಕೊಲೆ ಪ್ರಕರಣ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮೇ 10, ಸೇನಾ ನೇಮಕಾತಿ ಬಗ್ಗೆ ಕಾರ್ಯಾಗಾರ

ಮಡಿಕೇರಿ, ಮೇ 6– ತಾಳತ್ತಮನೆಯ ನೇತಾಜಿ ಯುವಕ ಮಂಡಲ ಹಾಗೂ ಹೊಟೇಲ್ ಆಕ್ಸಿರಿಚ್ ಸಂಯಕ್ತಾಶ್ರಯದಲ್ಲಿ ತಾಳತ್ತಮನೆಯಲ್ಲಿ ಮೇ.10ರಂದು ಸೇನಾ ನೇಮಕಾತಿಯ ಬಗ್ಗೆ ಅರಿವು ಕಾರ್ಯಾಗಾರ ನಡೆಯಲಿದೆ. ಅಂದು ಅಪರಾಹ್ನ 2.30 ಗಂಟೆಗೆ ತಾಳತ್ತಮನೆಯ ಹೊಟೇಲ್ ಆಕ್ಸಿರಿಚ್ ಸಭಾಂಗಣದಲ್ಲಿ ಭಾರತೀಯ ಸೇನೆಗೆ ನೇಮಕಾತಿ ಬಯಸುವ ಆಕಾಂಕ್ಷಿತ 15ರಿಂದ 25 ವರ್ಷದ ಯುವಕ ಮತ್ತು ಯುವತಿಯರಿಗೆ ಕಾರ್ಯಾಗಾರ ನಡೆಯಲಿದ್ದು, ಸೇನೆಯಲ್ಲಿ ಸೇನಾಧಿಕಾರಿ ಮತ್ತು ಅಗ್ನಿವೀರ್ ಹುದ್ದೆಗಳಿಗೆ ಆಯ್ಕೆಯಾಗಲು ಬೇಕಾದ ಉಪಯುಕ್ತ ಮಾಹಿತಿಗಳನ್ನು ನೀಡಲಾಗುವುದು. ಸಂಪನ್ಮೂಲ ವ್ಯಕ್ತಿಗಳಾಗಿ ಭಾರತೀಯ ನೌಕಾದಳದಲ್ಲಿ ಲೆಫ್ಟಿನೆಂಟ್ ಕಮಾಂಡರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಜಯಂತ್ ಸುಬ್ಬಯ್ಯ, ಆಡಿಯೋ ವಿಶುವಲ್ ಪ್ರಾತ್ಯಕ್ಷಿಕೆ ಮುಖಾಂತರ ಮಾಹಿತಿ ನೀಡಲಿದ್ದಾರೆ. ಆಸಕ್ತ ಪ್ರೌಢ ಶಾಲೆ, ಕಾಲೇಜು ವಿದ್ಯಾರ್ಥಿಗಳು ಹಾಗೂ ಎನ್.ಸಿ.ಸಿ ಕೆಡೆಟ್‌ಗಳು ಕಾರ್ಯಾಗಾರದ ಸದುಪಯೋಗ ಪಡಿಸಿಕೊಳ್ಳುವಂತೆ ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9901677675, 9632007915, 7019716632, 9110862380 ಸಂಪರ್ಕಿಸಬಹುದಾಗಿದೆ.

ವಾಹನಗಳ ನಿಲುಗಡೆ; ಸಾರ್ವಜನಿಕ ಸಭೆ



ಪುರಸಭೆ ವತಿಯಿಂದ ವಾಹನಗಳ ನಿಲುಗಡೆ ಸಮಸ್ಯೆ ಬಗ್ಗೆ ಅಧ್ಯಕ್ಷೆ ದೇಚಮ್ಮ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ವಿರಾಜಪೇಟೆ, ಮೇ 6– ವಾಹನಗಳ ನಿಯಮದ ಬಗ್ಗೆ ತಿಳುವಳಿಕೆ ಅರಿವು ಜನರಲ್ಲಿ ಜಾಗೃತಿ ಮೂಡಿಸುವುದು ನಮ್ಮ ಕರ್ತವ್ಯ ಅದನ್ನು ಪಾಲಿಸುವುದು ಸಾರ್ವಜನಿಕರ ಹೊಣೆ. ನಾಲ್ಕು ಚಕ್ರ ವಾಹನ ನಿಲುಗಡೆ ಸ್ಥಳದಲ್ಲಿ ದ್ವಿಚಕ್ರವಾಹನ ನಿಲ್ಲಿಸುವುದು ವಾಹನ ಅಡ್ಡಾದಿಡ್ಡಿ ನಿಲಿಸುವುದು ಹೀಗೆ ಸಮಸ್ಯೆ ಮಾಡದೇ ಸ್ವ ಅರಿವಿನಿಂದ ನಡೆದುಕೊಳ್ಳುವುದು ವಾಹನ ಸವಾರರು ರೂಢಿಸಿಕೊಳ್ಳಬೇಕು ಎಂದು ವಿರಾಜಪೇಟೆ ಪೊಲೀಸ್ ವೃತ್ತ ನಿರೀಕ್ಷಕ ಅನೂಪ್‌ಮಾದಪ್ಪ ಹೇಳಿದರು.

ಪುರಸಭೆ ವತಿಯಿಂದ ಪಟ್ಟಣದ ಪುರಭವನದಲ್ಲಿ ವಾಹನಗಳ ನಿಲುಗಡೆ ಸಮಸ್ಯೆಗಳ ಬಗ್ಗೆ ಅಧ್ಯಕ್ಷೆ ದೇಚಮ್ಮ ಅಧ್ಯಕ್ಷತೆಯಲ್ಲಿ ಪೊಲೀಸ್ ಇಲಾಖೆ ಜೊತೆ ಸಾರ್ವಜನಿಕ ಸಭೆಯಲ್ಲಿ ಜನರ ಸಮಸ್ಯೆಗಳನ್ನು ಆಲಿಸಿ ಮಾತನಾಡಿದ ಅವರು, ಸುಣ್ಣದ ಬೀದಿಯಲ್ಲಿ ಸಂತೆ ದಿನ ವಾಹನ ನಿಲ್ಲಿಸಿ ಸುಮಾರು 28 ವಾಹನ ವ್ಯಾಪಾರ ನಡೆಸುತ್ತವೆ ಇದಕ್ಕೆ ನಮ್ಮ ಅಭ್ಯಂತರ ಇಲ್ಲ. ಆದರೆ ಇಲ್ಲಿ ವ್ಯಾಪಾರಕ್ಕೆ ಬೇರೆ ವಾಹನದವರು ವಾಹನ ಸ್ಥಳದಲ್ಲಿ ನಿಲ್ಲಿಸಿ ವಹಿ ವಾಟು ನಡೆಸುವುದರಿಂದ ಮುಕ್ತ ವಾಹನ ಸಂಚಾರಕ್ಕೆ ತಡೆಯಾಗುತ್ತಿದೆ ಈ ಕುರಿತು ಪುರಸಭೆ ನಿರ್ಣಯ ಕೈಗೊಳ್ಳಬೇಕು ಎಂದರು.

ಬಸ್ ನಿಲ್ದಾಣದಲ್ಲಿ ಮಾರುಕಟ್ಟೆ ಬಳಿ ಖಾಸಗಿ ಬಸ್ ನಿಲುಗಡೆ ಇನ್ನೊಂದು ಬದಿಯಲ್ಲಿ ಖಾಸಗಿ ವಾಹನ ನಿಲುಗಡೆಯಿಂದ ಸಂಚಾರಕ್ಕೆ ಅಡಚಣೆ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಸರಕು ಇಳಿಸುವ ವಾಹನ ಬೆಳಿಗ್ಗೆ 9 ರೊಳಗೆ ಅಥವಾ ಸಂಜೆ ಇಳಿಸಬೇಕು. ದೊಡ್ಡಟ್ಟಿ ಚೌಕಿ ಬಳಿ ಖಾಸಗಿ ಬಸ್ ಮತ್ತು ಆಟೋದವರು ಸಹಕಾರ ನೀಡಿದರೆ ಸಮಸ್ಯೆ ಬಗೆ ಹರಿಸಬಹುದು. ಅಪಘಾತವಲಯದಲ್ಲಿ ರಸ್ತೆ ಅಭಿವೃದ್ದಿಗೆ ಕಾಂರ್ಯನಿರ್ವಹಿಸುತ್ತಾರೆ ಎಂದು ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರ ಲಿಂಗರಾಜು ಸಮಗ್ರ ಮಾಹಿತಿ ನೀಡಿದರು.

ಅಧ್ಯಕ್ಷೆ ದೇಚಮ್ಮ ಮಾತನಾಡಿ, ತಾಲೂಕು ಕಚೇರಿ ಮುಂಭಾಗ ಮತ್ತು ಗ್ರಂಥಾಲಯ ಎರಡು ಬದಿಯಲ್ಲಿ ವಾಹನ ನಿಲುಗಡೆ ಮುಕ್ತ ಸಂಚಾರಕ್ಕೆ ಅಡ್ಡಿಯಾಗಿದ್ದು ಒಂದು ಕಡೆ ನಿಲುಗಡೆ ಮಾಡಿ. ಇದರಲ್ಲಿ ಪೊಲೀಸ್ ಇಲಾಖೆಯ ನಾಮಫಲಕ ಇದ್ದು ಮುಂದೆ ಇಲಾಖೆ ಜೊತೆ ಸೇರಿ ಅಗತ್ಯ ಸೂಚನ ಫಲಕ ಅಳಡಿಸಲಾಗುತ್ತದೆ. ಗಡಿಯಾರ ಕಂಬದಿಂದ ಖಾಸಗಿ ಬಸ್ ನಿಲ್ದಾಣ, ಮೂರ್ನಾಡು ರಸ್ತೆವರಗೆ ರಸ್ತೆ ಬದಿ ದುಸ್ಥಿತಿಯಲ್ಲಿದ್ದು ದುರಸ್ಥಿ ಮಾಡುತ್ತವೆ. ಮಂದೆ ಶಾಸಕರು ನೀಡಿರುವ ಅನುದಾನದಲ್ಲಿ ಸೂಕ್ತ ಅಭಿವೃದ್ದಿಯಾಗಲಿದೆ ಎಂದರು. ಸಭೆಯಲ್ಲಿ ಬಹುತೇಕ ಸಾರ್ವಜನಿಕರು ಪ್ರಮುಖರು ವಾಹನ ದಟ್ಟಣೆ ತಪ್ಪಿಸಲು ಸುಗಮ ಸಂಚಾರಕ್ಕೆ ರಸ್ತೆ ಅಗಲಿಕರಣ ಮಾಡಬೇಕು.

ವೇದಿಕೆಯಲ್ಲಿ ಪುರಸಭೆ ಮುಖ್ಯಾಧಿಕಾರಿ ನಾಚಪ್ಪ, ಸ್ಥಾಯಿ ಸಮಿತಿ ಅಧ್ಯಕ್ಷರುಗಳಾದ ಪೂರ್ಣಿಮ, ಜಲೀಲ್, ಠಾಣಾಧಿಕಾರಿ ಪ್ರಮೋದ್, ವಾಣಿ ಮತ್ತಿತರರಿದ್ದರು.

ಸ್ಮಿತಾ ಅಮೃತರಾಜ್ ಸಂಪಾಜೆಗೆ ವಿಜಯ ವಿಷ್ಣುಭಟ್ ದತ್ತಿ ಪ್ರಶಸ್ತಿ

ಮಡಿಕೇರಿ,ಮೇ 6–ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮಹಿಳಾ ಸಾಹಿತಿಗಳಿಗೆ ಮೀಸಲಾಗಿಟ್ಟಿರುವ 'ಶ್ರೀಮತಿ ವಿಜಯ ವಿಷ್ಣುಭಟ್ ದತ್ತಿ ಪ್ರಶಸ್ತಿ'ಗೆ ಜಿಲ್ಲೆಯ ಹಿರಿಯ ಸಾಹಿತಿ ಸ್ಮಿತಾ ಅಮೃತರಾಜ್ ಸಂಪಾಜೆ ರಚಿಸಿರುವ ಕಥಾ ಸಂಕಲನ 'ಹಾಯ್ ಮೆಟಾಯ್' ಕೃತಿ ಪುರಸ್ಕೃತಗೊಂಡಿದೆ.




ಜಿಲ್ಲೆಯ ಹಿರಿಯ ಸಾಹಿತಿ ಶ್ರೀಮತಿ ವಿಜಯ ವಿಷ್ಣುಭಟ್ ಸ್ಥಾಪಿಸಿರುವ ದತ್ತಿಯ ಮೊದಲ ಪ್ರಶಸ್ತಿಯಾಗಿದೆ. ಈ ದತ್ತಿ ಪ್ರಶಸ್ತಿಯ ಆಯ್ಕೆಗಾಗಿ ಜಿಲ್ಲೆಯ ಬರಹಗಾರರ ಕೃತಿಗಳನ್ನು ಆಹ್ವಾನಿಸಿದಾಗ 10 ಸಾಹಿತಿಗಳು ತಮ್ಮ ಕೃತಿಗಳನ್ನು ಪ್ರಸ್ತುತಪಡಿಸಿದ್ದರು. ಜಿಲ್ಲೆಯ ಹಿರಿಯ ಮೂವರು ಸಾಹಿತಿಗಳು ಪ್ರತ್ಯೇಕವಾಗಿ ನೀಡಿದ ಅಂಕಗಳನ್ನು ಒಟ್ಟುಗೂಡಿಸಿ 10 ಜನ ಲೇಖಕರಲ್ಲಿ ಅತಿ ಹೆಚ್ಚು ಅಂಕ ಪಡೆದ 'ಹಾಯ್ ಮೆಟಾಯ್' ಕೃತಿಯ ಲೇಖಕಿಯಾದ ಸ್ಮಿತಾ ಅಮೃತ್ ರಾಜ್ ಸಂಪಾಜೆ ಪ್ರಶಸ್ತಿ ಪುರಸ್ಕೃತಗೊಂಡಿದ್ದಾರೆ. ಮುಂದೆ ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮಡಿಕೇರಿ, ಮೇ 6– ಪೊನ್ನಂ ಪೇಟೆಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಎಲೆಕ್ಟ್ರಾನಿಕ್ ಮೆಕಾನಿಕ್ ಮತ್ತು ಕಂಪ್ಯೂಟರ್ ಆಪರೇಟರ್ ಹಾಗೂ ಪ್ರೋಗ್ರಾ ಮಿಂಗ್ ಅಸಿಸ್ಟೆಂಟ್ ವೃತ್ತಿಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಈ ಸಂಬಂಧ ಹತ್ತಿರದ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿಯೇ ಖುದ್ದಾಗಿ ಅರ್ಜಿ ಸಲ್ಲಿಸಬೇಕು. ವಿವರಗಳಿಗೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರನ್ನು ದೂ.ಸಂ. 08274–200221 ಮತ್ತು 9036796935, 9880234243, 9945635160 ಹಾಗೂ 8971358220 ಮೂಲಕ ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಲೆಯ ಪೀಠೋಪಕರಣ ಧ್ವಂಸಗೊಳಿಸಿದ ಕಿಡಿಗೇಡಿಗಳು



ಚಾಮರಾಜನಗರ, ಮೇ 6– ಶಾಲೆಯ ಬೀಗ ಮುರಿದು ಒಳನುಗ್ಗಿರುವ ಕಿಡಿಗೇಡಿಗಳು ಶಾಲೆಯಲ್ಲಿದ್ದ ಪೀಠೋಪಕರಣಗಳನ್ನು ಧ್ವಂಸಗೊಳಿಸಿರುವ ಘಟನೆ ರಾಮಸಮುದ್ರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದಿದೆ.

ಬೇಸಿಗೆ ರಜೆ ಹಿನ್ನಲೆಯಲ್ಲಿ ಹೊಸ ದಾಖಲಾತಿಯ ಕಚೇರಿ ಕೆಲಸಕ್ಕೆಂದು ಮುಖ್ಯಶಿಕ್ಷಕರು, ಸಿಬ್ಬಂದಿ ಬೆಳಗ್ಗೆ ಬಂದು ನೋಡಿದಾಗ ಘಟನೆ ಬೆಳಕಿಗೆ ಬಂದಿದೆ.

ತಡರಾತ್ರಿ ಶಾಲೆಯ ಎಲ್ಲಾ ಕೊಠಡಿಯ ಬೀಗ ಮುರಿದು ಒಳನುಗ್ಗಿರುವ ಕಿಡಿಗೇಡಿಗಳು ಕೊಠಡಿಗಳಲ್ಲಿದ್ದ ವಸ್ತುಗಳು, ಪೀಠೋಪಕರಣಗಳು, ದಾಖಲಾತಿ ಪುಸ್ತಕಗಳನ್ನು ಧ್ವಂಸಗೊಳಿಸಿದ್ದಾರೆ. ಅಡುಗೆ ಮನೆಗೆ ನುಗ್ಗಿ ಹಾಲಿನ ಪೌಡರ್ ಸೇರಿದಂತೆ ಆಹಾರ ಸಾಮಗ್ರಿಗಳನ್ನು ನಾಶ ಮಾಡಿ, ಅಡುಗೆ ಕೋಣೆಯಲ್ಲಿಯೇ ಹೇಸಿಗೆ ಮಾಡಿ ವಿಕೃತಿ ಮೆರೆದಿದ್ದಾರೆ. ಶಾಲಾ ಸಿಬ್ಬಂದಿ ದೂರು ನೀಡಿದ ಮೇರೆಗೆ ಪೂರ್ವ ಗ್ರಾಮಾಂತರ ಪೊಲೀಸರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಜಮೀನು ವಿಚಾರಕ್ಕೆ ಕುಟುಂಬಗಳ ಗಲಾಟೆ; ಕೊಲೆಯಲ್ಲಿ ಅಂತ್ಯ

ಚಾಮರಾಜನಗರ, ಮೇ 6– ಜಮೀನಿನ ವಿಚಾರಕ್ಕೆ ಎರಡು ಕುಟುಂಬಗಳ ನಡುವೆ ಶುರುವಾದ ಗಲಾಟೆ ಓರ್ವನ ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ತಾಲೂಕಿನ ವಡ್ಗಲ್‌ಪುರ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಮಲ್ಲಪ್ಪ (52) ಕೊಲೆಯಾದ ವ್ಯಕ್ತಿ. ಕೊಲೆ ಮಾಡಿದ ಆರೋಪದ ಮೇರೆಗೆ ಪೋಲಿಸರು ಅದೇ ಗ್ರಾಮದ ನಾಗಪ್ಪ, ದೊರೆಸ್ವಾಮಿ, ಮೀನಾ, ನಾಗರಾಜು ಎಂಬುವರನ್ನು ಬಂಧಿಸಿದ್ದಾರೆ.



ಮಲ್ಲಪ್ಪ

ಘಟನೆಯ ವಿವರ: ಗ್ರಾಮದಲ್ಲಿನ ಜಮೀನು ವಿಚಾರಕ್ಕೆ ಸಂಬಂಧಿಸಿದಂತೆ ಮಲ್ಲಪ್ಪ ಹಾಗೂ ನಾಗಪ್ಪ ಅವರ ಕುಟುಂಬಗಳ ನಡುವೆ ಆಗಾಗೆ ಗಲಾಟೆ ನಡೆಯುತಿದ್ದು, ಕೋರ್ಟ್‌ನಲ್ಲಿ ಜಮೀನಿನ ವಿಚಾರ ಸಂಬಂಧ ವ್ಯಾಜ್ಯವೂ ನಡೆಯುತಿತ್ತೆನ್ನಲಾಗಿದೆ.

ರಾತ್ರಿ ಮತ್ತೆ ಜಮೀನು ವಿಚಾರಕ್ಕೆ ಮಲ್ಲಪ್ಪನ ಮಗ ಮಲ್ಲೇಶ ಹಾಗೂ ನಾಗಪ್ಪನ ಮಗಳು ಮೀನಾ ನಡುವೆ ಗಲಾಟೆ ಆರಂಭವಾಗಿದೆ. ಈ ವೇಳೆ ಮೀನಾಳ ಮೇಲೆ ಮಲ್ಲೇಶ ಹಲ್ಲೆ ನಡೆಸಿ ಆಕೆಯನ್ನು ಹಿಡಿದುಕೊಂಡಿದ್ದನೆನ್ನಲಾಗಿದೆ.

ಇದರಿಂದ ಕೋಪಗೊಂಡ ಮೀನಾಳ ಕುಟುಂಬದವರು ಮಲ್ಲೇಶನ ಮೇಲೆ ಹಲ್ಲೆ ನಡೆಸಲು ಕ್ರಿಕೆಟ್ ಬ್ಯಾಟ್, ಬಡಿಗೆಗಳನ್ನು ತಂದಿದ್ದಾರೆ. ಆದರೆ ಆ ವೇಳೆ ಮಲ್ಲೇಶ ತಪ್ಪಿಸಿಕೊಂಡಿದ್ದು, ಆತನ ತಂದೆ ಮಲ್ಲಪ್ಪ ಸಿಕ್ಕಿ ಬಿದ್ದಿದ್ದಾನೆ. ಮೀನಾಳ ಕುಟುಂಬದವರು ಬಡಿಗೆಯಿಂದ ಬಡಿದು ಮಾರಣಾಂತಿಕವಾಗಿ ಹಲ್ಲೆಯಿಂದ ತೀವ್ರ ಗಾಯಗೊಂಡಿದ್ದ ಮಲ್ಲಪ್ಪನನ್ನು ನಗರದ ಸಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೇ ಆತ ಸಾವನ್ನಪ್ಪಿದ್ದಾನೆ. ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪಾಕಿಸ್ತಾನಿ ಪ್ರಜೆಗಳ ಗಡಿಪಾರಿಗೆ ಒತ್ತಾಯಿಸಿ ರಾಜ್ಯಪಾಲರಿಗೆ ಮನವಿ



ಪಾಕಿಸ್ತಾನಿ ಪ್ರಜೆಗಳನ್ನು ಕೂಡಲೇ ಗಡಿಪಾರು ಮಾಡುವಂತೆ ಒತ್ತಾಯಿಸಿ ಜಿಲ್ಲಾ ಬಿಜೆಪಿ ಸಮಿತಿ ಜಿಲ್ಲಾಧಿಕಾರಿ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಿತು.

ಚಾಮರಾಜನಗರ, ಮೇ 6– ದೇಶದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ಪಾಕಿಸ್ತಾನಿ ಪ್ರಜೆಗಳನ್ನು ಕೂಡಲೇ ಗಡಿಪಾರು ಮಾಡಬೇಕೆಂದು ಒತ್ತಾಯಿಸಿ ಜಿಲ್ಲಾ ಬಿಜೆಪಿ ಸಮಿತಿ ಜಿಲ್ಲಾಧಿಕಾರಿ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಭಾರತದಲ್ಲಿರುವ ಎಲ್ಲಾ ಪಾಕಿಸ್ತಾನಿ ಪ್ರಜೆಗಳು 24 ಗಂಟೆಯೊಳಗೆ ಹಿಂತಿರುಗುವಂತೆ ಕಟ್ಟಾಜ್ಞೆ ಹೊರಡಿಸಿದೆ. ಆದರೂ ಕೂಡ ರಾಜ್ಯದಲ್ಲಿರುವ ಪಾಕಿಸ್ತಾನಿಗಳನ್ನು ಪತ್ತೆಹಚ್ಚುವಲ್ಲಿ ಸರ್ಕಾರ ವಿಫಲವಾಗಿದೆ. ರಾಜ್ಯದ ಹಿತದೃಷ್ಟಿಯಿಂದ ಅಂತಹವರನ್ನು ಪತ್ತೆಹಚ್ಚಿ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು. ಇದು ಅತ್ಯಂತ ಸೂಕ್ಷ್ಮ ವಿಚಾರವಾಗಿರುವುದರಿಂದ ಸ್ಥಳೀಯ ಆಡಳಿತ ವ್ಯವಸ್ಥೆಯು ಶೀಘ್ರವಾಗಿ ಹಾಗೂ ನಿರ್ಣಾಯಕವಾದ ಕಾರ್ಯ ನಿರ್ವಹಿಸುತ್ತದೆಂದು ರಾಷ್ಟ್ರೀಯ ನಿರ್ದೇಶನಗಳನ್ನು ಪಾಲಿಸಿ, ಜನರ ವಿಶ್ವಾಸವನ್ನು ಬಲಗೊಳಿಸಿ ಹಾಗೂ ನಿಮಯಾನುಸಾರ ದಕ್ಷ ಸುರಕ್ಷತಾ ವ್ಯವಸ್ಥೆಯನ್ನು ನಿರ್ವಹಿಸುತ್ತದೆಂದು ಆಶಿಸುತ್ತೇವೆ. ಅಕ್ರಮವಾಗಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಒತ್ತಾಯಿಸಿದರು.

ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹದೇವಸ್ವಾಮಿ, ಚಾಮುಲ್ ಮಾಜಿ ಅಧ್ಯಕ್ಷ ನಾಗೇಂದ್ರ, ಮಾಜಿ ಅಧ್ಯಕ್ಷ ಆರ್.ಸುಂದರ್, ಚೂಡಾ ಮಾಜಿ ಅಧ್ಯಕ್ಷ ಕುಲಗಾಣ ಶಾಂತಮೂರ್ತಿ, ಬಾಲಸುಬ್ರಹ್ಮಣ್ಯಂ, ಮಂಡಲ ಅಧ್ಯಕ್ಷ ಶಿವರಾಜ್, ಸಿ.ಮಹದೇವಪ್ರಸಾದ್, ವೃಷಭೇಂದ್ರಸ್ವಾಮಿ, ಅನಿಲ್, ಟಗರ್‌ಪುರ ರೇವಣ್ಣ, ತಾ.ಪಂ.ಮಾಜಿ ಅಧ್ಯಕ್ಷ ರವೀಶ್, ಜಿಲ್ಲಾ ಕಾರ್ಯದರ್ಶಿ ನಟರಾಜು, ನಗರಸಭಾ ಮಾಜಿ ಸದಸ್ಯ ಶಿವಣ್ಣ, ಆನಂದ್ ಭಗೀರಥ್, ರಾಮಸಮುದ್ರ ಶಿವಣ್ಣ ವೇಣುಗೋಪಾಲ್, ಮುಕುಂದ, ಕೇಬಲ್ ರಂಗಸ್ವಾಮಿ, ಶ್ರೀನಿವಾಸಮೂರ್ತಿ, ಮುರುಗೇಶ್, ಪ್ರವೀಣ್ ಇತರರಿದ್ದರು.

ಅಪರಿಚಿತ ಶವ ಪತ್ತೆ

ಚಾಮರಾಜನಗರ, ಮೇ 6–ಜ್ಯೋತಿಗೌಡನಪುರ ಗ್ರಾಮದ ಬಸ್ ನಿಲ್ದಾಣದ ಅಂಗಡಿಯ ಮುಂಭಾಗದಲ್ಲಿ ಅಪರಿಚಿತ ವೃದರ ಶವ ಪತ್ತೆಯಾಗಿದೆ. ಸುಮಾರು 65 ವರ್ಷ ವಯಸ್ಸಿನವರಾಗಿದ್ದು, 5.5 ಅಡಿ ಎತ್ತರ, ಕೋಲು ಮುಖ, ಎಣ್ಣೆಗೆಂಪು ಮೈಬಣ್ಣ, ತಲೆಯ ಹಿಂಭಾಗ ಕಪ್ಪು ಬಿಳಿ ತಲೆಕೂದಲು ಇದ್ದು, ಜಡೆಗಟ್ಟಿರುತ್ತದೆ ಹಾಗೂ ಕಪ್ಪು ಬಿಳಿ ಗಡ್ಡೆ ಮೀಸೆ ಇರುತ್ತದೆ. ಕಡು ನೀಲಿ ಬಣ್ಣದ ಅಲ್ಲಲ್ಲಿ ಬಿಳಿ ಚೌಕುಳಿ ಗೆರೆಯುಳ್ಳ ತುಂಬು ತೋಳಿನ ಶರ್ಟ್ ಮತ್ತು ಕಡು ನೀಲಿ ಬಣ್ಣದ ಪ್ಯಾಂಟ್ ಇರುತ್ತದೆ. ಇವರ ವಾರಸುದಾರರು ಇದ್ದಲ್ಲಿ ಎಸ್ಪಿ ಕಚೇರಿ ದೂ.ಸಂ 08226–222243 ಯನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಮೇ 20, ಅಂಗನವಾಡಿ ನೌಕರರ ಮುಷ್ಕರ



ಅಂಗನವಾಡಿ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ. ನಾಗಮಣಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಚಾಮರಾಜನಗರ, ಮೇ 6– ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮೇ 20 ರಂದು ಜಿಲ್ಲೆಯಲ್ಲಿ ಅಂಗನವಾಡಿ ನೌಕರರು ಮುಷ್ಕರ ನಡೆಸಲಿದ್ದಾರೆ ಎಂದು ರಾಜ್ಯ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ. ನಾಗಮಣಿ ಹೇಳಿದರು.

ಅಂದು ಜಿಲ್ಲೆಯ ಎಲ್ಲ ಅಂಗನ ವಾಡಿ ಕೇಂದ್ರಗಳನ್ನು ಬಂದ್ ಮಾಡಿ ಕಾರ್ಯಕರ್ತರು ಹಾಗೂ ಸಹಾಯಕಿಯರು ಮುಷ್ಕರ ನಡೆಸುತ್ತೇವೆ. ಅಲ್ಲದೇ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲೂ ಪ್ರತಿಭಟನೆ ನಡೆಸಲಾಗುವುದು ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಅಂಗವಾಡಿ ನೌಕರರು 50 ವರ್ಷಗಳಿಂದಲೂ ಐಸಿಡಿಎಸ್‌ಯಡಿ ದುಡಿಯುತ್ತಿದ್ದಾರೆ. ಈ ಯೋಜನೆಯನ್ನು ಕಾಯಂ ಮಾಡಬೇಕು. ಅಲ್ಲಿಯ ತನಕ ಕನಿಷ್ಟ ವೇತನ ನೀಡಬೇಕು ರಾಜ್ಯ ಸರ್ಕಾರ 2023ರ ಏ. 1 ರಿಂದ 1972 ಗ್ರಾಚ್ಯುಟಿ ಪಾವತಿ ಕಾಯ್ದೆಯನ್ನು ಅನ್ವಯ ಮಾಡಿ ಈಗಾಗಲೇ 287 ಕಾರ್ಯಕರ್ತರಿಗೆ ಮತ್ತು 1204 ಸಹಾಯಕಿಯರಿಗೆ ಪಾವತಿಸಿದೆ ಈ ಕಾಯ್ದೆಯನ್ನು 2011 ರಿಂದ ನಿವೃತ್ತಿಯಾದ 10311 ಕಾರ್ಯಕರ್ತೆಯರು, 11980 ಸಹಾಯಕಿಯರಿಗೂ ಅನ್ವಯಿಸಬೇಕು ಎಂದು ಆಗ್ರಹಿಸಿದರು.

ಗುಜರಾತ್ ಹೈಕೋರ್ಟ್ ತೀರ್ಪಿನಂತೆ ಅಂಗನವಾಡಿ ನೌಕರರನ್ನು ಖಾಯಂ ಮಾಡಬೇಕು. 29 ಕಾರ್ಮಿಕ ಕಾನೂನುಗಳನ್ನು ರದ್ದುಗೊಳಿಸಿ ಹೊಸದಾಗಿ ತಂದಿರುವ 4 ಸಂಹಿತೆಗಳನ್ನು ರದ್ದುಗೊಳಿಸಬೇಕು. 26 ಸಾವಿರ ಕನಿಷ್ಠ ವೇತನ, 10 ಸಾವಿರ ಮಾಸಿಕ ಪಿಂಚಣಿ ಕೊಡಬೇಕು. ಐಸಿಡಿಎಸ್ ಯೋಜನೆಗೆ ಬಜೆಟ್ ಅನ್ನು ಹೆಚ್ಚಿಸಬೇಕು. ಟಿಹೆಚ್‌ಆರ್ ಮೂಲಕ ಫಲಾನುಭವಿಗಳ ಪೋಷಣ್ ಟ್ರ್ಯಾಕ್ಟರ್‌ನ ಕೆಲಸಗಳಲ್ಲಿ ಅಂಗನವಾಡಿ ನೌಕರರಿಗೆ ತೊಂದರೆ ಕೊಡಬಾರದು ಎಂದರು. ಪತ್ರಿಕಾಗೋಷ್ಟಿಯಲ್ಲಿ ಸಂಘದ ಜಿಲ್ಲಾಧ್ಯಕ್ಷೆ ಸುಜಾತ, ಪಾರ್ವತಮ್ಮ, ಸಾಜಿಯಾ, ಶಾಹೀದಾ ಬಾನು, ಸುಮಿತ್ರ, ಜಯಮಾಲ ಹಾಜರಿದ್ದರು.

ಚಾ.ನಗರದಲ್ಲಿ ನಾಳೆ ಶ್ರೀ ಶಂಕರಾಚಾರ್ಯರ ಜಯಂತಿ

ಚಾಮರಾಜನಗರ, ಮೇ 6 – ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಶ್ರೀ ಶಂಕರಾಚಾರ್ಯ ಜಯಂತಿಯನ್ನು ಮೇ 8ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.



ಬೆಳಿಗ್ಗೆ 9.30 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಿಂದ ಮೆರವಣಿಗೆ ಹೊರಡಲಿದ್ದು, ನಂತರ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್‌ಉದ್ಘಾಟಿಸುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ಸುನೀಲ್ ಬೋಸ್ ಉಪಸ್ಥಿತಿ ವಹಿಸುವರು. ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್. ಮಂಜುನಾಥ್, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಮರಿಸ್ವಾಮಿ, ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಹೆಚ್.ವಿ. ಚಂದ್ರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷಮಹಮ್ಮದ್ ಅಸ್ಗರ್ ಮುನ್ನ, ನಗರಸಭೆ ಉಪಾಧ್ಯಕ್ಷ ಮಮತ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಸುರೇಶ್ ಎನ್. ಋಗ್ವೇದಿ ಮುಖ್ಯ ಭಾಷಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

ಅನುದಾನ ವಿತರಣೆ...



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಗ್ರಾಮ ಕಲ್ಯಾಣ ಯೋಜನೆ ಅಡಿಯಲ್ಲಿ ತೆರಕಣಾಂಬಿ ವಲಯದ ಹರವೆ ಹಾಲು ಉತ್ಪಾದಕರ ಸಹಕಾರ ಸಂಘದ ಸಮೂಹ ಶೀಥಲೀಕರಣ ಕೇಂದ್ರಕ್ಕೆ ಧರ್ಮಸ್ಥಳ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರು 2 ಲಕ್ಷ ರೂಪಾಯಿ ಮಂಜೂರು ಮಾಡಿದ್ದು, ತಾಲೂಕು ಯೋಜನಾಧಿಕಾರಿ ಶಶಿಕುಮಾರ್ ಡೇರಿ ಅಧ್ಯಕ್ಷ ಮಲ್ಲಿಕಾರ್ಜುನ್ ಅವರಿಗೆ ವಿತರಣೆ ಮಾಡಿದರು. ಹರವೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಾದಪ್ಪ, ವಿಸ್ತರಣಾಧಿಕಾರಿ ನಾಗೇಶ್, ಮೇಲ್ವಿಚಾರಕ ಹೆಚ್ .ಬಿ ಹರೀಶ್, ಸೇವಾ ಪ್ರತಿನಿಧಿ ಗೀತಾ, ಸಂಘದ ಕಾರ್ಯದರ್ಶಿ ಎಚ್.ಎನ್ .ರುದ್ರೇಶ್, ನಿವೃತ್ತ ಕಾರ್ಯದರ್ಶಿ ನಾಗರಾಜಪ್ಪ, ಸಂಘದ ನಿರ್ದೇಶಕರು, ಹಾಲು ಉತ್ಪಾದಕರು ಗ್ರಾಮಸ್ಥರು ಹಾಜರಿದ್ದರು.

ಪಡಿತರ ಚೀಟಿದಾರರು ಇ–ಕೆವೈಸಿ ಮಾಡಿಸಲು ಮನವಿ

ಚಾಮರಾಜನಗರ, ಮೇ 6– ಜಿಲ್ಲೆಯ ಎಲ್ಲಾ ಪಡಿತರ ಚೀಟಿದಾರರು ಅಂತ್ಯೋದಯ ಮತ್ತು ಪಿಹೆಚ್‌ಹೆಚ್ (ಬಿ.ಪಿ.ಎಲ್) ಪಡಿತರ ಚೀಟಿದಾರರು ಮೊಬೈಲ್ ಸಂಖ್ಯೆಯ ಜೊತೆ ಹತ್ತಿರದ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಪಡಿತರ ಚೀಟಿಯಲ್ಲಿರುವ ಎಲ್ಲಾ ಪಡಿತರ ಚೀಟಿದಾರರ ಬಯೋಮೆಟ್ರಿಕ್ ನೀಡಿ ಇ–ಕೆವೈಸಿ ಮಾಡಿಸಿಕೊಳ್ಳುವಂತೆ ಜಿಲ್ಲಾಧಿಕಾರಿಯವರು ತಿಳಿಸಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಡಿತರ ಚೀಟಿದಾರರು ಜಾತಿ ಪ್ರಮಾಣ ಪತ್ರದ ಆರ್.ಡಿ. ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆಯ ಜೊತೆ ಹತ್ತಿರದ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಪಡಿತರ ಚೀಟಿಯಲ್ಲಿರುವ ಎಲ್ಲಾ ಪಡಿತರರ ಬಯೋಮೆಟ್ರಿಕ್ ನೀಡಿ ಜಾತಿ ಪ್ರಮಾಣ ಪತ್ರದ ಆರ್.ಡಿ ಸಂಖ್ಯೆ ನಮೂದಿಸಿ ಇ–ಕೆವೈಸಿ ಮಾಡಿಸಿಕೊಳ್ಳುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಶ್ರೀ ಸೋಮನಾಥ ಜ್ಯೋತಿರ್ಲಿಂಗದ ದಿವ್ಯ ದರ್ಶನ ಪಡೆದ ಅಪಾರ ಭಕ್ತರು

● ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ದರ್ಶನ ವ್ಯವಸ್ಥೆ ● ಅಯಸ್ಕಾಂತೀಯ ಗುಣವುಳ್ಳ ಐತಿಹಾಸಿಕ ಹಿನ್ನೆಲೆಯ ಜ್ಯೋತಿರ್ಲಿಂಗಗಳ ದರ್ಶನ ಪಡೆದು ಪುನೀತರಾದ ಭಕ್ತ ಸಮೂಹ



ಸೋಮನಾಥ ಜ್ಯೋತಿರ್ಲಿಂಗಗಳು.



ಜ್ಯೋತಿರ್ಲಿಂಗದ ದರ್ಶನ ಪಡೆಯಲು ಕುಳಿತಿರುವ ಭಕ್ತ ಸಮೂಹವನ್ನು ಕಾಣಬಹುದು.

ಮೈಸೂರು,ಮೇ 6(ಪಿಎಂ)– ಗುಜರಾತ್ ರಾಜ್ಯದ ಶ್ರೀ ಸೋಮನಾಥ ಜ್ಯೋತಿರ್ಲಿಂಗ ದೇವಾಲಯದಲ್ಲಿ ಸಾವಿರ ವರ್ಷಗಳ ಹಿಂದೆ ದಾಳಿಯಿಂದ ಹಾನಿಗೊಳಗಾಗಿದ್ದ ಜ್ಯೋತಿರ್ಲಿಂಗ ಅವಶೇಷಗಳು ಸಂರಕ್ಷಿಸಲ್ಪಟ್ಟು, ಎರಡು ಜ್ಯೋತಿರ್ಲಿಂಗ ರೂಪ ಪಡೆದು ತೆರೆಮರೆಯಲ್ಲಿದ್ದವು. ಇದೀಗ ಆ ಎರಡು ಜ್ಯೋತಿರ್ಲಿಂಗಗಳ ದಿವ್ಯ ದರ್ಶನ ಮಂಗಳವಾರ ಮೈಸೂರಿನ ಅಪಾರ ಭಕ್ತರಿಗೂ ಪ್ರಾಪ್ತವಾಯಿತು.

ಅಪರೂಪದ ಆಯಸ್ಕಾಂತೀಯ ಗುಣವುಳ್ಳ ಮತ್ತು ಐತಿಹಾಸಿಕ ಹಿನ್ನೆಲೆಯುಳ್ಳ ಈ ಸೋಮನಾಥ ಜ್ಯೋತಿರ್ಲಿಂಗಗಳ ದರ್ಶನ ಅವಕಾಶವನ್ನು ಭಕ್ತರಿಗೆ ಕಲ್ಪಿಸಲು ಶ್ರೀ ರವಿಶಂಕರ ಗುರೂಜಿ ಅವರ ಆರ್ಟ್ ಆಫ್ ಲಿವಿಂಗ್ ಆಶ್ರಮ ಮುಂದಾಗಿದೆ. ಅಂತೆಯೇ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಮೈಸೂರಿನ ಆರ್ಟ್ ಆಫ್ ಲಿವಿಂಗ್ ಆಶ್ರಮದ ಧ್ಯಾನ ಕೇಂದ್ರದಲ್ಲಿ ಈ ಜ್ಯೋತಿರ್ಲಿಂಗಗಳ ದರ್ಶನಕ್ಕೆ ಇಂದು ಅವಕಾಶ ಕಲ್ಪಿಸಲಾಗಿತ್ತು.

ಬೆಂಗಳೂರು ಆರ್ಟ್ ಆಫ್ ಲಿವಿಂಗ್ ಆಶ್ರಮದ ಶ್ರೀ ವಿಷ್ಣುಪಾದ ಸ್ವಾಮೀಜಿ ಅವರ ನೇತೃತ್ವದಲ್ಲಿ ಈ ಜ್ಯೋತಿರ್ಲಿಂಗಗಳಿಗೆ ವಿಶೇಷ ಪೂಜಾ ವಿಧಿ ವಿಧಾನ ನೆರವೇರಿಸಿ ಬಳಿಕ ಭಕ್ತರಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು. ಇದೇ ವೇಳೆ ಭಕ್ತರನ್ನು ಉದ್ದೇಶಿಸಿ ಮಾತನಾಡಿದ ಶ್ರೀ ವಿಷ್ಣುಪಾದ ಸ್ವಾಮೀಜಿ, ಸೋಮನಾಥ ಜ್ಯೋತಿರ್ಲಿಂಗಗಳ ಐತಿಹಾಸಿಕ ಹಿನ್ನೆಲೆಯನ್ನು ತಿಳಿಸಿದರು.

12 ಜ್ಯೋತಿರ್ಲಿಂಗಗಳಲ್ಲಿ ಮೊದಲ ಜ್ಯೋತಿರ್ಲಿಂಗವೇ 'ಸೋಮನಾಥ ಜ್ಯೋತಿರ್ಲಿಂಗ'. 17 ಬಾರಿ ದೇಶದ ಮೇಲೆ ಘಜ್ನಿ ಮಹಮ್ಮದ್ ದಾಳಿ ಮಾಡಿದ್ದ. ಆ ಮೂಲಕ ದೇಶದ ಸಂಪತ್ತು ದೋಚಿದ್ದಲ್ಲದೆ, ಕೊನೆ ಬಾರಿ ಬಂದಾಗ, ಶ್ರೀ ಸೋಮನಾಥ ಜ್ಯೋತಿರ್ಲಿಂಗ ದೇವಾಲಯದ ಜ್ಯೋತಿರ್ಲಿಂಗವನ್ನು ಭಗ್ನಗೊಳಿಸಿದ. ಅಯಸ್ಕಾಂತೀಯ ಶಕ್ತಿಯಿಂದ ಈ ಜ್ಯೋತಿರ್ಲಿಂಗ ಭೂಸ್ಪರ್ಶ ಇಲ್ಲದೆ ತೇಲುತ್ತಿತ್ತು. ಅಂತಹ ವಿಶೇಷ ಶಿಲೆಯಿಂದ ನಿರ್ಮಾಣವಾದ ಇದನ್ನು ಪೂರ್ಣವಾಗಿ ಭಗ್ನಗೊಳಿಸಿದ ಎಂದು ಅವರು ವಿವರಿಸಿದರು.

ಇದಾದ ಬಳಿಕ ಭಗ್ನಗೊಂಡ ಜ್ಯೋತಿರ್ಲಿಂಗದ ಅವಶೇಷಗಳನ್ನು ದೇವಾಲಯದಲ್ಲಿದ್ದ ಅಗ್ನಿಹೋತ್ರಿಗಳು ಸಂಗ್ರಹಿಸಿದ್ದರು. ಅವರೆಲ್ಲರೂ ತಮ್ಮ ಮೂಲವಾದ ತಮಿಳುನಾಡಿಗೆ ಮರಳಿ ಅಲ್ಲಿ ಲಿಂಗದ ಚೂರುಗಳಿಗೆ ಮತ್ತೆ ಲಿಂಗದ ಆಕಾರ ಕೊಟ್ಟು ಪೂಜಿಸುತ್ತಾ ಬಂದಿದ್ದರು. ಈಗಿರುವಾಗ 100 ವರ್ಷಗಳ ಹಿಂದೆ ಅಗ್ನಿಹೋತ್ರಿ ಮನೆತನದವರು ಕಂಚಿ ಪರಮಾಚಾರ್ಯ ಶ್ರೀ ಚಂದ್ರಶೇಖರ ಸರಸ್ವತಿ ಸ್ವಾಮೀಜಿ ಅವರನ್ನು ಭೇಟಿ ಮಾಡಿ, ಇಷ್ಟು ವರ್ಷಗಳಿಂದ ನಮ್ಮ ವಂಶಸ್ಥರು ಪೂಜಿಸುತ್ತಾ ಬಂದಿದ್ದಾರೆ. ಇದನ್ನು ಏನು ಮಾಡಬೇಕೆಂದು ತೋಚುತ್ತಿಲ್ಲವೆಂದು ಹೇಳಿ, ತಾವೇ ಮಾರ್ಗದರ್ಶನ ನೀಡಬೇಕು ಎಂದು ಕೋರಿದ್ದರು ಎಂದರು.

ಆಗ ಶ್ರೀಗಳು, ಇನ್ನು 100 ವರ್ಷಗಳ ಕಾಲ ಮನೆಯಲ್ಲೇ ಪೂಜಿಸಿ, ಹೊರಗೆ ತರಬೇಡಿ. ಆ ಬಳಿಕ ಶಿವನ ಹೆಸರಿನಲ್ಲಿ ಒಬ್ಬರು ಗುರುಗಳು ಇರುತ್ತಾರೆ. ಅವರಿಗೆ ಇದನ್ನು ಸಮರ್ಪಣೆ ಮಾಡಿ ಮುಂದೆ ಅವರು ನೋಡಿಕೊಳ್ಳುತ್ತಾರೆ ಎಂದು ಸೂಚಿಸಿದ್ದರು. ಅಂತೆಯೇ 100 ವರ್ಷಗಳ ಬಳಿಕ ಈಗಿನ ಕಂಚಿಯ ಆಚಾರ್ಯರ ಬಳಿ ಹೋದ ಅಗ್ನಿಹೋತ್ರಿ ಮನೆತನದ ವಂಶಸ್ಥರು, ಮಾರ್ಗದರ್ಶನ ಕೇಳಿದ್ದರು. ಆಗ ಶ್ರೀಗಳು, ಬೆಂಗಳೂರಿನ ಶ್ರೀ ರವಿಶಂಕರ ಗುರೂಜಿ ಅವರಿಗೆ ಸಮರ್ಪಿಸುವಂತೆ ನಿರ್ದೇಶಿಸಿದ್ದರು ಎಂದು ತಿಳಿಸಿದರು.

ಈ ವರ್ಷದ ಕೊನೆಯಲ್ಲಿ ಸೋಮನಾಥ ದೇವಾಲಯದಲ್ಲಿ ಮತ್ತೆ ಜ್ಯೋತಿರ್ಲಿಂಗ ಪ್ರತಿಷ್ಠಾಪನೆ

ಮೈಸೂರು,ಮೇ 6(ಪಿಎಂ)– ಈ ವರ್ಷದ ಕೊನೆಯಲ್ಲಿ ಸೋಮನಾಥ ದೇವಾಲಯದಲ್ಲಿ ಮತ್ತೆ ಈ ಜ್ಯೋತಿರ್ಲಿಂಗಗಳ ಪ್ರತಿಷ್ಠಾಪನೆಗೆ ಶ್ರೀ ರವಿಶಂಕರ ಗುರೂಜಿ ಸಂಕಲ್ಪ ಮಾಡಿದ್ದಾರೆ ಎಂದು ಶ್ರೀ ವಿಷ್ಣುಪಾದ ಸ್ವಾಮೀಜಿ ತಿಳಿಸಿದರು.



ಈ ಜ್ಯೋತಿರ್ಲಿಂಗಗಳಲ್ಲಿ ಕೇವಲ ಶೇ.2ರಷ್ಟು ಮಾತ್ರ ಕಬ್ಬಿಣದ ಅಂಶ ಇದೆ. ಇಷ್ಟು ಪ್ರಮಾಣದ ಕಬ್ಬಿಣ ಅಂಶದಲ್ಲಿ ಆಯಸ್ಕಾಂತೀಯ ಶಕ್ತಿ ಸೃಷ್ಟಿಸಲು ಸಾಧ್ಯವಿಲ್ಲ. ಕನಿಷ್ಠ ಶೇ.20ರಿಂದ 25ರಷ್ಟು ಕಬ್ಬಿಣದ ಅಂಶ ಒಳಗೊಂಡಿರಬೇಕು. ಅದಾಗ್ಯೂ ಇವು ಆಯಸ್ಕಾಂತೀಯ ಶಕ್ತಿ ಹೊಂದಿದ್ದು, ಇದು ಅಚ್ಚರಿಯಾಗಿದೆ ಎಂದು ಪರೀಕ್ಷೆ ನಡೆಸಿದ ಭೂ ವಿಜ್ಞಾನಿಗಳು ವರದಿ ನೀಡಿದ್ದಾರೆ ಎಂದು ಅವರು ಹೇಳಿದರು.

ಇದು ಭೂಮಿಯ ಅಂಶವಲ್ಲ. ಈ ರೀತಿಯ ಶಿಲೆ ಭೂಮಿಯಲ್ಲಿರುವ ಸಾಧ್ಯತೆ ಇಲ್ಲವೆಂದು ಭೂ ವಿಜ್ಞಾನಿಗಳು ವರದಿ ನೀಡಿದ್ದಾರೆ. ಈ ಎರಡು ಲಿಂಗಗಳನ್ನು ಹತ್ತಿರಕ್ಕೆ ತಂದಾಗ ಚಲನೆ ಹೊಂದುವುದನ್ನು ಕಾಣಬಹುದು. ಅಂದರೆ ಅವುಗಳು ಆಯಸ್ಕಾಂತೀಯ ಶಕ್ತಿ ಹೊಂದಿವೆ ಎಂಬುದು ಸ್ಪಷ್ಟವಾಗುತ್ತದೆ ಎಂದರು.

ಪ್ರಸ್ತುತ ದೇಶದಲ್ಲಿ ಒತ್ತಡ ಹೆಚ್ಚಾಗಿದೆ. ಏನಾಗುತ್ತದೋ ಏನು ಎನ್ನುವಂತಾಗಿದೆ. ವೈಯಕ್ತಿಕ ಸಮಸ್ಯೆಗಳ ನಡುವೆ ಯುದ್ಧದ ಸನ್ನಿವೇಶ ಎದುರಾಗುವ ಸಾಧ್ಯತೆ ಜನರಲ್ಲಿ ಆತಂಕ ಮೂಡಿಸಿದೆ. ಈ ಸನ್ನಿವೇಶದಲ್ಲಿ ಶ್ರದ್ಧೆಯಿಂದ ನಮ್ಮ ಆಚರಣೆಗಳಾದ ಪೂಜೆ, ಜಪವನ್ನು ಬಿಡದೇ ಮಾಡಬೇಕಿದೆ. ನಮ್ಮ ನಡುವಿನ ದ್ವೇಷ ಬದಿಗೊತ್ತಿ ನಮ್ಮಿಂದ ಸಾಧ್ಯವಾದನ್ನು ಮಾಡಲು ಮುಂದಾಗಬೇಕಿದೆ ಎಂದು ಹೇಳಿದರು.

ಇದು ಜ್ಯೋತಿರ್ಲಿಂಗಗಳ ಪೈಕಿ ಮೊದಲನೆಯದು. ಸೋಮನಾಥನೇ ತಮಗೆ ದರ್ಶನ ನೀಡಲು ಇಲ್ಲಿಗೆ ಬಂದಿದ್ದಾನೆ. ಶ್ರೀ ರವಿಶಂಕರ ಗುರೂಜಿಯವರು ಸೋಮನಾಥ ದೇವಾಲಯದಲ್ಲಿ ಮತ್ತೆ ಪ್ರತಿಷ್ಠಾಪನೆ ಮಾಡಬೇಕೆಂದು ಸಂಕಲ್ಪ ಮಾಡಿದ್ದಾರೆ. ಅದಕ್ಕೆ ಮುಂಚಿತವಾಗಿ ಸಾಧ್ಯವಾದಷ್ಟು ಭಾರತದಾದ್ಯಂತ ಪವಿತ್ರ ಜ್ಯೋತಿರ್ಲಿಂಗದ ದಿವ್ಯ ದರ್ಶನ ಯಾತ್ರೆ ನಡೆಸಲು ಮುಂದಾಗಿದ್ದಾರೆ. ಹಾಗಾಗಿ ಇಂದು ಮೈಸೂರಿನಲ್ಲಿ ದರ್ಶನ ವ್ಯವಸ್ಥೆ ಮಾಡಲಾಗಿದೆ. ಇದಷ್ಟೇ ಅಲ್ಲದೆ, ರಾಮನಾಥದಿಂದ ಸೋಮನಾಥದವರೆಗೂ ಜ್ಯೋತಿರ್ಲಿಂಗ ಕ್ಷೇತ್ರಗಳಲ್ಲಿ ಈ ಲಿಂಗಗಳ ಪೂಜೆ ಮಾಡಿ, ವಿವಿಧ ಮಠಾಧಿಪತಿಗಳಿಂದ ಆರತಿ ಪೂಜೆ ಮಾಡಿಸಲಾಗುವುದು ಎಂದು ಹೇಳಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾಜಿ ಮೇಯರ್ ಶಿವಕುಮಾರ್, ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್ ಪ್ರಸಾದ್ ಮತ್ತಿತರರ ಗಣ್ಯರು ಆಶ್ರಮಕ್ಕೆ ಭೇಟಿ ನೀಡಿ ದರ್ಶನ ಪಡೆದರು. ರಾತ್ರಿ 8 ಗಂಟೆವರೆಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಮೈಸೂರು ಆಶ್ರಮದ ಶ್ರೀ ದಿವ್ಯಪಾದ ಸ್ವಾಮೀಜಿ, ಆಶ್ರಮದ ಅಪೆಕ್ಸ್ ಸದಸ್ಯ ಆರ್.ಹೆಚ್.ರವಿಕುಮಾರ್ ಮತ್ತಿತರರು ಹಾಜರಿದ್ದರು.

ಸುತ್ತೂರು ಮಠವೇ 'ಸರ್ವ ಜನಾಂಗದ ಶಾಂತಿಯ ತೋಟ'

● ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್ ● ಮಹಿಳಾ ಸಾಧಕರಿಗೆ ಸನ್ಮಾನ ಸಮಾರಂಭ



ಸಾಧಕ ಮಹಿಳೆಯರಾದ ಶಿಕ್ಷಕಿ ಕಾತ್ಯಾಯಿನಿ, ಸಮಾಜ ಸೇವಕಿ ನಂಜಮ್ಮ ಅವರನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಎಡಿಸಿ ಡಾ.ಪಿ.ಶಿವರಾಜು ನೇತೃತ್ವದಲ್ಲಿ ಸನ್ಮಾನಿಸಲಾಯಿತು.

ಮೈಸೂರು, ಮೇ 6(ಎಸ್‌ಪಿಎನ್)– ತ್ರಿವಿಧ ದಾಸೋಹಕ್ಕೆ ಹೆಸರುವಾಸಿಯಾದ ಮೈಸೂರಿನ ಸುತ್ತೂರು ಮಠ 'ಸರ್ವ ಜನಾಂಗದ ಶಾಂತಿಯ ತೋಟ' ಪರಿಕಲ್ಪನೆಯಲ್ಲಿ ತನ್ನ ಸಾಮಾಜಿಕ ಸೇವಾ ಕಾರ್ಯವನ್ನು ಸಮಾಜಕ್ಕೆ ಸಲ್ಲಿಸುತ್ತಿದೆ ಎಂದು ಕರ್ನಾಟಕ ರಾಜ್ಯ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದ ನ್ಯೂ ಕಾಂತರಾಜ ಅರಸ್ ರಸ್ತೆಯ ಜೆಎಸ್‌ಎಸ್ ಕಾನೂನು ಕಾಲೇಜು ಸಿಲ್ವರ್ ಜೂಬಿಲಿ ಸಭಾಂಗಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ ಸಹಯೋಗದೊಂದಿಗೆ ಮಹಿಳಾ ಸಾಧಕರ ಸನ್ಮಾನಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಈ ಕಾರ್ಯಕ್ರಮಕ್ಕೆ ಬರುವ ಮುನ್ನ ನನ್ನ ಪತಿ ಈ ವಾಕ್ಯವನ್ನು ನಿನ್ನ ಭಾಷಣದಲ್ಲಿ ಅವಕಾಶ ಸಿಕ್ಕರೆ ಉಲ್ಲೇಖಿಸುವಂತೆ ಸಲಹೆ ನೀಡಿದ್ದರು. ಹಾಗಾಗಿ ಸಾಂದರ್ಭಿಕವಾಗಿ ಅವಕಾಶ ಸಿಕ್ಕ ಹಿನ್ನೆಲೆಯಲ್ಲಿ ಉಲ್ಲೇಖಿಸಿದ್ದೇನೆ. ಸುತ್ತೂರು ಮಠ ಹಲವಾರು ವರ್ಷಗಳಿಂದ ಸಾಮಾಜಿಕ ಸೇವೆಯಲ್ಲಿ ತೊಡಗಿದೆ. ಈ ಹಿನ್ನೆಲೆಯಲ್ಲೂ ಹೊರಗಿನವರು ಮೈಸೂರನ್ನು ಗುರುತಿಸುವಿಕೆಯ ಭಾಗವಾಗಿದೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ನೇತೃತ್ವದಲ್ಲಿ ಮತ್ತಷ್ಟು ಸಮಾಜ ಸುಧಾರಣೆ ಹಮ್ಮಿಕೊಂಡು ಮುಂದೆ ಸಾಗುತ್ತಿರುವುದು ಮೆಚ್ಚುಗೆ ವಿಷಯ ಎಂದರು.

ಹೆಣ್ಣು ಮನುಕುಲದ ಉಳಿವಿಗೆ ಕಾರಣ ಕರ್ತಳಾಗುತ್ತಾಳೆ. ಸಾಹಿತ್ಯ, ಸಂಗೀತ, ಕಲೆ, ಕಸೂತಿ ಎಲ್ಲದರಲ್ಲಿಯೂ ಮಹಿಳೆಯರು ಪಾರಂಗತರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ತುಂಬಾ ಸಂಕೀರ್ಣವಾಗಿರುವ ನಮ್ಮ ಕುಟುಂಬವನ್ನು ಅಚ್ಚುಕಟ್ಟಾಗಿ ಮುನ್ನಡೆಸುವುದು ಮಾತ್ರವಲ್ಲದೆ, ಆಡಳಿತ ವ್ಯವಸ್ಥೆಯಲ್ಲೂ ಅದ್ಭುತ ಯಶಸ್ವಿಯಾಗಿ ಹೆಣ್ಣು ನಿರ್ವಹಣೆ ಮಾಡಬಲ್ಲಳು ಎಂದು ಘಟನಾವಳಿಗಳನ್ನು ಉಲ್ಲೇಖಿಸಿದರು.

ಸಮಾಜದಲ್ಲಿ ಮಹಿಳೆಯರ ಪ್ರಾಮುಖ್ಯತೆ ಅರಿವಿದ್ದರೂ ಪುರುಷ ಪ್ರಧಾನ ವ್ಯವಸ್ಥೆ, ತಮ್ಮ ಮಹಿಳೆಯರನ್ನು ಅಧೀನದಲ್ಲಿ ಇಟ್ಟುಕೊಂಡಿದೆ. ಉತ್ತಮ ಬದುಕಿಗಾಗಿ ಆಧುನಿಕ ಶಿಕ್ಷಣ ಪಡೆಯುವುದು ಉತ್ತಮ ಆಯ್ಕೆ. ಸ್ತ್ರೀಯರಿಗೆ, ಸ್ತ್ರೀಯರೇ ಶತ್ರುಗಳು ಎಂದು ಹೇಳಿದವರು ಮಹಿಳೆಯರಲ್ಲ. ಈ ರೀತಿ ಕಾಲಾಂತರದಿಂದ ಹೇಳಿಕೆ ನೀಡಿದವರು ಪುರುಷರು. ಕೆಲವು ವಿಷಯಗಳಲ್ಲಿ ಪುರುಷರು, ಮಹಿಳೆಯರಿಗೆ ನಿನಗೇನು ಗೊತ್ತು ಎಂದು ಛೇಡಿಸುತ್ತಾರೆ. ಮಹಿಳೆಯರಿಗೆ ಪುರುಷರಿಗಿಂತ ಹೆಚ್ಚಿನ ಮಾಹಿತಿ ಮತ್ತು ಜ್ಞಾನವಿದ್ದರೂ ಪುರುಷರು ಅದನ್ನು ಒಪ್ಪಿಕೊಳ್ಳುವುದಿಲ್ಲ ಎಂದರು.

ಮಹಿಳೆಯರು ಶಿಕ್ಷಕರಾಗಿದ್ದರೆ, ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಲ್ಲಿ ಅಪಾರವಾದ ಕೊಡುಗೆಯಿದೆ. ಅದು ಈಗಾಗಲೇ ಸಾಭೀತಾಗಿದೆ. ಮಹಿಳಾ ಸಾಧಕರನ್ನು ಗುರುತಿಸಿ ಸನ್ಮಾನಿಸಬೇಕಾದದ್ದು ಸಮಾಜ ಮತ್ತು ಸಂಘ ಸಂಸ್ಥೆಗಳ ಕರ್ತವ್ಯ. ಹಾಗಾಗಿ ಈ ವೇಳೆ ಮಹಿಳಾ ಶಿಕ್ಷಕರಾದ ಕಾತ್ಯಾಯಿನಿ, ಸಮಾಜ ಸೇವಕಿ ನಂಜಮ್ಮ ಅವರನ್ನು ಸನ್ಮಾನಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು. ಈ ವೇಳೆ ಸುತ್ತೂರು ಶ್ರೀ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ ಸೇರಿದಂತೆ ಇತರರಿದ್ದರು.

ಪಾಕ್ ವ್ಯಕ್ತಿ ವಿವಾಹವಾಗಿರುವ ಮೈಸೂರು ಮಹಿಳೆಗೆ ಸಂಕಷ್ಟ!

ವಾಘಾ ಗಡಿಯಲ್ಲಿ ಪಾಕ್ ಪ್ರವೇಶ ನಿರಾಕರಿಸಿದ ಕಾರಣ ಮೈಸೂರಿಗೆ ವಾಪಸ್ಸು


ಮೈಸೂರು, ಮೇ 6(ಬಿಎಲ್‌ಯು)– ಪಾಕಿಸ್ತಾನದ ವ್ಯಕ್ತಿಯನ್ನು ಮದುವೆಯಾಗಿದ್ದ ಮೈಸೂರಿನ ಮಹಿಳೆ ಕೇಂದ್ರ ಸರ್ಕಾರದ ಆದೇಶದಂತೆ ಪಂಜಾಬ್‌ನ ಅಮೃತ್‌ಸರ್‌ನಲ್ಲಿರುವ ಭಾರತ–ಪಾಕಿಸ್ತಾನದ ಗಡಿ ವಾಘಾ ಮೂಲಕ ಪಾಕಿಸ್ತಾನಕ್ಕೆ ತೆರಳಲು ಅವಕಾಶ ಸಿಗದೆ ಮತ್ತೆ ಮೈಸೂರಿಗೆ ವಾಪಸ್ಸಾಗಿದ್ದಾರೆ.

ಮೈಸೂರಿನ ರಾಜೀವ್‌ನಗರದ ವಾಸಿ ರಂಷಾ, ಕಳೆದ 10 ವರ್ಷದ ಹಿಂದೆ ಪಾಕಿಸ್ತಾನದ ಮೊಹಮ್ಮದ್ ಫಾರೂಕ್ ಎಂಬಾತನನ್ನು ಮದುವೆಯಾಗಿದ್ದರು. ರಂಷಾ ಮತ್ತು ಮೊಹಮ್ಮದ್ ಫಾರೂಕ್ ದಂಪತಿಗೆ ಮೂವರು ಮಕ್ಕಳಿದ್ದಾರೆ.

ಪಾಕಿಸ್ತಾನದಲ್ಲೇ ಜನಿಸಿದ ಮೂರು ಮಕ್ಕಳಿಗೆ ಅಲ್ಲಿನ ಸರ್ಕಾರ ಪೌರತ್ವ ನೀಡಿತ್ತು. ಆದರೆ ಮೂಲತಃ ಭಾರತದವರಾದ ರಂಷಾ ಅವರಿಗೆ ಪೌರತ್ವ ನೀಡಲು ನಿರಾಕರಿಸಿತ್ತು.

ಆದರೆ ಇತ್ತೀಚೆಗೆ ರಂಷಾ ಮತ್ತು ಮೊಹಮ್ಮದ್ ಫಾರೂಕ್ ದಾಂಪತ್ಯದಲ್ಲಿ ಬಿರುಕು ಮೂಡಿತ್ತು. ಪತಿ ಜೊತೆಗಿನ ವಿರಸದ ಹಿನ್ನೆಲೆಯಲ್ಲಿ ರಂಷಾ ಅವರು ತನ್ನ ಮೂವರು ಮಕ್ಕಳೊಂದಿಗೆ ಭಾರತಕ್ಕೆ ಹಿಂತಿರುಗಿ ತವರು ಮನೆ ಮೈಸೂರಿನ ರಾಜೀವ್‌ನಗರದಲ್ಲಿ ನೆಲೆಸಿದ್ದರು.

ಆದರೆ ಪಹಲ್ಗಾಮ್ ಪ್ರಕರಣದ ಹಿನ್ನೆಲೆಯಲ್ಲಿ ಪಾಕಿಸ್ತಾನದ ಪ್ರಜೆಗಳು ಭಾರತ ಬಿಟ್ಟು ಪಾಕಿಸ್ತಾನಕ್ಕೆ ಹೋಗಬೇಕೆಂದು ಕೇಂದ್ರ ಸರ್ಕಾರ ಕಟ್ಟುನಿಟ್ಟಿನ ಆದೇಶ ನೀಡಿದ್ದ ಹಿನ್ನೆಲೆಯಲ್ಲಿ ಮೂವರು ಮಕ್ಕಳೊಂದಿಗೆ ರಂಷಾ ಪಾಕಿಸ್ತಾನಕ್ಕೆ ತೆರಳಲು ನಿರ್ಧರಿಸಿದ್ದರು.



ರಂಷಾ

ಈ ಸಂಬಂಧ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಯಿಂದ ನಿರ್ಗಮನ ಪರವಾನಗಿ ಪಡೆದು ಪಾಕಿಸ್ತಾನಕ್ಕೆ ತೆರಳಲು ವಾಘಾ ಗಡಿಗೆ ಏಪ್ರಿಲ್ 29ರಂದು ಹೋಗಿದ್ದರು. ಆದರೆ ಮೂವರು ಮಕ್ಕಳಿಗೆ ಪೌರತ್ವ ಇದ್ದು, ರಂಷಾಗೆ ಪೌರತ್ವ ಇಲ್ಲದ ಕಾರಣ ಪಾಕಿಸ್ತಾನದ ಅಧಿಕಾರಿಗಳು ರಾಜತಾಂತ್ರಿಕ ಕಾರಣಗಳ ಹಿನ್ನೆಲೆಯಲ್ಲಿ ರಂಷಾ ಅವರನ್ನು ಪಾಕಿಸ್ತಾನ ಪ್ರವೇಶಿಸಲು ಬಿಡಲಿಲ್ಲ. ಆ ವೇಳೆ ಪತಿ ಮನೆಗೆ ಹೋಗಲು ಅವಕಾಶ ನೀಡುವಂತೆ ಪಾಕಿಸ್ತಾನದ ಅಧಿಕಾರಿಗಳ ಬಳಿ ಅಂಗಲಾಚಿದರು. ರಂಷಾ ಹಾಗೂ ಅವರ ಮೂವರು ಮಕ್ಕಳು ವಾಘಾ ಗಡಿಯಲ್ಲಿ ಎರಡು ದಿನ ಕಾದು ಕುಳಿತರು. ಇದೇ ವೇಳೆ ಪತಿ ಮೊಹಮ್ಮದ್ ಫಾರೂಕ್‌ಗೆ ರಂಷಾ ದೂರವಾಣಿ ಕರೆ ಮಾಡಿದಾಗ ಆತನಿಂದಲೂ ಸಕಾರಾತ್ಮಕ ಪ್ರತಿಕ್ರಿಯೆ ಬರಲಿಲ್ಲ.

ಇದರಿಂದ ರಂಷಾ ಅನಿವಾರ್ಯವಾಗಿ ರಾಜೀವ್ ನಗರದ ತವರು ಮನೆಗೆ ವಾಪಸ್ಸಾದರು. ಈಗ ಮಕ್ಕಳೊಂದಿಗೆ ಪಾಕಿಸ್ತಾನದ ಪತಿ ಮನೆ ಸೇರಲು ರಂಷಾ ಅವರು ಪಾಕಿಸ್ತಾನದ ವೀಸಾಗಾಗಿ ಬೆಂಗಳೂರಿನಲ್ಲಿರುವ ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ (ಎಫ್‌ಆರ್ ಆರ್‌ಒ)ಯಲ್ಲಿ ಅರ್ಜಿ ಸಲ್ಲಿಸಿದ್ದು, ವೀಸಾ ಪಡೆಯುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ.

ರಂಷಾ ಅವರು ಪಾಕಿಸ್ತಾನಕ್ಕೆ ತೆರಳಲು ನಿರ್ಗಮನ ಪರವಾನಗಿ ನೀಡಲಾಗಿತ್ತು. ಆದರೆ ರಾಜತಾಂತ್ರಿಕ ಕಾರಣದಿಂದ ಅವರು ಪಾಕಿಸ್ತಾನಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಇದರಿಂದ ವೀಸಾಗಾಗಿ ಅವರು ಬೆಂಗಳೂರಿನಲ್ಲಿರುವ ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ ಸಂಪರ್ಕಿಸಿದ್ದಾರೆ ಎಂದು ಉದಯಗಿರಿ ಪೊಲೀಸ್ ಇನ್ಸ್‌ಪೆಕ್ಟರ್ ಸುಧಾಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪಾಕ್, ಬಾಂಗ್ಲಾ ಪ್ರಜೆಗಳ ಗಡಿಪಾರಿಗೆ ಆಗ್ರಹಿಸಿ ಮೈಸೂರಲ್ಲಿ ಬಿಜೆಪಿ ಪ್ರತಿಭಟನೆ



ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಪಾಕಿಸ್ತಾನಿ ಪ್ರಜೆಗಳನ್ನು ಕೂಡಲೇ ಗಡಿಪಾರು ಮಾಡುವಂತೆ ಆಗ್ರಹಿಸಿ ಮೈಸೂರು ನಗರ ಮತ್ತು ಜಿಲ್ಲಾ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಮೇ 6(ಎಂಟಿವೈ)– ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಪಾಕಿಸ್ತಾನ, ಬಾಂಗ್ಲಾದೇಶದ ಪ್ರಜೆಗಳನ್ನು ಕೂಡಲೇ ಗಡಿಪಾರು ಮಾಡುವಂತೆ ಆಗ್ರಹಿಸಿ ಮೈಸೂರು ನಗರ ಮತ್ತು ಜಿಲ್ಲಾ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ದಾರ್ಥನಗರದ ಹಳೆ ಹಾಲಿನ ಡೈರಿ ಬಳಿಯಿಂದ ನೂತನ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಬಿಜೆಪಿ ಕಾರ್ಯಕರ್ತರು, ಜಿಲ್ಲಾಧಿಕಾರಿ ಕಚೇರಿ ಬಳಿ ಧರಣಿ ನಡೆಸಿ, ಪಾಕ್ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಪಾಕಿಸ್ತಾನಿಯರೇ ಭಾರತ ಬಿಟ್ಟು ತೊಲಗಿ, ಪಹಲ್ಗಾವ್ ದುರ್ಘಟನೆಯನ್ನು ಎಂದಿಗೂ ಮರೆಯುವುದಿಲ್ಲ, ಕ್ಷಮಿಸುವುದೂ ಇಲ್ಲ. ರಾಷ್ಟ್ರದ ಸುರಕ್ಷತೆ ನಮಗೆ ಮೊದಲ ಆದ್ಯತೆ ಎಂದು ಫಲಕ ಹಿಡಿದು ಘೋಷಣೆಗಳನ್ನು ಕೂಗಿದರು.

ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯ ಬಳಿಕ ಕೇಂದ್ರ ಸರ್ಕಾರ ದೇಶದಲ್ಲಿರುವ ಪಾಕ್ ಪ್ರಜೆಗಳನ್ನು ದೇಶದಿಂದ ಗಡಿಪಾರು ಮಾಡುವಂತೆ ರಾಜ್ಯ ಸರ್ಕಾರಗಳಿಗೆ ಆದೇಶ ಹೊರಡಿಸಿದೆ. ಆದರೆ, ರಾಜ್ಯ ಸರ್ಕಾರ ಕೇಂದ್ರದ ಆದೇಶವನ್ನು ಕಡೆಗಣಿಸಿ ಪಾಕಿಸ್ತಾನಿ ಪ್ರಜೆಗಳನ್ನು ಇಲ್ಲಿಯೇ ಇರಿಸಿಕೊಂಡಿದೆ. ಅಮಾಯಕ ಭಾರತೀಯರನ್ನು ಉಗ್ರರು ಗುಂಡಿಟ್ಟು ಕೊಂದಿದ್ದಾರೆ. ಇಂತಹ ಪೈಶಾಚಿಕ ಕೃತ್ಯದಲ್ಲಿ ಪಾಕಿಸ್ತಾನ ಕೈ ಜೋಡಿಸಿದೆ. ಪಾಕಿಸ್ತಾನಕ್ಕೆ ಪಾಠ ಕಲಿಸಬೇಕಾದರೆ ಪಾಕ್ ಪ್ರಜೆಗಳನ್ನು ಹೊರಹಾಕಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆ ಬಳಿಕ ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ಅವರಿಗೆ ಮನವಿ ಪತ್ರ ನೀಡಿದರು. ಈ ಸಂದರ್ಭದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಮೇಯರ್ ಶಿವಕುಮಾರ್, ಬಿಜೆಪಿ ಮುಖಂಡರಾದ ಹೆಚ್.ಜಿ.ಗಿರಿಧರ್, ಜೋಗಿ ಮಂಜು, ಬಿ.ಎಂ.ರಘು, ಶಿವಕುಮಾರ್, ಹೇಮಂತ್‌ಕುಮಾರ್ ಗೌಡ, ರಾಕೇಶ್ ಭಟ್, ಪಾರ್ಥಸಾರಥಿ, ಬಿ.ವಿ.ಮಂಜುನಾಥ್, ಕೇಬಲ್ ಮಹೇಶ್, ಸು.ಮುರುಳಿ, ಗೋಕುಲ್ ಗೋವರ್ಧನ್, ಮಾಧ್ಯಮ ವಕ್ತಾರ ಮಹೇಶ್‌ರಾಜೇ ಅರಸ್, ರಾಕೇಶ್ ಗೌಡ ಇನ್ನಿತರರು ಪಾಲ್ಗೊಂಡಿದ್ದರು.

ನಿತ್ಯ ಸಚಿವ ಕೆ.ವಿ.ಶಂಕರಗೌಡ ಸಮಾಜಸೇವಾ ಪ್ರಶಸ್ತಿ ಪ್ರದಾನ

ವಿದ್ಯಾವಂತರೇ ಸಮಾಜಕ್ಕೆ ಕಂಟಕಪ್ರಾಯರಾಗುವ ಆತಂಕ: ಡಾ.ಯೋಗಣ್ಣ



ಅದಮ್ಯ ರಂಗಶಾಲೆ ವತಿಯಿಂದ ವಿವಿಧ ಕ್ಷೇತ್ರದ ಪ್ರತಿನಿಧಿಗಳಿಗೆ 'ನಿತ್ಯಸಚಿವ ಕೆ.ವಿ.ಶಂಕರಗೌಡ ಸಮಾಜಸೇವಾ ಪ್ರಶಸ್ತಿ' ಪ್ರದಾನ ಮಾಡಿ, ಅಭಿನಂದಿಸಲಾಯಿತು.

ಮೈಸೂರು, ಮೇ 6(ಎಸ್‌ಬಿಡಿ)– ನಮ್ಮ ಪೂರ್ವಜರು ಅಕ್ಷರ ಕಲಿಯದಿದ್ದರೂ ಭಾರತೀಯ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ಮೌಲ್ಯಯುತ ಸಮಾಜ ಕಟ್ಟಿದ್ದರು. ಆದರೆ ಈಗ ವಿದ್ಯಾವಂತರೇ ಸಮಾಜಕ್ಕೆ ಕಂಟಕಪ್ರಾಯವಾಗುವರೇ ಎಂಬ ಆತಂಕ ಸೃಷ್ಟಿಯಾಗಿದೆ ಎಂದು ಮೈಸೂರಿನ ಸುಯೋಗ್ ಆಸ್ಪತ್ರೆ ಅಧ್ಯಕ್ಷರೂ ಆದ ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ ಹೇಳಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಅದಮ್ಯ ರಂಗಶಾಲೆ ವತಿಯಿಂದ ಆಯೋಜಿಸಿದ್ದ 'ಬಾಲಂಗೋಚಿ' ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಹಾಗೂ 'ನಿತ್ಯಸಚಿವ ಕೆ.ವಿ.ಶಂಕರಗೌಡ ಸಮಾಜಸೇವಾ ಪ್ರಶಸ್ತಿ' ಪ್ರದಾನ ಸಮಾರಂಭವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ಹಿಂದೆ ಶಿಕ್ಷಣದ ಕೊರತೆ ಇದ್ದರೂ ಸಮಾಜ ಮೌಲ್ಯಯುತವಾಗಿತ್ತು. ಸತ್ಯ, ನಂಬಿಕೆ, ಪ್ರೀತಿ–ವಿಶ್ವಾಸ ಮೇಳೈಸುತ್ತಿತ್ತು. ನಮ್ಮ ಪೂರ್ವಜರು ಒಡಂಬಡಿಕೆ ವೇಳೆ ಬೇವಿನ ಮರವನ್ನು ಸಾಕ್ಷಿ ಮಾಡಿಕೊಳ್ಳುವಷ್ಟು ಪರಸ್ಪರ ನಂಬಿಕೆ ಉಳಿಸಿಕೊಂಡಿದ್ದರು. ಅವರು ಅಕ್ಷರ ಕಲಿತಿರಲಿಲ್ಲ, ಆದರೆ ಭಾರತೀಯ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ಮೌಲ್ಯಯುತ ಸಮಾಜ ಕಟ್ಟಿದ್ದರು. ಆದರೆ ಇಂದು ಅಕ್ಷರಸ್ಥರು, ವಿದ್ಯಾವಂತರು ಹೆಚ್ಚಾಗಿದ್ದರೂ ಬಹುತೇಕರಲ್ಲಿ ಸಮಾಜದ ಬಗ್ಗೆ ಕಳಕಳಿಯೇ ಇಲ್ಲವಾಗಿದೆ. ಭ್ರಷ್ಟಾಚಾರ, ಸಮಾಜದ್ರೋಹಿ ಕೃತ್ಯ, ಜಾತಿ ಜಾಲದಿಂದ ಒಬ್ಬರನ್ನೊಬ್ಬರು ತುಳಿಯುವುದು, ದ್ವೇಷ, ಅಸೂಯೆಗಳು ಜಾಸ್ತಿಯಾಗಿದೆ. ವಿದ್ಯಾವಂತರೇ ಸಮಾಜಕ್ಕೆ ಕಂಟಕಪ್ರಾಯ ಆಗಬಹುದು ಎಂಬ ಭಯಗ್ರಸ್ಥ ಪರಿಸ್ಥಿತಿ ಉಂಟಾಗಿದೆ. ಶಿಕ್ಷಣ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಗಂಭೀರವಾಗಿ ಆಲೋಚಿಸುವ ಅಗತ್ಯತೆ ನಿರ್ಮಾಣವಾಗಿದೆ ಎಂದರು.

ಶಿಕ್ಷಣ ಮೌಲ್ಯಯುತ ಬದುಕಿನ ಪಾಠ ಕಲಿಸದಿರುವ ಸಂದರ್ಭದಲ್ಲಿ ಮಕ್ಕಳಿಗೆ ಇಂತಹ ಬೇಸಿಗೆ ಶಿಬಿರಗಳು ಅವಶ್ಯವಾಗಿವೆ. ನಾಟ್ಯ, ನಟನೆಯಂತಹ ಕಲೆಗಳಿಂದ ಮನಸ್ಸಿನ ಕೇಂದ್ರೀಕೃತ ಶಕ್ತಿ ಹೆಚ್ಚುವುದರ ಜೊತೆಗೆ ಆರೋಗ್ಯ ವೃದ್ಧಿಗೆ ಸಹಾಯವಾಗುತ್ತದೆ. ಮೊಬೈಲ್, ಟಿವಿಗಳಿಂದ ಮಾಹಿತಿ ಸಂಕಷ್ಟ ಸೃಷ್ಟಿಯಾಗಿದ್ದು, ಇದರಿಂದ ಮಕ್ಕಳನ್ನು ಹೊರತಂದು ಮೌಲ್ಯ ಶಿಕ್ಷಣವನ್ನು ನೀಡಬೇಕಿದೆ. ಸಕಾರಾತ್ಮಕ ಚಿಂತನೆ, ಆತ್ಮವಿಶ್ವಾಸ, ಸಾಮರಸ್ಯ, ಪ್ರೀತಿ, ಸಹಕಾರ ಮೇಲುಗೈ ಸಾಧಿಸಬೇಕಿದೆ. ಈ ಮೂಲಕ ಮಕ್ಕಳಲ್ಲಿ ಉತ್ತಮ ವ್ಯಕ್ತಿತ್ವ ರೂಪಿಸಬೇಕಿದೆ ಎಂದು ಆಶಿಸಿದರು.

ಪದವೀಧರರಾಗಿದ್ದ ಶಂಕರಗೌಡರಿಗೆ ಉನ್ನತ ಹುದ್ದೆಯ ಅವಕಾಶವಿತ್ತಾದರೂ ಅವರು ಸಮಾಜ ಸೇವೆಯನ್ನು ಆಯ್ಕೆ ಮಾಡಿಕೊಂಡು, ಅದರಲ್ಲೇ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಸ್ವಾತಂತ್ರ್ಯದ ನಂತರ ಸಹಕಾರ ಸಂಘಟಿತ ಕ್ರಾಂತಿಯನ್ನು ಹುಟ್ಟುಹಾಕಿದರು. ಶಿಕ್ಷಣ ಸೇವೆ ಜೊತೆಗೆ ರಂಗಭೂಮಿ ಹಾಗೂ ಸಾಹಿತ್ಯ ಕ್ಷೇತ್ರಕ್ಕೂ ಕೊಡುಗೆ ನೀಡಿದರು. ರಾಷ್ಟ್ರಕವಿ ಕುವೆಂಪು ಅವರ ಸಾಹಿತ್ಯವನ್ನು ಶಂಕರಗೌಡರು ಹಾಗೂ ದೇ.ಜವರೇಗೌಡರು ಮನೆ ಮನೆಗೆ ತಲುಪಿಸಿದ್ದನ್ನು ಮರೆಯುವಂತಿಲ್ಲ. ನಾಲ್ಕು ವರ್ಷ ಶಿಕ್ಷಣ ಸಚಿವರಾಗಿದ್ದ ಅವರಿಗೆ ಹೆಚ್ಚು ಅವಕಾಶ ಸಿಕ್ಕಿದ್ದರೆ ರಾಜ್ಯ ಸುಭಿಕ್ಷವಾಗಿರುತ್ತಿತ್ತು. ಈ ಮಹನೀಯರ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಸಂತಸದ ವಿಚಾರ. ಅವರ ಆದರ್ಶಗಳು ಜೀವಂತವಾಗಿದ್ದರೆ ಮಾತ್ರ ಪ್ರಶಸ್ತಿಯ ಗೌರವ ಹೆಚ್ಚಲಿದೆ ಎಂದರು.

ಪ್ರಶಸ್ತಿ ಪ್ರದಾನ: ಹಿರಿಯ ಪತ್ರಕರ್ತ ಸಿ.ಕೆ.ಮಹೇಂದ್ರ, ಶ್ರೀರಂಗಪಟ್ಟಣ ಡಿವೈಎಸ್ಪಿ ಶಾಂತಮಲ್ಲಪ್ಪ, ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ರಾಜ್ಯ ಖಜಾನೆ ಇಲಾಖೆ ಹೆಚ್ಚುವರಿ ನಿರ್ದೇಶಕಿ ಶ್ರೀಮತಿ ವಿ.ಭಾಗ್ಯಲಕ್ಷ್ಮಿ, ಕೆಐಎಡಿಬಿ ಅಧ್ಯಕ್ಷ ಕೆ.ಬಿ.ಲಿಂಗರಾಜು, ಯುವ ಉದ್ಯಮಿ ಸಂಜಯ್ ಹೆಬ್ಬಾರ್ ಹಾಗೂ ರಿಯಾಲಿಟಿ ಶೋ ಹಾಗೂ ಸಿನಿಮಾ ಬರಹಗಾರ ಲೋಕೇಶ್ ಗೌಡ ಮಂಡ್ಯ ಅವರಿಗೆ 'ಕೆ.ವಿ.ಶಂಕರಗೌಡ ಸಮಾಜಸೇವಾ ಪ್ರಶಸ್ತಿ'ಯನ್ನು ಮಂಗಳೂರು ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಅಧೀಕ್ಷಕ ಡಾ.ಎ.ಎನ್.ಪ್ರಕಾಶ್ ಗೌಡ ಪ್ರದಾನ ಮಾಡಿದರು. ಈ ಹಿಂದೆ 'ಗಾಂಧಿ ಸದ್ಭಾವನಾ ಪ್ರಶಸ್ತಿ'ಗೆ ಭಾಜನರಾಗಿದ್ದ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಆಡಳಿತಾಧಿಕಾರಿ ಡಾ.ಎ.ಟಿ.ಶಿವರಾಮ್ ಅವರಿಗೆ ಇದೇ ವೇಳೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಮಾರಂಭದಲ್ಲಿ ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್ ಗೌಡ, ಅದಮ್ಯ ರಂಗಶಾಲೆ ಗೌರವ ಕಾರ್ಯದರ್ಶಿ ಹಾಗೂ ಸಾಹಿತಿ ಟಿ.ಸತೀಶ್ ಜವರೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಬುಧವಾರ 7 ಮೇ 2025

ಬಿಎಂಸಿ ಕೇಂದ್ರ ನಿರ್ಮಾಣಕ್ಕೆ ಭೂಮಿ ಪೂಜೆ



ಬಿಎಂಸಿ ಕೇಂದ್ರ ನಿರ್ಮಾಣಕ್ಕೆ ಶಾಸಕ ಅನಿಲ್ ಭೂಮಿ ಪೂಜೆ ನಡೆಸಿದರು

ಸರಗೂರು, ಮೇ 6– ಹಾಲು ಉತ್ಪಾದಕರು ಗುಣಮಟ್ಟದ ಹಾಲು ಉತ್ಪಾದನೆಗೆ ಹೆಚ್ಚು ಒತ್ತು ನೀಡಬೇಕು ಎಂದು ಶಾಸಕ ಅನಿಲ್ ಸಲಹೆ ನೀಡಿದರು.

ತಾಲೂಕಿನ ಕೊತ್ತೇಗಾಲ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನೂತನ ಬಿಎಂಸಿ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಬಿಎಂಸಿ ಕೇಂದ್ರ ಸ್ಥಾಪನೆಗೆ ಮೈಮುಲ್ ನಿರ್ದೇಶಕ ಕೆ.ಈರೇಗೌಡರು ಕಾರಣ. ಈ ಹಿಂದೆ 19 ಸಂಘಗಳಿದ್ದವು. ಈರೇಗೌಡರು ಮೈಮುಲ್ ನಿರ್ದೇಶಕರಾದ ಬಳಿಕ ಆ ಸಂಖ್ಯೆ 182ಕ್ಕೆ ಏರಿದೆ. ಮುಂದಿನ ದಿನಗಳಲ್ಲಿ ಅವರು ಅಧ್ಯಕ್ಷರಾದರೇ ಇನ್ನೂ ಹೆಚ್ಚಿನ ಡೇರಿಗಳನ್ನು ತೆರೆಯುತ್ತಾರೆ. ಸಂಘಕ್ಕೆ ನಾನು ಅನುದಾನ ನೀಡುತ್ತೇನೆ. ಬಿಎಂಸಿ ಕೇಂದ್ರ ನಿರ್ಮಾಣದ ಬಳಿಕ ಹಾಲು ಉತ್ಪಾದಕರು ಗುಣಮಟ್ಟದ ಹಾಲು ಉತ್ಪಾದನೆಗೆ ಹೆಚ್ಚು ಒತ್ತು ನೀಡಿದರೆ ಮಾತ್ರ ಸಂಘ ಲಾಭಗಳಿಸಲು ಸಾಧ್ಯ. ಆ ನಿಟ್ಟಿನಲ್ಲಿ ಹಾಲು ಉತ್ಪಾದಕರು ಸಂಘದಿಂದ ದೊರೆಯುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಮೈಮುಲ್ ನಿರ್ದೇಶಕ ಕೆ.ಈರೇಗೌಡ ಮಾತನಾಡಿ, ಇಲ್ಲಿನ ಡೇರಿಗೆ 3 ಲಕ್ಷ ನೀಡಲಾಗಿದೆ. ಮತ್ತೆ 2 ಲಕ್ಷ ನೀಡಲಾಗುವುದು. ಅಲ್ಲದೇ ಸಂಘದ ಸದಸ್ಯರು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಅನುದಾನ ಪಡೆದು ಉತ್ತಮ ಬಿಎಂಸಿ ಕಟ್ಟಡ ನಿರ್ಮಿಸಿಕೊಳ್ಳಬೇಕು. ಹೈನುಗಾರಿಕೆ ಲಕ್ಷಾಂತರ ಜನರ ಬದುಕಿಗೆ ಆಸರೆಯಾಗಿದೆ. ಬೇರೆಲ್ಲಾ ಕ್ಷೇತ್ರಗಳಲ್ಲಿ ಸಮಸ್ಯೆ ಎದುರಾದರೂ ಹೈನುಗಾರಿಕೆ ಕ್ಷೇತ್ರ ಮಾತ್ರ ರೈತನ ಕೈ ಹಿಡಿದಿದೆ. ರೈತರ ಹಿತಕ್ಕಾಗಿ ಒಕ್ಕೂಟ ಸದಾ ನಿಮ್ಮ ಜೊತೆಯಲ್ಲಿ ಇರುತ್ತದೆ ಎಂದರು.

ಈ ವೇಳೆ ಮೈಮುಲ್ ನಿರ್ದೇಶಕಿ ದಾಕ್ಷಾಯಿಣಿ, ಜಿಪಂ ಮಾಜಿ ಸದಸ್ಯ ಪಿ.ರವಿ, ಎಸ್.ಎಸ್.ಪ್ರಭುಸ್ವಾಮಿ, ಬಸವರಾಜು, ಮುಖಂಡರಾದ ಶಂಭುಲಿಂಗನಾಯಕ, ಕುರುಬ ಸಮಾಜದ ಜಿಲ್ಲಾಧ್ಯಕ್ಷ ಶಿವಪ್ಪ, ತಾಲೂಕು ಯೂತ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜು, ಗ್ರಾಪಂ ಮಾಜಿ ಸದಸ್ಯ ಮಂಜುನಾಥ್, ಗುರುಸ್ವಾಮಿ, ಚಿಕ್ಕಣ್ಣ, ಗುಣಪಾಲ್, ಉಮೇಶ್, ಕೊತ್ತೇಗಾಲ ಡೈರಿ ಅಧ್ಯಕ್ಷ ರತ್ನಯ್ಯ, ಉಪಾಧ್ಯಕ್ಷೆ ಗಂಗಮ್ಮ, ನಿರ್ದೇಶಕರಾದ ಮಂಜುನಾಥ್, ಕೆಂಡಗಣ್ಣಸ್ವಾಮಿ, ಬೀರೇಗೌಡ, ಪುಟ್ಟೇಗೌಡ, ಶಿವು, ಮಹದೇವಮ್ಮ, ಸಿಇಓ ಮಹದೇವಸ್ವಾಮಿ, ಮೈಮುಲ್ ಮಾರ್ಗ ವಿಸ್ತರಣಾಧಿಕಾರಿ ರಾಮಪ್ಪಬಾರ್ಕಿ ಇನ್ನಿತರರಿದ್ದರು.

ಅಂಬೇಡ್ಕರ್ ಸಂವಿಧಾನ ನಮ್ಮೆಲ್ಲರಿಗೂ ರಕ್ಷಾ ಕವಚ

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅಭಿಪ್ರಾಯ



ಕಾರ್ಯಕ್ರಮವನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು.

ಹುಣಸೂರು, ಮೇ 6– ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನ ನಮಗೆ ಎಲ್ಲಾ ಸಮಯದಲ್ಲೂ ರಕ್ಷಾ ಕವಚ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ತಾಲೂಕಿನ ರತ್ನಪುರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘ, ಮಹಿಳಾ ಒಕ್ಕೂಟ, ಸ್ವಸಹಾಯ ಸಂಘಗಳು ಹಾಗೂ ಗ್ರಾಮಸ್ಥರು ಸೇರಿ ಏರ್ಪಡಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಯುವಕ, ಯುವತಿಯರು ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಎಲ್ಲದಕ್ಕೂ ಕಾನೂನುಗಳಿವೆ. ಆದರೆ ಇಂದಿನ ದಿನಗಳಲ್ಲಿ ಅಂಬೇಡ್ಕರ್ ಕೊಟ್ಟ ಮೀಸಲಾತಿ, ಸಂವಿಧಾನದಿಂದ ಅಧಿಕಾರಕ್ಕೆ ಬಂದು ಉತ್ತಮ ಸ್ಥಾನ ಪಡೆದು ವೇದಿಕೆಯಲ್ಲಿ ನಿಂತು ಸಂವಿಧಾನ ವಿರೋಧಿಸುವವ ಹಾಗೂ ತೆಗೆದುಹಾಕಿ ಎಂದು ಹೇಳುವವರನ್ನು ನೇಣಿಗೆ ಹಾಕುವ ಕಾನೂನು ಜಾರಿಯಾಗಬೇಕಿದೆ. ಆಗ ಮಾತ್ರ ಸಂವಿಧಾನದ ರಕ್ಷಣೆ ಸಾಧ್ಯ. ಮುಂದಿನ ದಿನಗಳಲ್ಲಿ ನನಗೆ ಅವಕಾಶ ಸಿಕ್ಕರೆ ಇಂತಹ ಕಾನೂನುಗಳನ್ನು ಜಾರಿಗೆ ತರಲು ಶ್ರಮಿಸುತ್ತೇನೆ ಎಂದರು.

ಮಹಿಳೆಯರಿಗೆ ಸಂವಿಧಾನದ ಮೂಲಕ ರಕ್ಷಣೆ ನೀಡಿದವರು ಅಂಬೇಡ್ಕರ್. ಮಹಿಳಾ ಹಕ್ಕುಗಳಿಗಾಗಿ ಹೋರಾಡಿದರು. ಅದಕ್ಕಾಗಿ ನೀವು ನಾವು ಬದಲಾದರೆ ಮಾತ್ರ ಸಮಾಜ ಸುಧಾರಣೆ ಆಗುತ್ತದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ವಿಸ್ತೀರ್ಣ ಕೇಂದ್ರದ ಉಪನ್ಯಾಸಕಿ ಡಾ.ಟಿ.ಪದ್ಮಶ್ರೀ ಮಾತನಾಡಿ, ಪ್ರಸ್ತುತ ಯುವಕ, ಯುವತಿಯರಲ್ಲಿ ದೇಶ, ಸಮುದಾಯ, ಗ್ರಾಮಗಳ ಪ್ರಗತಿ ಹಾಗೂ ಸಮಸ್ಯೆಗಳ ಬಗ್ಗೆ ಅರಿವು ಇಲ್ಲದಂತಾಗಿದೆ. ದೇವಸ್ಥಾನಗಳ ಗಂಟೆಗಳಿಗಿಂತ ಶಾಲೆಯಲ್ಲಿನ ಗಂಟೆಗಳ ಬಗ್ಗೆ ಆಸಕ್ತಿ ಹೆಚ್ಚಾಗಬೇಕು. ಕೋಮುವಾದಿಗಳು ಅಂಬೇಡ್ಕರ್ ವಿಚಾರಗಳನ್ನು ವಿರೋಧಿಸುತ್ತಾರೆ. ಅಂಬೇಡ್ಕರ್, ಬುದ್ಧ, ಬಸವಣ್ಣ ಅವರ ವಿಚಾರಧಾರೆಗಳನ್ನು ಯಾರಿಂದಲೂ ನಾಶ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಇವರ ವಿಚಾರಗಳನ್ನು ಯುವ ಪೀಳಿಗೆ ತಿಳಿದುಕೊಳ್ಳಬೇಕು ಎಂದರು.

ಈ ವೇಳೆ ವಕೀಲ ಬಿ.ಆರ್.ರಂಗಸ್ವಾಮಿ ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಉಪನ್ಯಾಸ ನೀಡಿದರು. ಮಾಜಿ ಮಹಾಪೌರ ಪುರುಷೋತ್ತಮ್, ದಲಿತ ಹೋರಾಟಗಾರ ಪುಟ್ಟಸ್ವಾಮಿ, ಅಂಬೇಡ್ಕರ್ ಯುವಕರ ಸಂಘದ ಅಧ್ಯಕ್ಷ ವಿಜೇಂದ್ರ ಕುಮಾರ್, ಹೋರಾಟ ಗಾರ ಹರಿಹರ ಆನಂದಸ್ವಾಮಿ ಮಾತನಾಡಿದರು.

ಜಿಪಂ ಮಾಜಿ ಸದಸ್ಯರಾದ ಡಿ.ಕೆ.ಕುನ್ನೇಗೌಡ, ಶಿವಗಾಮಿ, ತಾಪಂ ಮಾಜಿ ಸದಸ್ಯರಾದ ಆರ್.ಪ್ರಭಾಕರ್, ಅಜ್ಗರ್ ಪಾಷ, ಗ್ರಾಪಂ ಅಧ್ಯಕ್ಷರಾದ ಪದ್ಮಮ್ಮ, ನಾಗೇಶ ರಾವ್ ಮೆಂಗಾಣಿ, ದೇವರಾಜ್, ಉಪಾಧ್ಯಕ್ಷರಾದ ಶಾಂತಿ, ಮಣಿ, ಸದಸ್ಯರಾದ ನಂದೀಶ್, ಮುಬಾರಕ್ ಭಾನು, ಮನುಕುಮಾರ್, ರಾಮಬೋವಿ, ಮುಜೀಬ್, ಗೌರಮ್ಮ, ರತ್ನಮ್ಮ, ಭಾರತಿ, ಮಾಜಿ ಸದಸ್ಯರಾದ ಶಿವಣ್ಣ, ಶರವಣ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಬಸವಲಿಂಗಯ್ಯ, ಅಕ್ರಮ ಸಕ್ರಮ ಸಮಿತಿ ಸದಸ್ಯ ಕುಮಾರ್, ಸಾಯಿ ಪಬ್ಲಿಕ್ ಸ್ಕೂಲ್ ಕಾರ್ಯದರ್ಶಿ ದಿಲೀಪ್, ವಿಎಸ್ಎಸ್ ಪ್ರಥಮ ದರ್ಜೆ ಕಾಲೇಜಿನ ಮಲ್ಲಿಕಾರ್ಜುನಸ್ವಾಮಿ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.

ತಿ.ನರಸೀಪುರ ಪುರಸಭೆಗೆ ಮೂವರು ನಾಮನಿರ್ದೇಶಿತರ ನೇಮಕ

ಪುರಸಭೆಯಿಂದ ಸದಸ್ಯರಿಗೆ ಸ್ವಾಗತ, ಅಭಿನಂದನೆ



ನಾಮನಿರ್ದೇಶಿತ ಸದಸ್ಯರನ್ನು ಅಭಿನಂದಿಸಲಾಯಿತು.

ತಿ.ನರಸೀಪುರ, ಮೇ 6– ಇಲ್ಲಿನ ಪುರಸಭೆಗೆ ಮೂವರನ್ನು ನಾಮನಿರ್ದೇಶಿತ ಸದಸ್ಯರನ್ನಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ ಪುರಸಭೆ ವತಿಯಿಂದ ನೂತನ ಸದಸ್ಯರಿಗೆ ಸ್ವಾಗತ ಕೋರಿ ಅಭಿನಂದಿಸಲಾಯಿತು.

ವರುಣ ಕ್ಷೇತ್ರದಿಂದ ನಾಮನಿರ್ದೇಶಿತ ಸದಸ್ಯರನ್ನಾಗಿ ತಿರುಮಕೂಡಲಿನ ಆರ್.ಚೇತನ್, ಮುದ್ದಬೀರನಹುಂಡಿ ಗುರುಸ್ವಾಮಿ ಹಾಗೂ ತ್ರಿವೇಣಿ ನಗರದ ಕೆ.ಗಣೇಶ್ ಅವರನ್ನು ಪುರಸಭೆ ನಾಮ ನಿರ್ದೇಶಿತ ಸದಸ್ಯರನ್ನಾಗಿ ನೇಮಕ ಮಾಡಲಾಗಿದ್ದು, ಅಧ್ಯಕ್ಷೆ ವಸಂತ ಬಿ.ಶ್ರೀಕಂಠ ಅವರ ಅಧ್ಯಕ್ಷತೆಯಲ್ಲಿ ಪುರಸಭೆ ಸಭಾಂಗಣದಲ್ಲಿ ಮಂಗಳವಾರ ನಡೆದ ಅಭಿನಂದನಾ ಹಾಗೂ ಸ್ವಾಗತ ಕಾರ್ಯಕ್ರಮದಲ್ಲಿ ಮೂವರು ನೂತನ ಸದಸ್ಯರಿಗೆ ಸ್ವಾಗತ ಕೋರಲಾಯಿತು.

ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ ಮಾತನಾಡಿ, ಪುರಸಭೆಯ ಸದಸ್ಯರಿಗೆ ಏಳೂವರೆ ವರ್ಷ ಅಧಿಕಾರ ದೊರೆತಿದೆ. ಇಷ್ಟು ವರ್ಷಗಳ ಆಡಳಿತ ನಡೆಸಿದ್ದೀರಿ. ಪುರಸಭೆಗೆ ಅನುದಾನ ಇದೆ ಅಭಿವೃದ್ಧಿ ಕೆಲಸ ಆಗುತ್ತಿಲ್ಲ ಎಂಬ ಆರೋಪ ಇದೆ. ತಿ.ನರಸೀಪುರ ಸುತ್ತಮುತ್ತಲ ಜಿಲ್ಲೆ ಹಾಗೂ ಅಂತರ ರಾಜ್ಯಕ್ಕೂ ಸಂಪರ್ಕ ಕಲ್ಪಿಸುವ ಜಂಕ್ಷನ್ ಆಗಿದ್ದು, ಹೆಚ್ಚಿನ ಅಭಿವೃದ್ಧಿ ಕಾರ್ಯ ಆಗಬೇಕಿದೆ. ಪುರಸಭೆಗೆ ಸಿಎಂ ಸಿದ್ದರಾಮಯ್ಯನವರ ಕೃಪಾ ಕಟಾಕ್ಷ ಇದೆ. ಅವರು ಎಲ್ಲಿವರೆಗೆ ಮುಖ್ಯಮಂತ್ರಿ ಆಗಿರುತ್ತಾರೋ ಅಲ್ಲಿವರೆಗೆ ಪಟ್ಟಣವನ್ನು ಯಾವ ರೀತಿ ಬೇಕಾದರೂ ಅಭಿವೃದ್ಧಿ ಪಡಿಸಬಹುದು. ಅವರು ಅಧಿಕಾರದಿಂದ ಕೆಳಗಿಳಿದರೆ ಅಭಿವೃದ್ಧಿಗೆ ಅನುದಾನದ ಕೊರತೆ ಎದುರಾಗಲಿದೆ. ಹಾಗಾಗಿ ಅಲ್ಲಿವರೆಗೆ ಸದಸ್ಯರೆಲ್ಲಾ ಒಟ್ಟಾಗಿ ಆಗಬೇಕಾದ ಅಭಿವೃದ್ಧಿ ಕೆಲಸಗಳ ಕಡೆಗೆ ಗಮನ ಹರಿಸಬೇಕೆಂದು ಸಲಹೆ ನೀಡಿದರು.

ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್ ರಾಜ್ ಮಾತನಾಡಿ, ಪುರಸಭೆ ಅಭಿವೃದ್ಧಿಗೆ ಸಿಎಂ ಸಿದ್ದರಾಮಯ್ಯ, ಸಚಿವ ಮಹದೇವಪ್ಪ, ಸಂಸದ ಸುನೀಲ್ ಬೋಸ್ ಹಾಗೂ ಎಂಎಲ್‌ಸಿ ಡಾ.ಯತೀಂದ್ರಕೋಟ್ಯಾಂತರ ರೂ. ಅನುದಾನ ನೀಡಿದ್ದಾರೆ. ಅನುದಾನ ಸದ್ಬಳಕೆಯಾಗಿದೆ. ಪಟ್ಟಣ ಶೇ.60 ರಷ್ಟು ಅಭಿವೃದ್ಧಿ ಕಂಡಿದೆ. ಪಟ್ಟಣದ ಲಿಂಕ್ ರಸ್ತೆ, ಎಣ್ಣೆ ಮಿಲ್ ರಸ್ತೆ ಹಾಗೂ ತಾಲೂಕು ಕಚೇರಿ ರಸ್ತೆ ಅಭಿವೃದ್ಧಿ ಆಗಬೇಕಿದೆ. ಈಗ ಮತ್ತೆ ಸಚಿವ ಮಹದೇವಪ್ಪ ವಿಶೇಷ ಅನುದಾನದಡಿ 5 ಕೋಟಿ ಹಾಗೂ ಸಿದ್ದರಾಮಯ್ಯ 12 ಕೋಟಿ ನೀಡಿದ್ದು ಪಟ್ಟಣದ ಸಮಗ್ರ ಅಭಿವೃದ್ಧಿ ಆಗಲಿದೆ.

ತಾಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಎಂ.ರಮೇಶ್ ಮಾತನಾಡಿದರು. ಈ ವೇಳೆ ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್, ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ, ಸದಸ್ಯ ಮೆಡಿಕಲ್ ನಾಗರಾಜು, ಹುಣಸೂರು ಗ್ರಾಪಂ ಅಧ್ಯಕ್ಷ ನಿಂಗರಾಜು, ಕಸಬಾ ಪಿಎಸಿಎಸ್ ಅಧ್ಯಕ್ಷ ಡನಾಯಕನಪುರ ಮಲ್ಲಣ್ಣ, ಉಪಾಧ್ಯಕ್ಷ ಫಣೀಶ್ ಕುಮಾರ್, ಮಾಜಿ ಸದಸ್ಯ ಗುರುಪ್ರಸಾದ್, ಗ್ರಾಪಂ ಮಾಜಿ ಉಪಾಧ್ಯಕ್ಷ ಪುಟ್ಟು, ಮುಖಂಡರಾದ ಏಜೆಂಟ್ ಮಂಜುನಾಥ್, ದಿವಾಕರ್, ಆಲಗೂಡು ಪಿಎಸಿಎಸ್ ನಿರ್ದೇಶಕ ಎಂ.ಕೆ.ಸಹದೇವ, ತಾಲೂಕು ಕುರುಬರ ಸಂಘದ ನಿರ್ದೇಶಕ ಅರುಣ್ ಕುಮಾರ್ ಗೌಡ, ಚಂದ್ರೇಗೌಡ, ಮರಿಸ್ವಾಮಿ, ಮುಕುಂದ, ಟಿ.ಎಂ.ನಾಗಣ್ಣ, ಸುರೇಶ್, ಅಮಾಸೇಗೌಡ, ನಾಗರಾಜು, ಚಂದ್ರಶೇಖರ್, ಪರಶಿವ, ಬಸವಣ್ಣ ಇದ್ದರು.

> ಸರ್ಕಾರದಿಂದ ನಾಮ ನಿರ್ದೇಶಿತ ಸದಸ್ಯರಾಗಿ ನಮ್ಮ ನೇಮಕವಾಗಿದೆ. ಪಟ್ಟಣದ ಅಭಿವೃದ್ಧಿ ದೃಷ್ಟಿಯಿಂದ ನಾವು ಮೂವರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ. ಚುನಾಯಿತ ಸದಸ್ಯರು ಹಾಗೂ ಪುರಸಭೆ ಅಧಿಕಾರಿ ವರ್ಗದವರ ಸಹಕಾರ ನಮಗೆ ಬಹು ಮುಖ್ಯ. ಪಟ್ಟಣದ ಅಭಿವೃದ್ಧಿ ಹಿತದೃಷ್ಟಿಯಿಂದ ನಮ್ಮ ಸಲಹೆಗಳನ್ನು ಪರಿಗಣಿಸುವಂತಾಗಬೇಕು. ನಮಗೆ ದೊರಕಿರುವ ಅಧಿಕಾರದಲ್ಲಿ ಇತಿ ಮಿತಿಯೊಳಗೆ ಪುರಸಭೆ ಅಭಿವೃದ್ಧಿಗೆ ಹಾಗೂ ಸಾರ್ವಜನಿಕರಿಗೆ ಆಗಬಹುದಾದ ಯಾವುದೇ ಕೆಲಸ ಕಾರ್ಯ ಮಾಡಲು ನಾವು ಬದ್ಧರಾಗಿದ್ದೇವೆ. ಪುರಸಭೆ ಹಿರಿಯ ಸದಸ್ಯರ ಮಾರ್ಗದರ್ಶನ ನಮಗೆ ದೊರಕುವಂತಾಗಬೇಕು. ಈ ವೇಳೆ ನಮ್ಮ ನೇಮಕಕ್ಕೆ ಕಾರಣರಾದ ಸಿಎಂ ಸಿದ್ದರಾಮಯ್ಯ, ಸಚಿವ ಮಹದೇವಪ್ಪ, ಸಂಸದ ಸುನೀಲ್ ಬೋಸ್ ಹಾಗೂ ಎಂಎಲ್ ಸಿ ಡಾ.ಯತೀಂದ್ರ ಅವರಿಗೆ ಕೃತಜ್ಞರಾಗಿದ್ದೇವೆ.
>
> – ಗುರುಸ್ವಾಮಿ, ಚೇತನ್, ಕೆ.ಗಣೇಶ್, ನೂತನ ನಾಮನಿರ್ದೇಶಿತ ಸದಸ್ಯರು.

ಕಾಂಗ್ರೆಸ್‌ನಿಂದ ಉಪ್ಪಾರ ಸಮುದಾಯ ಕಡೆಗಣನೆ

ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸದಿರಲು ಮುಖಂಡರ ನಿರ್ಧಾರ



ನಂಜನಗೂಡಲ್ಲಿ ಉಪ್ಪಾರ ಸಮುದಾಯದ ಮುಖಂಡರ ಸಭೆ ನಡೆಯಿತು.

ನಂಜನಗೂಡು, ಮೇ 6– ಕಾಂಗ್ರೆಸ್ ವರಿಷ್ಠರು ಯಾವುದೇ ರಾಜಕೀಯ ಸ್ಥಾನಮಾನ ನೀಡದೆ ವಂಚಿಸುವ ಜೊತೆಗೆ ಕಾಂಗ್ರೆಸ್ ಕಚೇರಿಯಲ್ಲಿ ಭಗೀರಥ ಜಯಂತಿ ಆಚರಿಸದೆ ಉಪ್ಪಾರ ಸಮುದಾಯ ಕಡೆಗಣಿಸಿರುವುದರಿಂದ ಕಾಂಗ್ರೆಸ್ ಪಕ್ಷದ ಯಾವ ಕಾರ್ಯಕ್ರಮಗಳಿಗೂ ಸಮುದಾಯದ ಮುಖಂಡರು ಭಾಗಿಯಾಗಬಾರದು ಎಂದು ನಿರ್ಧಾರ ಕೈಗೊಳ್ಳಲಾಗಿದೆ ಎಂದು ಉಪ್ಪಾರ ಸಮುದಾಯದ ತಾಲೂಕು ಮಾಜಿ ಅಧ್ಯಕ್ಷ ಹೆಚ್.ಎಸ್.ಮೂಗಶೆಟ್ಟಿ ತಿಳಿಸಿದರು.

ಮಂಗಳವಾರ ನಗರದ ಉಪ್ಪಾರ ಸಮುದಾಯ ಭವನದಲ್ಲಿ ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡಿರುವ ಸಮುದಾಯದ ಮುಖಂಡರು ಮತ್ತು ಜನಪ್ರತಿನಿಧಿಗಳ ಸಭೆ ನಡೆಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರು–ಚಾಮರಾಜನಗರ ಭಾಗದಲ್ಲಿ ಅತೀ ಹೆಚ್ಚು ಉಪ್ಪಾರ ಸಮುದಾಯದವರಿದ್ದಾರೆ. ಅಲ್ಲದೇ ನಂಜನಗೂಡು ಕ್ಷೇತ್ರದಲ್ಲಿ 35 ಸಾವಿರಕ್ಕಿಂತಲೂ ಹೆಚ್ಚು ಜನಸಂಖ್ಯೆ ಇದ್ದು ಕ್ಷೇತ್ರದಲ್ಲಿ 3ನೇ ಸ್ಥಾನದಲ್ಲಿ ದ್ದೇವೆ. ಆದರೂ ಕಾಂಗ್ರೆಸ್ ವರಿಷ್ಠರು ಮತ್ತು ಶಾಸಕರು ನಮ್ಮ ಸಮುದಾಯದವರಿಗೆ ಯಾವುದೇ ರಾಜಕೀಯ ಸ್ಥಾನಮಾನ ನೀಡದೆ ಮತ ಬ್ಯಾಂಕ್‌ಗಳಾಗಿ ಉಪಯೋಗಿಸಿಕೊಂಡು ಅನ್ಯಾಯ ವೆಸಗುತ್ತಿದ್ದಾರೆ. ಜೊತೆಗೆ ಕಾಂಗ್ರೆಸ್ ಕಚೇರಿಯಲ್ಲಿ ಹಲವು ವರ್ಷಗಳಿಂದ ಎಲ್ಲಾ ಮಹನೀಯರ ಜಯಂತಿ ಆಚರಿಸುವುದು ವಾಡಿಕೆ. ಈ ಬಾರಿ ಶಾಸಕ ದರ್ಶನ್ ಅವರು ಬೇರೊಂದು ದಿನ ಅದ್ದೂರಿಯಾಗಿ ಮಹರ್ಷಿ ಭಗೀರಥ ಜಯಂತಿ ಆಚರಣೆ ನಡೆಸಲು ತೀರ್ಮಾನಿಸಿದ್ದರು. ಆದರೆ ಜಯಂತಿಯಂದು ಕಾಂಗ್ರೆಸ್ ಕಚೇರಿಯಲ್ಲಿ ಅವರ ಭಾವಚಿತ್ರಕ್ಕೆ ಕನಿಷ್ಟ ಪೂಜೆ ಸಲ್ಲಿಸುವ ಕೆಲಸ ಮಾಡದೆ ಮಹರ್ಷಿ ಭಗೀರಥರಿಗೆ ಅಗೌರವ ತೋರಿದ್ದಾರೆ. ಹೀಗಾಗಿ ಅವರು ಅದ್ದೂರಿಯಾಗಿ ಜಯಂತಿ ಆಚರಿಸುವುದು ಬೇಡ. ನಮ್ಮ ಸಮುದಾಯದ ಮುಖಂಡರೇ ಚಂದಾ ಎತ್ತಿ ಮಹರ್ಷಿ ಭಗೀರಥ ಜಯಂತಿಯನ್ನು ಅದ್ದೂರಿಯಾಗಿ ನಡೆಸುತ್ತೇವೆ. ಜೊತೆಗೆ ಸಮುದಾಯದ ಮುಖಂಡರಿಗೆ ರಾಜಕೀಯ ಸ್ಥಾನಮಾನ ಸಿಗುವವರೆಗೂ ಕಾಂಗ್ರೆಸ್ ಪಕ್ಷದ ಯಾವ ಕಾರ್ಯಕ್ರಮಗಳಲ್ಲೂ ಭಾಗಿಯಾಗುವುದಿಲ್ಲ ಎಂದು ಸಭೆಯಲ್ಲಿ ನಿರ್ಣಯಿಸಲಾಗಿದೆ ಎಂದರು.

ಮುಖಂಡ ಮಹದೇವು ಮಾತನಾಡಿದರು. ಸಭೆಯಲ್ಲಿ ಜಿಪಂ ಮಾಜಿ ಸದಸ್ಯ ಕೆ.ಬಿ.ಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಮುದ್ದುಮಾದಶೆಟ್ಟಿ, ಸಮುದಾಯದ ಹಾಗೂ ಕಾಂಗ್ರೆಸ್ ಮುಖಂಡರಾದ ರಾಜು, ರಮೇಶ್, ಮಹದೇವಸ್ವಾಮಿ, ಗೋವಿಂದರಾಜು, ಶ್ರೀನಿವಾಸ್, ಬೆಳ್ಳಶೆಟ್ಟಿ, ಶಿರಮಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಮಹದೇವಶೆಟ್ಟಿ, ಗ್ರಾಪಂ ಸದಸ್ಯರಾದ ಮುದ್ದುಮಾದಶೆಟ್ಟಿ, ಜವರಾಜು, ಹರೀಶ್, ನಂಜಪ್ಪ, ರಾಘವೇಂದ್ರ, ಕಾಂಗ್ರೆಸ್ ಪಕ್ಷದ ತಾಲೂಕು ಅಧ್ಯಕ್ಷ ವಿಜಯಕುಮಾರ್ ಸೇರಿದಂತೆ ಹಲವರಿದ್ದರು.

ಕಾರ್ಮಿಕರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಶಿಬಿರದಲ್ಲಿ ಕಾರ್ಮಿಕರು ಆರೋಗ್ಯವನ್ನು ತಪಾಸಣೆ ಮಾಡಿಸಿಕೊಂಡರು.

ತಿ.ನರಸೀಪುರ, ಮೇ 6– ಪಟ್ಟಣದ ಖಾಸಗಿ ಬಸ್ ನಿಲ್ದಾಣ ಬಳಿಯ ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಕಾರ್ಮಿಕರು ವೈದ್ಯರಿಂದ ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

ಶಿಬಿರದಲ್ಲಿ ನೋಂದಾಯಿತ ಕಾರ್ಮಿಕರು ನೇತ್ರ ಸೇರಿದಂತೆ ಬಿಪಿ, ಶುಗರ್ ಅಲ್ಲದೇ ಇನ್ನಿತರ ವೈದ್ಯಕೀಯ ತಪಾಸಣೆ ಮಾಡಿಸಿಕೊಂಡು ಸ್ಥಳದಲ್ಲೇ ಚಿಕಿತ್ಸೆ ಪಡೆದರು. ಕಾರ್ಮಿಕ ಮಂಡಳಿ ವೈದ್ಯರು ಹಾಗೂ ಸಿಬ್ಬಂದಿ ಕಾರ್ಮಿಕರ ಆರೋಗ್ಯ ತಪಾಸಣೆ ನಡೆಸಿದರು.

ಸಂಘದ ಜಿಲ್ಲಾಧ್ಯಕ್ಷ ನಂಜುಂಡಸ್ವಾಮಿ ಮಾತನಾಡಿ, ರಾಜ್ಯಾಧ್ಯಕ್ಷ ಪಿ.ರಾಜು ಅವರ ಮಾರ್ಗದರ್ಶನದಲ್ಲಿ ಜಿಲ್ಲಾ ಮತ್ತು ತಾಲೂಕು ಸಮಿತಿಯಿಂದ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ದುಡಿಮೆಯನ್ನೇ ನಂಬಿರುವ ಅಸಂಘಟಿತ ಕಾರ್ಮಿಕರು ಸಂಘದ ಸದಸ್ಯರಾಗಿ ನೋಂದಾಯಿಸಿಕೊಂಡು ಕಾರ್ಮಿಕ ಇಲಾಖೆ ಕಾಲಕಾಲಕ್ಕೆ ನೀಡುವ ಸರ್ಕಾರದ ಸೌಲಭ್ಯಗಳು ಹಾಗೂ ವಿಮಾ ಸೌಲಭ್ಯಗಳನ್ನು ಕುಟುಂಬದ ಕಲ್ಯಾಣಕ್ಕೆ ಬಳಸಿಕೊಳ್ಳಬೇಕೆಂದು ಸಲಹೆ ನೀಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೋಮಣ್ಣ, ತಾಲೂಕು ಅಧ್ಯಕ್ಷ ಮಲ್ಲೇಶ್ ಚೌಹಳ್ಳಿ, ಉಪಾಧ್ಯಕ್ಷ ಸಿ.ದಯಾನಂದ, ಭುಣಿ ತುಂಬಲ, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಹಾಗೂ ಸಂಘಟನೆ ಪದಾಧಿಕಾರಿಗಳು ಇದ್ದರು.

ಜನಗಣತಿ ವೇಳೆ ಮಾದಿಗ ಎಂದು ನಮೂದಿಸಿ



ಚಕೋಡನಹಳ್ಳಿ ಗ್ರಾಪಂ ಅಧ್ಯಕ್ಷೆ ರಾಜೇಶ್ವರಿ ಮಾತನಾಡಿದರು.

ಹೆಚ್.ಡಿ.ಕೋಟೆ, ಮೇ 6– ಒಳ ಮೀಸಲಾತಿ ಜಾತಿ ಜನಗಣತಿ ವೇಳೆ ಕ್ರಮ ಸಂಖ್ಯೆ 61ರಲ್ಲಿ ಮಾದಿಗ ಎಂದು ನಮೂದಿಸಬೇಕು ಎಂದು ಚಕೋಡನಹಳ್ಳಿ ಗ್ರಾಪಂ ಅಧ್ಯಕ್ಷೆ ರಾಜೇಶ್ವರಿ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕವಾಗಿ ತುಳಿತಕ್ಕೊಳಗಾದ ಜಾತಿಗಳಲ್ಲಿ ಮೊದಲ ಸ್ಥಾನದಲ್ಲಿರುವುದು ನಮ್ಮ ಮಾದಿಗ ಸಮುದಾಯ. ಸುಮಾರು 30 ಇಂದ 35 ವರ್ಷಗಳ ಸತತ ಹೋರಾಟದ ಫಲವಾಗಿ ಸುಪ್ರೀಂ ಕೋರ್ಟ್ ತೀರ್ಪಿನಂತೆ ನ್ಯಾಯಮೂರ್ತಿ ಡಾ.ಹೆಚ್.ಎನ್.ನಾಗಮೋಹನ ದಾಸ್ ಅವರ ಏಕ ಸದಸ್ಯ ವಿಚಾರಣಾ ಆಯೋಗದ ನಿರ್ದೇಶನದಂತೆ ಒಳ ಮೀಸಲಾತಿ ಒದಗಿಸಲು ಒಂದು ಶುಭ ಗಳಿಗೆ ಕೂಡಿ ಬಂದಿದೆ ಎಂದರು.

ಮುಖಂಡರಾದ ಪವಿತ್ರ ಮಾತನಾಡಿ, ಸಿಎಂ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಜಾತಿಗಣತಿ ಮಾಡಿ ನಿಖರ ಮಾಹಿತಿ ಸಂಗ್ರಹಿಸಿ ಒಳ ಮೀಸಲಾತಿ ಸೌಲಭ್ಯ ಕಲ್ಪಿಸುವ ಸಲುವಾಗಿ ಗಣತಿದಾರರನ್ನು ನೇಮಿಸಿ ಮನೆ ಬಾಗಿಲಿಗೆ ಕಳುಹಿಸಲಿದೆ. ಈ ವೇಳೆ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಇತರ ಯಾವುದೇ ಜಾತಿಯನ್ನು ಇದುವರೆಗೂ ನಮೂದಿಸಿಕೊಂಡಿರುವ ಮಾದಿಗ ಸಮಾಜದ ಬಂಧುಗಳು ಗಣತಿದಾರರು ಬಂದಾಗ ಅವರಿಗೆ ನಿಮ್ಮ ಮೂಲ ಜಾತಿಯಾದ ಮಾದಿಗ ಎಂದು ಹೇಳಿ ಕ್ರಮ ಸಂಖ್ಯೆ 61ರಲ್ಲಿ ನಮೂದಿಸಲು ತಿಳಿಸಿ ಎಂದು ಮನವಿ ಮಾಡಿದರು.

ಮೇ 17 ರವರೆಗೆ ತಮ್ಮ ಮನೆ ಬಾಗಿಲಿಗೆ ಬಂದು ಮಾಹಿತಿ ಕಲೆ ಹಾಕುವುದು ಒಂದೆಡೆಯಾದರೆ, ಮೇ 18 ರಿಂದ 21 ರವರೆಗೆ ಮತಗಟ್ಟೆ ಶಿಬಿರಗಳನ್ನು ಏರ್ಪಡಿಸಿ ಜನಗಣತಿ ಮಾಡುತ್ತಾರೆ. ನಗರ ಪ್ರದೇಶದಲ್ಲಿ ನೆಲೆಸಿರುವ ಮಾದಿಗ ಸಮುದಾಯದವರು ಅನಿವಾರ್ಯ ಕಾರಣಗಳಿಂದ ತಮ್ಮ ಜಾತಿಯನ್ನು ತಿಳಿಸಲು ಸಂಕೋಚವೆನಿಸಿದರೆ ಮೇ 19 ರಿಂದ ಮೇ 21 ವರೆಗೆ ಶಿಬಿರಗಳಲ್ಲಿ ಏರ್ಪಡಿಸಿರುವ ಸರ್ವೇ ಸಮಯದಲ್ಲಿ ನಿಮ್ಮ ಜಾತಿ ತಿಳಿಸಿ ಹಾಗೂ ಅಲ್ಲಿ ಕೂಡ ಸಂಕೋಚವೆನಿಸಿದರೆ ಆನ್‌ಲೈನ್‌ನಲ್ಲಿ ಸ್ವಯಂ ಘೋಷಣೆ ಮಾಡಿಕೊಳ್ಳಲು ಜಾತಿ ಪ್ರಮಾಣ ಪತ್ರದ ಆರ್‌ಡಿ ನಂಬರ್ ಮೂಲಕ ಸ್ವತಃ ತಾವೇ ತಮ್ಮ ಜಾತಿ ಘೋಷಣೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ ಎಂದರು.

ಈ ವೇಳೆ ಪುರಸಭಾ ಸದಸ್ಯೆ ಶಾಂತಮ್ಮ, ಸರಗೂರು ಪಪಂ ಸದಸ್ಯರಾದ ಸಣ್ಣತಾಯಮ್ಮ, ಪವಿತ್ರ, ನಾಗರಾಜು, ಪ್ರಸಾದ್, ಶಿವಯ್ಯ, ಸೇರಿದಂತೆ ಇತರರಿದ್ದರು.

ಶ್ರೀಯೋಗಾನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ



ಶ್ರೀಯೋಗಾನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಸಾಲಿಗ್ರಾಮ, ಮೇ 6– ಪಟ್ಟಣದ ಇತಿಹಾಸ ಪ್ರಸಿದ್ಧ ಶ್ರೀಯೋಗಾನರಸಿಂಹ ಸ್ವಾಮಿ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವದ ಮೊದಲ ದಿನ ಅಂಕುರಾರ್ಪಣ ಹೋಮ ಹಾಗೂ ಉತ್ಸವ, 2ನೇ ದಿನ ಯಾಗ ಶಾಲಾ ಪ್ರವೇಶ, 3ನೇ ದಿನ ಹೂವಿನ ಚಪ್ಪರದ ಉತ್ಸವ, 4ನೇ ದಿನ ಕಲ್ಯಾಣೋತ್ಸವ, 5ನೇ ದಿನ ಹೂ ಬಾಣೋತ್ಸವ, 6ನೇ ದಿನ ನಡೆದ ಬ್ರಹ್ಮ ರಥೋತ್ಸವ ಬಳ್ಳೂರು ರಸ್ತೆ ಹೊಸ ಬೀದಿ ಬ್ರಾಹ್ಮಣರ ಬೀದಿ ಚುಂಚ ನಕಟ್ಟೆ ರಸ್ತೆ ಮೂಲಕ ರಥಬೀದಿಯಲ್ಲಿ ಸಾಗಿತು. ನವಜೋಡಿ ಹೂ ಜವನ ಎಸೆದರು. ಸಾವಿರಾರು ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ದೇವಸ್ಥಾನ ಮುಂಭಾಗದಲ್ಲಿ ಮಕ್ಕಳ ಆಟಿಕೆಗಳು, ಮಹಿಳೆಯರ ಆಲಂಕಾರಿಕ ಹಾಗೂ ಗೃಹೋಪಯೋಗಿ ವಸ್ತುಗಳ ಅಂಗಡಿಗಳು ಕಣ್ಮನ ಸೆಳೆದವು.

7ನೇ ದಿನ ಪಲ್ಲಕ್ಕಿ ಉತ್ಸವ, 8ನೇ ದಿನ ತೆಪ್ಪೋತ್ಸವ ಹಾಗೂ 9ನೇ ದಿನ ಹನುಮಂತೋತ್ಸವದೊಂದಿಗೆ ಪೂಜಾ ಕಾರ್ಯಗಳು ಮುಕ್ತಾಯವಾಗಲಿದೆ ಎಂದು ಪ್ರಧಾನ ಅರ್ಚಕ ಶ್ರೀನಿವಾಸ್ ಅಯ್ಯಂಗಾರ್ ತಿಳಿಸಿದರು. ಸಿಪಿಐ ಕೃಷ್ಣರಾಜ್ ಹಾಗೂ ಸಿಬ್ಬಂದಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಂಡಿದ್ದರು. ಶಾಸಕ ಡಿ.ರವಿ ಶಂಕರ್, ದೇವಸ್ಥಾನದ ಧರ್ಮದರ್ಶಿ ಅಂಜನಿಗೌಡ, ಸಿಬ್ಬಂದಿ ಶಿವಣ್ಣೇಗೌಡ ನರಸಿಂಹೇಗೌಡ, ಕೃಷ್ಣೇಗೌಡ ಸೇರಿದಂತೆ ಇತರರಿದ್ದರು.

ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಜಾತಿಗಣತಿ ಸಮೀಕ್ಷೆ ವಿಳಂಬ

ಅಧಿಕಾರಿಗಳ ತರಾಟೆ ತೆಗೆದುಕೊಂಡ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ



ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ತಿ.ನರಸೀಪುರ, ಮೇ 6– ತಾಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಎಡಗೈ ಮಾದಿಗ ಸಮಾಜಕ್ಕೆ ಹೆಚ್ಚಿನ ಪ್ರಾತಿನಿಧ್ಯ ಸಿಗಲಿದೆ ಎಂಬ ಕಾರಣಕ್ಕೆ ಜಾತಿಗಣತಿ ಸಮೀಕ್ಷೆ ವಿಳಂಬ ಮಾಡಲಾಗುತ್ತಿದೆ ಎಂದು ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಆರೋಪಿಸಿದರು.

ರಾಜ್ಯಾದ್ಯಂತ ಪರಿಶಿಷ್ಟ ಜನಾಂಗದವರ ಜಾತಿ ಗಣತಿ ಕಾರ್ಯ ಸೋಮವಾರದಿಂದ ಆರಂಭವಾಗಿದ್ದರೂ, ಮುಖ್ಯಮಂತ್ರಿಗಳ ಕ್ಷೇತ್ರದಲ್ಲೇ ಗಣತಿ ಆರಂಭಿಸದೇ ಅಧಿಕಾರಿಗಳು ಷಡ್ಯಂತ್ರ ಮಾಡುತ್ತಿದ್ದಾರೆ ಎಂದು ಆರೋಪಿಸಿ ಬಿ.ಮರಯ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ಭೇಟಿ ನೀಡಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ನಾಗಮೋಹನ್ ದಾಸ್ ಸಮಿತಿಯಿಂದ ನಡೆಯುತ್ತಿರುವ ಪ.ಜಾತಿ ಜಾತಿ ಗಣತಿ ನಿನ್ನೆಯಿಂದಲೇ ಆರಂಭವಾಗಿದೆಯಾದರೂ ತಾಲೂಕಿನಲ್ಲಿ ಸಮೀಕ್ಷೆ ಕಾರ್ಯ ಆರಂಭವಾಗಿಲ್ಲ. ಇದರಿಂದ ಕೆರಳಿದ ಮರಯ್ಯ ಬಿಇಓ ಕಚೇರಿಯಲ್ಲಿ ಸಮೀಕ್ಷೆ ಕಾರ್ಯಕ್ಕೆ ಶಿಕ್ಷಕರನ್ನು ನಿಯೋಜಿಸುತ್ತಿದ್ದ ಕೊಠಡಿಗೆ ತೆರಳಿ ಬಿಇಓ ಶಿವಮೂರ್ತಿ ಹಾಗೂ ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್ ಅವರನ್ನು ಸಮೀಕ್ಷೆ ವಿಳಂಬಕ್ಕೆ ಕಾರಣ ಕೇಳಿದ ವೇಳೆ ಅಧಿಕಾರಿಗಳಿಂದ ಸಮರ್ಪಕ ಉತ್ತರ ಬಾರದ ಹಿನ್ನೆಲೆಯಲ್ಲಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಅಧಿಕಾರಿಗಳು ನ್ಯಾಯಯುತವಾಗಿ ಸಮೀಕ್ಷೆ ಕಾರ್ಯಕ್ಕೆ ಶಿಕ್ಷಕರನ್ನು ನಿಯೋಜಿಸುತ್ತಿಲ್ಲ. ನಿನ್ನೆಯಿಂದಲೇ ಸಮೀಕ್ಷೆ ಆರಂಭವಾಗಿದೆ. ಆದರೆ ಇಲ್ಲಿ ಮಂಗಳವಾರ ಮಧ್ಯಾಹ್ನ ಒಂದು ಗಂಟೆಯಾದರೂ ಸಿಬ್ಬಂದಿಗೆ ಸಮೀಕ್ಷೆ ಕಾರ್ಯಕ್ಕೆ ಬೇಕಾದ ಪರಿಕರಗಳನ್ನು ನೀಡದೇ ವಿಳಂಬ ನೀತಿ ಅನುಸರಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಭೈರಾಪುರ ಗ್ರಾಮದ ಮಾದಿಗ ಸಮುದಾಯದ ನೂರಾರು ಮಂದಿ ಸಮೀಕ್ಷೆಗಾಗಿ ಮನೆ ಮುಂದೆ ಕಾದು ಕುಳಿತಿದ್ದಾರೆ. ಆದರೆ ಯಾವೊಬ್ಬ ಸಿಬ್ಬಂದಿ ಮನೆ ಕಡೆ ಬಂದಿಲ್ಲ. ಜನ ಗಣತಿ ವೇಳೆ ಮಾದಿಗ ಜನಾಂಗ ಹೆಚ್ಚಿನ ಸಂಖ್ಯೆಯಲ್ಲಿ ಜಾತಿ ನಮೂದಿಸುತ್ತಾರೆ. ಹಾಗಾಗಿ ಅವರಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಗಲಿದೆ ಎಂಬ ಕಾರಣಕ್ಕೆ ವಿಳಂಬವಾಗಿ ಸಮೀಕ್ಷೆ ನಡೆಸುವಂತೆ ಸಮಾಜ ಕಲ್ಯಾಣ ಇಲಾಖೆಯಿಂದ ಸೂಚನೆ ಬಂದಿದೆ ಎಂದು ಅವರು ಅನುಮಾನ ವ್ಯಕ್ತಪಡಿಸಿದರು.

ಸಿಬ್ಬಂದಿ ನಿಯೋಜನೆ ವಿಳಂಬಕ್ಕೆ ಕಾರಣ ಕೇಳಿದರೆ ತಹಸೀಲ್ದಾರ್ ಹಾಗೂ ಬಿಇಓ ಇಲ್ಲಸಲ್ಲದ ಕಾರಣ ಹೇಳುತ್ತಾರೆ. ಸಮೀಕ್ಷೆ ಕಾರ್ಯಕ್ಕೆ ಹೋಗಲು ಸಿಬ್ಬಂದಿ ಸಿದ್ಧರಿದ್ದರೂ ಅಧಿಕಾರಿಗಳು ಮೇಲ್ಮಟ್ಟದ ಅಧಿಕಾರಿಗಳ ಆದೇಶ ಪಾಲಿಸಿ ಸಿಬ್ಬಂದಿಗೆ ಪರಿಕರ ನೀಡುತ್ತಿಲ್ಲ. ಹೀಗಿದ್ದರೂ ಬಿಇಓ ಶಿವಮೂರ್ತಿ 12 ದಿನದಲ್ಲಿ ಜನಗಣತಿ ಸಮೀಕ್ಷೆ ಮುಗಿಸಿಕೊಡುತ್ತೇವೆ ಎಂದು ತಲೆಬುಡ ಇಲ್ಲದ ಹೇಳಿಕೆ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಕ್ಷೇತ್ರದಲ್ಲಿ ಮಾದಿಗ ಜನಾಂಗವನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ. ಸರ್ವೆ ವಿಳಂಬ ಮಾಡಿ ಗಣತಿಯಲ್ಲಿ ಮಾದಿಗ ಸಮುದಾಯದವರನ್ನು ಕಡಿಮೆ ತೋರಿಸುವ ಹುನ್ನಾರ ನಡೆಯುತ್ತಿದೆ. ಹಾಗಾಗಿ ಜನಗಣತಿ ಕಾರ್ಯಕ್ಕೆ ವಿಳಂಬ ನೀತಿ ಅನುಸರಿಸುತ್ತಿರುವ ಬಿಇಓ ಶಿವಮೂರ್ತಿ ಹಾಗೂ ತಹಶೀಲ್ದಾರ್ ಟಿ.ಜೆ.ಸುರೇಶ್ ಆಚಾರ್ ಅವರನ್ನು ಸಸ್ಪೆಂಡ್ ಮಾಡಬೇಕು. ಇಲ್ಲದಿದ್ದಲ್ಲಿ ಮಾದಿಗ ಸಮುದಾಯ ತಹಸೀಲ್ದಾರ್, ಬಿಇಓ ಕಚೇರಿ ಎದುರು ಪ್ರತಿಭಟನೆ ನಡೆಸಲಿದೆ ಎಂದು ಎಚ್ಚರಿಕೆ ನೀಡಿದರು.

> ಸೋಮವಾರದಿಂದ ರಾಜ್ಯಾದ್ಯಂತ ಜನಗಣತಿ ಆರಂಭವಾಗಿದೆ ಆದರೂ ತಾಲೂಕಿಗೆ ಜನಗಣತಿ ಮಾಡಲು ಬೇಕಾದ ಪರಿಕರಗಳು ಬಂದಿಲ್ಲದ ಕಾರಣ ಒಂದು ದಿನ ವಿಳಂಬವಾಗಿದೆ. ನಾಗಮೋಹನ ದಾಸ್ ಸಮಿತಿಯ ಪ್ರತಿ ಸಹ ನಮಗೆ ಈಗಷ್ಟೆ ತಲುಪಿದೆ. ಸಮೀಕ್ಷೆ ಕಾರ್ಯಕ್ಕೆ ಸಿಬ್ಬಂದಿ ನಿಯೋಜನೆ ಕಾರ್ಯ ಭರದಿಂದ ನಡೆದಿದೆ. ಒಂದು ದಿನ ವಿಳಂಭವಾಗಿದೆಯಾದರೂ ನಿಗದಿತ ಸಮಯಕ್ಕೆ ಸಮೀಕ್ಷೆ ಕಾರ್ಯ ಪೂರ್ಣ ಗೊಳಿಸಿಕೊಡಲಾಗುತ್ತದೆ –ಟಿ.ಜೆ.ಸುರೇಶ್ ಆಚಾರ್, ತಹಸೀಲ್ದಾರ್.

ಜಯಪುರ ಆಸ್ಪತ್ರೆಗೆ ಹೈಟೆಕ್ ಬೆಡ್ ಕೊಡುಗೆ



ಮೈಸೂರು ತಾಲೂಕು ಜಯಪುರ ಸಮುದಾಯ ಆರೋಗ್ಯ ಕೇಂದ್ರಕ್ಕೆ ಸಮಾಜ ಸೇವಕ ಜಿ.ಸಿ.ವೆಂಕಟೇಶ್ 23 ಸಾವಿರ ರೂ. ಮೌಲ್ಯದ ಹೈಟೆಕ್ ಬೆಡ್ ಕೊಡುಗೆ ನೀಡಿದರು. ಈ ವೇಳೆ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಗಾಯಿತ್ರಿ ಹಾಗೂ ವೈದ್ಯರು, ಸಿಬ್ಬಂದಿ ಇದ್ದರು.

ಪುಟ್ಟರಾಜು ನಿಧನ



ಹೆಚ್.ಡಿ.ಕೋಟೆ, ಮೇ 6– ತಾಲೂಕಿನ ಕೊಲ್ಲೇಗೌಡನಹಳ್ಳಿ ಗ್ರಾಮದ ನಿವಾಸಿ ಪುಟ್ಟರಾಜು(45) ಮಂಗಳವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಸ್ವಗ್ರಾಮದ ಸಾರ್ವಜನಿಕ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಐಪಿಎಲ್ ಹಂಗಾಮ

ಮುಂಬೈ ವಿರುದ್ಧ ಗುಜರಾತ್‌ಗೆ ರೋಚಕ ಜಯ



ಮುಂಬೈ, ಮೇ 6– ಮಳೆಬಾಧಿತ ಪಂದ್ಯದಲ್ಲಿ ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಸಂಘಟಿತ ಪ್ರದರ್ಶನ ನೀಡಿದ ಗುಜರಾತ್ ಟೈಟಾನ್ಸ್ ಮುಂಬೈ ಇಂಡಿಯನ್ಸ್ ವಿರುದ್ಧ ಡಿಎಲ್‌ಎಸ್ ನಿಯಮದ ಪ್ರಕಾರ 3 ವಿಕೆಟ್‌ಗಳ ರೋಚಕ ಜಯ ಸಾಧಿಸಿದೆ.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ಮಂಗಳವಾರ ಸಂಜೆ ನಡೆದ ಪಂದ್ಯದಲ್ಲಿ ಮುಂಬೈ ನೀಡಿದ 156 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಗುಜರಾತ್ 14 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 107 ರನ್ ಗಳಿಸಿದ್ದ ವೇಳೆ ಮಳೆ ಸುರಿಯಲಾರಂಭಿಸಿತು. ನಂತರ ಆಟ ಮುಂದುವರೆದು 18 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 132 ರನ್ ಗಳಿಸಿದ್ದ ವೇಳೆ ಮತ್ತೆ ಮಳೆ ಆರಂಭವಾಯಿತು. ಈ ವೇಳೆ ಪಂದ್ಯವನ್ನು 19 ಓವರ್‌ಗಳಿಗೆ ಸೀಮಿತಗೊಳಿಸಿ 147 ರನ್‌ಗಳ ಗೆಲುವಿನ ಗುರಿ ನೀಡಲಾಯಿತು. ಅಂತಿಮ ಓವರ್‌ನಲ್ಲಿ 15 ರನ್ ಗಳಿಸಬೇಕಿತ್ತು. ಆದರೆ ಜೆರಾಲ್ಡ್ ಕೋಟ್ಜಿ ಹಾಗೂ ರಾಹುಲ್ ತೆವಾಟಿಯಾ ಅವರ ಉತ್ತಮ ಬ್ಯಾಟಿಂಗ್‌ನಿಂದಾಗಿ ಗುಜರಾತ್ 19 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 147 ರನ್ ಗಳಿಸಿ ಜಯ ಗಳಿಸಿತು.

ಇದರೊಂದಿಗೆ ಗುಜರಾತ್ ಟೈಟಾನ್ಸ್ ಆಡಿರುವ 11 ಪಂದ್ಯಗಳ ಪೈಕಿ 8 ರಲ್ಲಿ ಗೆಲುವು, 3 ಸೋಲಿನೊಂದಿಗೆ 16 ಅಂಕ ಗಳಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದರೇ, ಮುಂಬೈ ಇಂಡಿಯನ್ಸ್ ಆಡಿರುವ 12 ಪಂದ್ಯಗಳ ಪೈಕಿ 7ರಲ್ಲಿ ಜಯ, 5 ಸೋಲಿನೊಂದಿಗೆ 14 ಅಂಕ ಗಳಿಸಿ ನಾಲ್ಕನೇ ಸ್ಥಾನದಲ್ಲಿದೆ.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 155 ರನ್ ಗಳಿಸಿತು. ತಂಡದ ಪರ ವಿಲ್ ಜಾಕ್ಸ್ 35 ಎಸೆತಗಳಲ್ಲಿ 3 ಸಿಕ್ಸರ್, 5 ಬೌಂಡರಿ ಒಳಗೊಂಡ 53 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ಸೂರ್ಯಕುಮಾರ್ ಯಾದವ್ 24 ಎಸೆತಗಳಲ್ಲಿ 5 ಬೌಂಡರಿ ಒಳಗೊಂಡ 35 ರನ್ ಗಳಿಸಿದರೇ, ಕಾರ್ಬಿನ್ ಬಾಷ್ 22 ಎಸೆತಗಳಲ್ಲಿ 2 ಸಿಕ್ಸರ್, 1 ಬೌಂಡರಿ ಒಳಗೊಂಡ 27 ರನ್ ಗಳಿಸಿದರು. ಆದರೆ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಗುಜರಾತ್ ಪರ ಸಾಯಿ ಕಿಶೋರ್ 2, ಮೊಹಮ್ಮದ್ ಸಿರಾಜ್, ಅರ್ಷದ್ ಖಾನ್, ಪ್ರಸಿದ್ಧ ಕೃಷ್ಣ, ರಶೀದ್ ಖಾನ್ ಹಾಗೂ ಜೆರಾಲ್ಡ್ ಕೋಟ್ಜಿ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ನಂತರ ಬ್ಯಾಟಿಂಗ್ ಮಾಡಿದ ಗುಜರಾತ್ ಪರ ಸಾಯಿ ಸುದರ್ಶನ್ 5, ನಾಯಕ ಶುಭ್‌ಮನ್ ಗಿಲ್ 43, ಜೋಸ್ ಬಟ್ಲರ್ 30, ಶೆರ್ಫೇನ್ ರುದರ್‌ಫೋರ್ಡ್ 28, ಶಾರುಕ್ ಖಾನ್ 6, ರಶೀದ್ ಖಾನ್ 2, ಜೆರಾಲ್ಡ್ ಕೋಟ್ಜಿ 12, ರಾಹುಲ್ ತೆವಾಟಿಯಾ 11 ರನ್ ಗಳಿಸಿದರು. ಮುಂಬೈ ಪರ ಬೂಮ್ರಾ, ಟ್ರೆಂಟ್ ಬೋಲ್ಟ್ ಹಾಗೂ ಅಶ್ವನಿ ಕುಮಾರ್ ತಲಾ 2, ದೀಪಕ್ ಚಹಾರ್ 1 ವಿಕೆಟ್ ಪಡೆದರು. ಗುಜರಾತ್ ಪರ ನಾಯಕ ಶುಭಮನ್ ಗಿಲ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	11	8	3	0	16
ಬೆಂಗಳೂರು	11	8	3	0	16
ಪಂಜಾಬ್	11	7	3	1	15
ಮುಂಬೈ	12	7	5	0	14
ಡೆಲ್ಲಿ	11	6	4	1	13
ಕೋಲ್ಕತ್ತಾ	11	5	5	1	11
ಲಕ್ನೋ	11	5	6	0	10
ಹೈದರಾಬಾದ್	11	3	7	1	7
ರಾಜಸ್ಥಾನ್	12	3	9	0	6
ಚೆನ್ನೈ	11	2	9	0	4

ಇಂದಿನ ಪಂದ್ಯ

ಕೊಲ್ಕತ್ತಾ ನೈಟ್ ರೈಡರ್ಸ್
V/S
ಚೆನ್ನೈ ಸೂಪರ್ ಕಿಂಗ್ಸ್

ಸಮಯ: ಸಂಜೆ 7.30

ಸ್ಥಳ : ಈಡೆನ್ ಗಾರ್ಡನ್ಸ್, ಕೊಲ್ಕತ್ತಾ

ಸಮೀಕ್ಷೆ ವೇಳೆ ಪರಿಶಿಷ್ಟ ಜಾತಿಯವರು ತಪ್ಪದೆ 'ಹೊಲೆಯ' ಎಂದು ನಮೂದಿಸಿ

ಮಾಜಿ ಮೇಯರ್ ಪುರುಷೋತ್ತಮ್ ಮನವಿ



ಮೈಸೂರು, ಮೇ 6(ಎಂಟಿವೈ)– ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್ ನೇತೃತ್ವದಲ್ಲಿ ನಡೆಯುತ್ತಿರುವ ಪರಿಶಿಷ್ಟ ಜಾತಿ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿಯ ಬಲಗೈ ಪಂಗಡಕ್ಕೆ ಸೇರಿದ ಎಲ್ಲರೂ ಕಡ್ಡಾಯವಾಗಿ 'ಹೊಲೆಯ' ಎಂದು ನಮೂದಿಸಬೇಕು ಎಂದು ಮಾಜಿ ಮೇಯರ್ ಪುರುಷೋತ್ತಮ್ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯಲ್ಲಿ ಹೊಲೆಯ, ಛಲವಾದಿ, ಬಲಗೈ ಸೇರಿದಂತೆ ಹೊಲೆಯ ಸಂಬಂಧಿತ ವಿವಿಧ ಹೆಸರಿನಿಂದ ಕರೆಯಲ್ಪಡುವ ಜನ ಸಮೀಕ್ಷೆಯಲ್ಲಿ ಕಡ್ಡಾಯವಾಗಿ ಹೊಲೆಯ ಎಂದು ಬರೆಸಬೇಕು. ಯಾವುದೇ ಕಾರಣಕ್ಕೂ ಬೇರೆ ಬೇರೆ ಪರ್ಯಾಯ ಹೆಸರನ್ನು ಬಳಸಬಾರದು. ಅನ್ಯಾಯಕ್ಕೆ ಒಳಗಾದ ಸಮುದಾಯಗಳಿಗೆ ಸಮಾನ ಅವಕಾಶ, ಒಳ ಮೀಸಲಾತಿ ದೊರಕಿಸಿ ಕೊಡುವ ಉದ್ದೇಶದಿಂದ ಜಾತಿ ಗಣತಿ ಮತ್ತು ಉಪ ಜಾತಿಗಣತಿ ನಡೆಸುತ್ತಿರುವುದರಿಂದ ಯಾವುದೇ ಹಿಂಜರಿಕೆ ಇಟ್ಟುಕೊಳ್ಳದೇ 'ಹೊಲೆಯ' ಎಂದು ಬರೆಸಬೇಕು ಎಂದು ಮನವಿ ಮಾಡಿದರು.

ಪಡಿತರ ಚೀಟಿಯಲ್ಲಿ ಚಿಕ್ಕ ವಯಸ್ಸಿನ ಮಕ್ಕಳು ಮತ್ತು ಮತದಾರರ ಗುರುತಿನ ಪಟ್ಟಿಯಲ್ಲಿ ಅಪ್ರಾಪ್ತರ ಹೆಸರು ನಮೂದಿಸಿರುವುದಿಲ್ಲ ಎಂಬ ಕಾರಣದಿಂದ ಅವರನ್ನು ಜಾತಿ ಗಣತಿಯಿಂದ ಕೈಬಿಡಬಾರದು. ವಿವಿಧ ಗುರುತಿನ ಚೀಟಿಯಲ್ಲಿ ನೊಂದಾಯಿಸಲಾಗಿರದ ವ್ಯಕ್ತಿಗಳ ಫೋಟೋ ಮತ್ತಿತರ ದಾಖಲಾತಿಗಳನ್ನು ಪರಿಶೀಲಿಸಿ ಅವರನ್ನೂ ಜಾತಿ ಗಣತಿಯಲ್ಲಿ ಸೇರಿಸಿಕೊಳ್ಳಬೇಕು ಎಂದು ತಿಳಿಸಿದರು.

ಕೆಲಸದ ಕಾರಣಕ್ಕಾಗಿ ತಮ್ಮ ವಾಸ ಸ್ಥಳವನ್ನು ಬಿಟ್ಟು ಬೇರೆ ನಗರ ಮತ್ತು ಪಟ್ಟಣಗಳಿಗೆ ವಲಸೆ ಹೋದವರ ಹೆಸರನ್ನು ಕೈಬಿಡದೆ ಜಾತಿಗಣತಿ ಪಟ್ಟಿಯಲ್ಲಿ ಸೇರಿಸಬೇಕು. ಜಾತಿ ಗಣತಿಯು ದಲಿತ ಸಮುದಾಯಗಳ ಆರ್ಥಿಕ, ಸಾಮಾಜಿಕ, ಔದ್ಯೋಗಿಕ ಮತ್ತು ರಾಜಕೀಯ ಭವಿಷ್ಯ ಅಡಗಿರುವುದರಿಂದ ಅಧಿಕಾರಿ ವರ್ಗ ಬೇಜವಾಬ್ದಾರಿ ತೋರದೆ ಸಮೀಕ್ಷೆಯನ್ನು ಅತ್ಯಂತ ವೈಜ್ಞಾನಿಕವಾಗಿ ಮತ್ತು ನಿಖರವಾಗಿ ನಡೆಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಎವಿಎಸ್‌ಎಸ್ ಅಧ್ಯಕ್ಷ ತುಂಬಲ ರಾಮಣ್ಣ, ಸಮುದಾಯದ ಮುಖಂಡರಾದ ಮಹೇಶ್, ರಮೇಶ್, ಮಂಜುನಾಥ್, ಪುಟ್ಟರಾಜು, ಪೈ. ಕೃಷ್ಣ ಮತ್ತಿತರರು ಇದ್ದರು.

ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಅಭಿನಂದನೆ



ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದಿರುವ ಮೈಸೂರಿನ ಅಶೋಕಪುರಂನ 30ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಶಾಸಕ ಟಿ.ಎಸ್.ಶ್ರೀವತ್ಸ, ಪಾಲಿಕೆ ಮಾಜಿ ಸದಸ್ಯ ಪಿ.ಟಿ.ಕೃಷ್ಣ ಅಭಿನಂದಿಸಿದರು.

ಮೈಸೂರು, ಮೇ 6(ಎಂಟಿವೈ)– ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದಿರುವ ಮೈಸೂರಿನ ಅಶೋಕಪುರಂನ 30ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಶಾಸಕ ಟಿ.ಎಸ್.ಶ್ರೀವತ್ಸ, ಪಾಲಿಕೆ ಮಾಜಿ ಸದಸ್ಯ ಪಿ.ಟಿ.ಕೃಷ್ಣ ಅಭಿನಂದಿಸಿದರು.

ಮೈಸೂರಿನ ಅಶೋಕಪುರಂನಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನವನದಲ್ಲಿರುವ ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಎಸ್‌ಎಸ್‌ಎಲ್‌ಸಿಯಲ್ಲಿ 625ಕ್ಕೆ 615 ಅಂಕ ಪಡೆದ ಬಿ.ಶ್ರೀರಾಜ್ ಸೇರಿದಂತೆ 30 ವಿದ್ಯಾರ್ಥಿಗಳನ್ನು ಸನ್ಮಾನಿಸಿ, 'ಸಂವಿಧಾನ ಓದು' ಪುಸ್ತಕವನ್ನು ಕೊಡುಗೆಯಾಗಿ ನೀಡಲಾಯಿತು.

ಈ ಸಂದರ್ಭದಲ್ಲಿ ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷ ವಿಶ್ವೇಶ್ವರಯ್ಯ(ವಿಶ್ವ), ಬಿಜೆಪಿ ಪಾಲಿಕೆ ಮಾಜಿ ಸದಸ್ಯರಾದ ಜಯರಾಮ್, ಶಾರದ ಈಶ್ವರ್, ಮುಖಂಡರಾದ ಈಶ್ವರ್, ನಾಗರಾಜ್, ಜೆ.ರವಿ, ಮಂಜುಗೌಡ, ಎನ್.ಪ್ರದೀಪ್‌ಕುಮಾರ್, ದೀಪುಕುಮಾರ್, ಪ್ರಜ್ವಲ್, ಹೇಮಂತ್ ಹಾಗೂ ಮುಖಂಡರು, ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಯುದ್ಧಕಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಹಿಟ್ (ಕ) + ಹಿಟ್ (ತೆ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ರೇಡ್ –2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರೆಟ್ರೋ (ತ)	4 ಪ್ರದರ್ಶನಗಳು
ಗಾಯಿತ್ರಿ	
ರೆಟ್ರೋ (ತ)	4 ಪ್ರದರ್ಶನಗಳು
ರಾಜಕಮಲ್	
ಟೂರಿಸ್ಟ್ ಫ್ಯಾಮಿಲಿ (ತ)	4 ಪ್ರದರ್ಶನಗಳು
ಸಂಗಂ	
ರೆಟ್ರೋ (ತ)	4 ಪ್ರದರ್ಶನಗಳು
ಲಿಡೋ	
ನಾನ್ ಪೋಲಿ (ಕ) + ರಿಕ್ಷಾ ಚಾಲಕ (ಕ)	3+1 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್ ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್ ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್ ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಭ್ರಷ್ಟ ಆರ್‌ಟಿಐ ಕಾರ್ಯಕರ್ತರಿಗೆ ಕಡಿವಾಣ ಹಾಕದಿದ್ದರೆ ಮುಡಾಗೆ ಮುತ್ತಿಗೆ

- ಮಾಜಿ ಸಚಿವ ಸಾ.ರಾ.ಮಹೇಶ್ ಎಚ್ಚರಿಕೆ
- ಕ್ರಮ ಕೈಗೊಳ್ಳಲು 15 ದಿನಗಳ ಗಡುವು
- ಮುಡಾ ಅಧಿಕಾರಿಗಳು ಶಾಸಕರ ಮಾತು ಕೇಳಲ್ಲ
- ಸಿದ್ದರಾಮಯ್ಯ ಹೆದರಿಸಿದ್ದೇವೆ ಎಂಬ ದರ್ಪ
- ಮುಡಾದ ಪ್ರತಿ ಕೋಣೆಗೂ ಸಿಸಿಟಿವಿ ಕ್ಯಾಮರಾ ಅಳವಡಿಸಬೇಕು



ಮೈಸೂರಿನ ರಮಾವಿಲಾಸ ರಸ್ತೆಯ ತಮ್ಮ ಕಚೇರಿಯಲ್ಲಿ ಮಂಗಳವಾರ ಮಾಜಿ ಸಚಿವ ಸಾ.ರಾ.ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಮೇ 6(ಬಿಎಲ್‌ಯು)– ಆರ್‌ಟಿಐ ಕಾಯ್ದೆಯನ್ನು ಮುಡಾದಲ್ಲಿ ದುರುಪಯೋಗ ಮಾಡಿಕೊಳ್ಳುತ್ತಿರುವ ಭ್ರಷ್ಟ ಆರ್‌ಟಿಐ ಕಾರ್ಯಕರ್ತರ ಹಾವಳಿಗೆ ಇನ್ನು 15 ದಿನದಲ್ಲಿ ಕಡಿವಾಣ ಹಾಕದಿದ್ದರೆ ಸಾವಿರಾರು ಜನರೊಂದಿಗೆ ಮುಡಾ ಕಚೇರಿಗೆ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಎಚ್ಚರಿಸಿದ್ದಾರೆ.

ನಗರದ ರಮಾವಿಲಾಸ ರಸ್ತೆಯ ತಮ್ಮ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ಮಾಹಿತಿ ಪಡೆಯಲು ಆರ್‌ಟಿಐ ಪ್ರಬಲ ಅಸ್ತ್ರವಾಗಿದೆ ಆದರೆ ಇದನ್ನು ಕೆಲವು ಆರ್‌ಟಿಐ ಕಾರ್ಯಕರ್ತರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ನಾನು ಮುಡಾ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಮಧ್ಯಾಹ್ನದ 3 ಗಂಟೆ ನಂತರ ಮುಡಾಗೆ ಸಾರ್ವಜನಿಕರಿಗೆ ಪ್ರವೇಶವಿತ್ತು. ಆರ್‌ಟಿಐ ಕಾರ್ಯಕರ್ತರಿಗಾಗಲೀ ಅಥವಾ ಬ್ರೋಕರ್‌ಗಳಿಗಾಗಲೀ ಬೇಕಾದಂತೆ ಓಡಾಡಲು ಅವಕಾಶ ಇರಲಿಲ್ಲ ಎಂದರು.

ಆದರೆ ಈಗ ಮುಡಾದಲ್ಲಿ ಆರ್‌ಟಿಐ ಕಾರ್ಯಕರ್ತರ ದರ್ಬಾರ್ ನಡೆದಿದೆ. ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಹೆದರಿಸಿ, ಬೆದರಿಸಿ ತಮಗೆ ಬೇಕಾದ ಕಡತಗಳ ಬಗ್ಗೆ ಮಾಹಿತಿ ಪಡೆಯುತ್ತಾರೆ. ಕಡತದಲ್ಲಿರುವ ದಾಖಲಾತಿಗಳ ಫೋಟೋ ಕೂಡ ತೆಗೆದುಕೊಳ್ಳುತ್ತಾರೆ ಎಂದು ಆಪಾದಿಸಿದರು.

ಒಬ್ಬ ಶಾಸಕ ಯಾವುದಾದರೊಂದು ಕೆಲಸ ಹೇಳಿದರೆ ಮುಡಾ ಅಧಿಕಾರಿಗಳು ಹಾಗೂ ಸಿಬ್ಬಂದಿ ಮಾಡುವುದಿಲ್ಲ. ಎಷ್ಟೆ ಒತ್ತಡ ಹಾಕಿದರೂ ಪರಿಗಣಿಸುವುದಿಲ್ಲ. ಆದರೆ, ಅದೇ ಆರ್‌ಟಿಐ ಕಾರ್ಯಕರ್ತರು ಹೇಳಿದರೆ ಕೂಡಲೇ ಅವರ ಕೆಲಸ ಮಾಡಿಕೊಡುತ್ತಾರೆ. ಇದರಿಂದ ಮುಡಾದಲ್ಲಿ ಆರ್‌ಟಿಐ ಕಾರ್ಯಕರ್ತರು ದರ್ಪ ತೋರುತ್ತಿದ್ದಾರೆ ಎಂದು ಸಾ.ರಾ.ಮಹೇಶ್ ಹೇಳಿದರು.

ಈ ಹಿನ್ನೆಲೆಯಲ್ಲಿ ಆರ್‌ಟಿಐ ಕಾರ್ಯಕರ್ತರ ಹಾವಳಿಗೆ ಕೂಡಲೇ ಕಡಿವಾಣ ಹಾಕಬೇಕು. ಮಧ್ಯಾಹ್ನದ ತನಕ ಯಾರಿಗೂ ಕಚೇರಿಗೆ ಪ್ರವೇಶ ನೀಡಬಾರದು. ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯನಿರ್ವಹಿಸುವ ಪ್ರತಿ ಕೋಣೆಯಲ್ಲೂ ಸಿಸಿಟಿವಿ ಕ್ಯಾಮರಾ ಅಳವಡಿಸಬೇಕು. ಈ ಮೂಲಕ ಆರ್‌ಟಿಐ ಕಾಯ್ದೆ ದುರುಪಯೋಗ ಮಾಡಿಕೊಳ್ಳುತ್ತಿರುವ ಆರ್‌ಟಿಐ ಕಾರ್ಯಕರ್ತರ ಬಗ್ಗೆ ನಿಗಾ ಇಟ್ಟು ಅವರ ಹಾವಳಿಗೆ ಕಡಿವಾಣ ಹಾಕಬೇಕು. ಇಲ್ಲದಿದ್ದರೆ ನಾವು ತೀವ್ರ ರೀತಿಯ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಆರ್‌ಟಿಐ ಕಾರ್ಯಕರ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನೆ ಹೆದರಿಸಿದ್ದೇವೆ ಎಂದು ಬೀಗುತ್ತಾರೆ. ಅವರು ಯಾರನ್ನೆ ಹೆದರಿಸಿರಬಹುದು. ಆದರೆ ನನ್ನ ಹೆದರಿಸಲು ಅವರಿಗೆ ಸಾಧ್ಯವಿಲ್ಲ. ದಟ್ಟಗಳ್ಳಿಯಲ್ಲಿರುವ ನನ್ನ ಕಲ್ಯಾಣ ಮಂಟಪ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದೇನೆ ಎಂದು ಆರೋಪಿಸಿದ್ದಾರೆ. ಈಗಾಗಲೇ ಅಳತೆ ಮಾಡಿದ್ದರೂ ಮತ್ತೆ ಅದೇ ಜಾಗವನ್ನು ಅಳತೆ ಮಾಡಿಸುತ್ತೇವೆ ಎಂದು ಹೇಳುತ್ತಾರೆ. ಅವರು ಏನು ಬೇಕಾದರೂ ಮಾಡಿಕೊಳ್ಳಲಿ, ಅದಕ್ಕೆ ನಾನು ಹೆದರುವುದಿಲ್ಲ ಎಂದು ಸವಾಲು ಹಾಕಿದರು.

ಪತ್ರಿಕಾಗೋಷ್ಠಿಯಲ್ಲಿ ಜೆಡಿಎಸ್ ರಾಜ್ಯ ವಕ್ತಾರ ರವಿಚಂದ್ರೇಗೌಡ, ಜೆಡಿಎಸ್ ನಗರಾಧ್ಯಕ್ಷ ಕೆ.ಟಿ. ಚೆಲುವೇಗೌಡ, ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಮಾಜಿ ಮೇಯರ್ ಲಿಂಗಪ್ಪ ಇತರರು ಉಪಸ್ಥಿತರಿದ್ದರು.

ಸೂಸೈಡ್ ಬಾಂಬರ್ ಆಗುವ ಮೊದಲು ಜಮೀರ್ ದೇಶ ವಿರೋಧಿಗಳನ್ನು ಶಿಕ್ಷಿಸಲಿ!

ಪಾಕಿಸ್ತಾನದ ವಿರುದ್ಧ ಸೂಸೈಡ್ ಬಾಂಬರ್ ಆಗಲು ಸಿದ್ಧ ಎಂದು ವಸತಿ ಸಚಿವ ಜಮೀರ್ ಅಹಮದ್ ಹೇಳಿದ್ದಾರೆ. ಮೊದಲು ಇಲ್ಲಿ ದೇಶಾಭಿಮಾನ ಮೆರೆದು, ದೇಶ ವಿರೋಧಿಗಳಿಗೆ ಶಿಕ್ಷೆ ಕೊಡಿಸಿದರೆ ನಾವು ಕೂಡ ಅವರ ಜೊತೆ ಹೋಗಲು ಸಿದ್ಧ ಎಂದು ಸಾ.ರಾ.ಮಹೇಶ್ ಸವಾಲು ಹಾಕಿದ್ದಾರೆ.

ಪ್ರಜಾಪ್ರಭುತ್ವದ ದೇಗುಲ ವಿಧಾನಸೌಧದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗಿರುವ ಪ್ರಕರಣ ಏನಾಯಿತು ಎಂದು ಪ್ರಶ್ನಿಸಿದ ಸಾ.ರಾ.ಮಹೇಶ್, ಮೊದಲು ಈ ಪ್ರಕರಣದಲ್ಲಿ ಯಾರಿಗೆ ಶಿಕ್ಷೆ ಕೊಡಿಸಿದ್ದೇವೆ ಎಂದು ಹೇಳಲಿ. ಆ ನಂತರ ಸೂಸೈಡ್ ಬಾಂಬರ್ ಆಗಲಿ ಎಂದು ಹೇಳಿದರು.

ಮುಸ್ಲಿಂರಿಗೂ ದೇಶಪ್ರೇಮವಿದೆ ಎಂದು ಜನತೆಗೆ ತಿಳಿಸಲು ಜಮೀರ್ ಅಹಮದ್ ಈ ಮಾತು ಹೇಳಿದ್ದಾರೆ. ಆದರೆ ಪಾಕಿಸ್ತಾನ್‌ಗೆ ಸೂಸೈಡ್ ಬಾಂಬರ್ ಆಗಿ ಹೋಗುವ ಮೊದಲು ಇಲ್ಲಿರುವ ದೇಶ ವಿರೋಧಿಗಳಿಗೆ ಶಿಕ್ಷೆ ಕೊಡಿಸಲಿ ಎಂದು ಸಾ.ರಾ.ಮಹೇಶ್ ಸಲಹೆ ನೀಡಿದರು.

ನಿವೃತ್ತ ಐಜಿ ಓಂಪ್ರಕಾಶ್ ಹತ್ಯೆ, ಆಸ್ತಿ ಮಾಡುವ ಪ್ರತಿಯೊಬ್ಬರಿಗೂ ಪಾಠ

ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಓಂಪ್ರಕಾಶ್ ಅವರ ಹತ್ಯೆ ಪ್ರತಿಯೊಬ್ಬರಿಗೂ ಪಾಠವಾಗಬೇಕು ಎಂದು ಸಾ.ರಾ.ಮಹೇಶ್ ಅಭಿಪ್ರಾಯಪಟ್ಟರು.

ಇಂದು ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ. ತಮ್ಮ ಕುಟುಂಬ ಸುಖವಾಗಿರಲಿ ಎಂಬ ದೃಷ್ಟಿಯಿಂದ ಪ್ರತಿಯೊಬ್ಬರು ಆಸ್ತಿ ಮಾಡುತ್ತಾರೆ. ಆದರೆ ಓಂಪ್ರಕಾಶ್ ಅವರನ್ನು ಅವರ ಪತ್ನಿಯೇ ಭೀಕರವಾಗಿ ಹತ್ಯೆ ಮಾಡಿದ್ದಾರೆ. ಇದರಿಂದ ಕುಟುಂಬಕ್ಕಾಗಿ ಆಸ್ತಿ ಮಾಡುವ ಪ್ರತಿಯೊಬ್ಬರಿಗೂ ಈ ಪ್ರಕರಣ ಪಾಠವಾಗಬೇಕು ಎಂದರು.

ಹಿಂದಿನ ಸರ್ಕಾರದಲ್ಲಿ ಶೇಕಡ 40 ರಷ್ಟು ಕಮಿಷನ್ ಇತ್ತು. ಆದರೆ ಈಗಿನ ಕಾಂಗ್ರೆಸ್ ಸರ್ಕಾರದಲ್ಲಿ 40 ಪರ್ಸೆಂಟ್‌ನ್ನು ಓವರ್‌ಟೇಕ್ ಮಾಡಲಾಗಿದೆ. ಕಮಿಷನ್ ಆಸೆಗಾಗಿ ಹಳೆ ಯೋಜನೆ ಕೈಬಿಟ್ಟು ಹೊಸ ಯೋಜನೆ ಕೈಗೆತ್ತಿಕೊಳ್ಳುತ್ತಿದ್ದಾರೆ. ಇದರಿಂದ ಈಗಾಗಲೇ ಕಾಮಗಾರಿ ನಡೆಸಿರುವ ಗುತ್ತಿಗೆದಾರರು ಸರ್ಕಾರದಿಂದ ಬಿಲ್ ಬರದೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಎದುರಿಸುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಕೆ.ಆರ್.ನಗರದಲ್ಲಿ ಎರಡೂವರೆ ವರ್ಷದ ಹಿಂದೆ ಆರಂಭಿಸಿದ ಬೆಟ್ಟಳ್ಳಿ ಮತ್ತು ಸಿಂಗನೂರು ರಸ್ತೆಕಾಮಗಾರಿ ಇನ್ನು ಮುಗಿದಿಲ್ಲ, ದೊಡ್ಡಹನಸೋಗೆ ಮತ್ತು ಚಿಕ್ಕಹನಸೋಗೆ ರಸ್ತೆ ಅಗಲೀಕರಣ ಕಾಮಗಾರಿ ಇನ್ನು ಪೂರ್ಣಗೊಂಡಿಲ್ಲ. ಗುತ್ತಿಗೆದಾರರಿಗೆ ಹಣ ನೀಡದ ಕಾರಣ ಈ ಎಲ್ಲಾ ಕಾಮಗಾರಿಗೆ ಗ್ರಹಣ ಹಿಡಿದಿದೆ ಎಂದು ಸಾ.ರಾ.ಮಹೇಶ್ ಆರೋಪಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ

ಇಂದು ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ವಿಚಾರಣೆ

ಮೈಸೂರು, ಮೇ 6 (ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದ ಸಂಬಂಧ ನಾಳೆ (ಮೇ 7) ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಲಿದೆ. ನ್ಯಾಯಾಲಯ ಆದೇಶಿಸಿದ್ದಂತೆ ಮೈಸೂರು ಲೋಕಾಯುಕ್ತ ಎಸ್ಪಿ ನಾಳೆ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಬಹುದೇ ಎಂಬ ಕುತೂಹಲವಿದೆ.

ಈ ಪ್ರಕರಣ ಸಂಬಂಧ ಮೈಸೂರು ಲೋಕಾಯುಕ್ತ ಎಸ್ಪಿಯೂ ಆಗಿರುವ ತನಿಖಾಧಿಕಾರಿ ಟಿ.ಜೆ.ಉದೇಶ್ ಅವರು ಮಧ್ಯಂತರ ವರದಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಕಳೆದ ಬಾರಿ ನಡೆದ ವಿಚಾರಣೆ ವೇಳೆ ಮೇ 7 ರಂದು ಅಂತಿಮ ವರದಿ ಸಲ್ಲಿಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಆದೇಶ ನೀಡಿದ್ದರು.

ನಾಳೆ ಅಂತಿಮ ವರದಿ ಸಲ್ಲಿಸಲಾಗುವುದೇ ಎಂದು ಉದೇಶ್ ಅವರಿಂದ ಮಾಹಿತಿ ಪಡೆಯಲು 'ಮೈಸೂರು ಮಿತ್ರ' ದೂರವಾಣಿ ಕರೆ ಮಾಡಿದಾಗ ಅವರು ಸಂಪರ್ಕಕ್ಕೆ ಸಿಗಲಿಲ್ಲ. ಲೋಕಾಯುಕ್ತ ಮೂಲಗಳ ಪ್ರಕಾರ ಅಂತಿಮ ವರದಿ ಸಲ್ಲಿಸಲು ಉದೇಶ್ ಅವರು ನ್ಯಾಯಾಲಯದಲ್ಲಿ ಮತ್ತೆ ಕಾಲಾವಕಾಶ ಕೇಳುವ ಸಾಧ್ಯತೆ ಇದೆ.




ಲೋಕಾಯುಕ್ತ ಪೊಲೀಸರು ನಾಳೆ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸುವ ಸಾಧ್ಯತೆ ಇಲ್ಲ. ಈ ಮೂಲಕ ಕಾಲ ವಿಳಂಬ ಮಾಡುವ ಸಂಭವವಿದೆ. ಈ ಹಿನ್ನೆಲೆಯಲ್ಲಿ ಕಾಲ ವಿಳಂಬಕ್ಕೆ ಅವಕಾಶ ನೀಡದೆ ನನ್ನಲ್ಲಿ ಲಭ್ಯವಿರುವ ದಾಖಲೆ ಆಧರಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪಾರ್ವತಿ, ಮಲ್ಲಿಕಾರ್ಜುನ ಸ್ವಾಮಿ ಮತ್ತು ದೇವರಾಜು ವಿರುದ್ಧ ಆರೋಪ ಸಾಬೀತು ಮಾಡಲು ಅವಕಾಶ ನೀಡುವಂತೆ ನ್ಯಾಯಾಲಯಕ್ಕೆ ಬುಧವಾರ ಮನವಿ ಸಲ್ಲಿಸಲು ನಿರ್ಧರಿಸಿದ್ದೇನೆ.

-ಸ್ನೇಹಮಯಿ ಕೃಷ್ಣ, ದೂರುದಾರ

ವಿದ್ಯಾರ್ಥಿನಿಗೆ ಸನ್ಮಾನ...



ತಾಂಡವಪುರ ಸರ್ಕಾರಿ ಪ್ರೌಢಶಾಲೆಯಲ್ಲಿ 618 ಅಂಕಗಳನ್ನು ಗಳಿಸಿ ರಾಜ್ಯಕ್ಕೆ 7ನೇ ಟಾಪರ್ ಆಗಿರುವ ನಜಾಮ್ ಅವರನ್ನು ಕಡಕೊಳ ಗ್ರಾಮಸ್ಥರು ಹಾಗೂ ಶ್ರೀ ಮಲೆ ಮಹದೇಶ್ವರ ಬೆಟ್ಟ ಪ್ರಾಧಿಕಾರದ ಕಾರ್ಯದರ್ಶಿ ರಘು ಸನ್ಮಾನಿಸಿದರು.



ಸುಲಭ ಕಂತುಗಳಲ್ಲಿ ಪಾವತಿಸಿ
60 ತಿಂಗಳವರೆಗೆ
ಉಚಿತ ವಿತರಣಾ
ಇನ್‌ಸ್ಟಾಲೇಷನ್

ಸೋಲಾರ್ ರೂಫ್‌ಟಾಪ್ ಅಳವಡಿಸಿ ಪಡೆಯಿರಿ 78,000 ರೂ. ಗಳ ಸರ್ಕಾರಿ ಸಬ್ಸಿಡಿ

TAURUS 98801 11571 | Prime Light 7411587744

ಸೈಟ್ ಸರ್ವೆ ಮತ್ತು ಅಂದಾಜು ತಿಳಿಯಲು ಸಂಪರ್ಕಿಸಿ: 9880111571

ಕಛೇರಿ: ನಂ.18/1, ಮೊದಲ ಮಹಡಿ, ಕಾಳಿದಾಸ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು
ಶಾಖೆಗಳು: ವಿರಾಜಪೇಟೆ, ಕುಶಾಲನಗರ, ಮಡಿಕೇರಿ

ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಯೊಂದಕ್ಕೆ
4 ವೀಲರ್ ಚಾಲಕರು ಬೇಕಾಗಿದ್ದಾರೆ
ವಯೋಮಿತಿ : 20 ರಿಂದ 30
ಕನಿಷ್ಠ ಎರಡು ವರ್ಷ ಅನುಭವವಿರುವವರಿಗೆ ಆದ್ಯತೆ
ಆಕರ್ಷಕ ವೇತನ ಸೌಲಭ್ಯವಿದೆ.
ಆಸಕ್ತರು ಈ ಕೂಡಲೇ ಕೆಳಕಂಡ ದೂರವಾಣಿಗೆ ಸಂಪರ್ಕಿಸಿ. 9606008447

NISARGA PARADISE
DEVELOPED PLOTS
FULLY DEVELOPED
READY FOR REGISTRATION
BOOKING OPENS
30x40 | 30x50 | 40x60
DTCP APPROVED LAYOUT
BANK LOAN AVAILABLE
LIC HFL | HDFC BANK | ICICI Bank



HURRY!! FEW LEFT
HYLAND PROPERTIES
Hunsur-Mysore Highway, Mysuru
90713 86615
95133 01854

केन्द्रीय रेशम उत्पादन अनुसंधान एवं प्रशिक्षण संस्थान
Central Sericultural Research & Training Institute
[केन्द्रीय रेशम बोर्ड - वस्त्र मंत्रालय - भारत सरकार] मानंदवाडी रोड, श्रीरामपुरा, मैसूर - 570 008
[Central Silk Board - Min. of Textiles – Govt. of India] Manandavadi Road, Srirampura Mysore – 570 008

No. CSB/RTI/JRF/SEEM/2025-26 Date: 06/05/2025

WALK-IN-INTERVIEW FOR THE POST OF PROJECT ASSISTANT

A Walk-in-Interview will be held on 21/05/2025 at Central Sericultural Research and Training Institute, Srirampura, Mysuru - 570 008 as shown below:

'A' 01 (One) Junior Research Fellow (JRF) purely on contract basis under CSB approved Project "Study to understand activity related health issues among the stakeholders involved in pre-cocoon sector of mulberry sericulture" (Project Code: MOE01048 SNC) for a period Up to March 2026 or completion of project whichever is earlier under CSB Terms and Conditions.

Qualifications for Junior Research Fellow (JRF):
1. Three/Four years full time M.Sc. in relevant subject (Agriculture/ Sericulture / Life Science), with minimum 60% of marks (55% for SC/ST candidates).

Desirable qualifications: Candidate with working knowledge in Sericulture aspects and experience in data collection from farmers, organizing of field Programmes.

Walk in- Interview will be held on 21/05/2025, time 10:30 AM (candidates should reach the venue by 9:30 AM for verification of documents, other recruitment procedures).

Interested can also visit our website www.csrtimys.res.in, https://csb.go.in/ for details.

Sd/- Director, CSR &TI, Mysuru

ಬಸ್ ಚಾಲಕರು ಬೇಕಾಗಿದ್ದಾರೆ

ನಂಜನಗೂಡು ಹಾಗೂ ಮೈಸೂರಿನ ವಿಜಯನಗರ, ಕುವೆಂಪುನಗರ, ಸಾತಗಳ್ಳಿ KSRTC ಸಿಟಿ ಡಿಪೋಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು ವಾಹನ ಚಾಲಕರು ತಕ್ಷಣ ಬೇಕಾಗಿದ್ದಾರೆ.
ವೇತನ: 22,000/–
(ಇಎಸ್‌ಐ, ಪಿ.ಎಫ್. ಸೌಲಭ್ಯವಿರುತ್ತದೆ)
ಹೆವಿ ಮೋಟಾರ್ ವಾಹನ ಚಾಲಕರಾಗಿ 2 ವರ್ಷಗಳ ಅನುಭವ ಹೊಂದಿರಬೇಕು.
8951888933
9739765353



ಹಸಿರು ನಮ್ಮ ಉಸಿರು


7ನೇ ವರ್ಷದ ಸವಿನೆನಪು



ಶ್ರೀ ಕ್ಯಾತಪ್ಪನ ನಿಂಗಪ್ಪನವರು
ನಿಧನ: 07–05–2018
ಕೆ.ಜಿ.ಕೊಪ್ಪಲು ಜಯನಗರ

ನಿಮ್ಮ ನೆನಪು ನಮ್ಮಲ್ಲಿ ಹಸಿರಾಗಿದೆ
ಪತ್ನಿ : ಶ್ರೀಮತಿ ಬೋರಮ್ಮ
ಮಗ: ಎನ್. ಕುಮಾರ
ಸೊಸೆ : ಶ್ರೀಮತಿ ರೂಪ
ಹೆಣ್ಣು ಮಕ್ಕಳು : ಮಹಾದೇವಿ, ಪುಟ್ಟಲಕ್ಷ್ಮಿ, ಲಕ್ಷ್ಮಿ, ಶಿವಮ್ಮ ಹಾಗೂ ಮೊಮ್ಮಕ್ಕಳು

ಭಾವಪೂರ್ಣ ಶ್ರದ್ಧಾಂಜಲಿ



ಜಯಮ್ಮ
(ಲೇ|| ಭೋಗಯ್ಯ ರವರ ಧರ್ಮಪತ್ನಿ)
ನಿಧನ: 06.05.2025
ದುಃಖತಪ್ತರು: ಕುಟುಂಬವರ್ಗದವರು

ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

SSLC ಫೇಲಾದವರಿಗೆ ವಿಶೇಷ ಪರೀಕ್ಷಾ ತರಬೇತಿ

ಸೋಲು ಶಾಶ್ವತವಲ್ಲ, ಸೋತವನೂ ಗೆಲ್ಲಬಲ್ಲ
with 100% ಯಶಸ್ಸು ಅಥವಾ ಹಣ ವಾಪಸ್ಸು
S.S.BHAT (We care so we dare) KORANI
by PRERANA ACADEMY
ಬ್ರಾಂಚ್ 1 : ಬೋಗಾದಿ, ಅಮೃತ ವಿದ್ಯಾಲಯ ಡಿಗ್ರಿ ಕಾಲೇಜು ಎದುರು
8088015075, 9845081342
ಬ್ರಾಂಚ್ 2 : # 3, ಸಿದ್ಧಾರ್ಥನಗರ, ಗೀತಾಶಾಲೆ ಹಿಂಭಾಗ
9019661234, 9243451234

WANTED

- Course Counsellors / Admin - 05
- Telecallers - 05

Prefer experienced females only
For a reputed training institution
Work timings - 930 to 630pm
Salary upto 15k - 20k, Mysore
7406113888

ಶ್ರೀ ವಿಷ್ಣೇಶ್ವರ ಸೇವಾ ಸಂಘ (ರಿ)

1ನೇ ಹಂತ ಮತ್ತು 2ನೇ ಹಂತ, ಗೋಕುಲಂ
ಮ್ಯಾನೇಜರ್ (ವ್ಯವಸ್ಥಾಪಕರು) ಬೇಕಾಗಿದ್ದಾರೆ.
9845123470
9448739001

AL-NOOR EDUCATION CENTRE
GHOUSIA NAGAR MYSORE-19
WE ARE HIRING
WANTED TEACHERS
QUALIFICATION:
Montessori Trained, D.Ed, B.Sc, B.Ed, PT Teacher.
Subject: All Subjects.
Walk In To The School Premises With A Copy Of The Resume.
On 12th May 2025
Office Timings: Mon-sat (10 AM-1 PM)
Principal: 90161 32211, School : 8884442199
Secretary: 94802 19911

ಸೈಟುಗಳು ಬೇಕಾಗಿವೆ

- ಪೊಲೀಸ್ ಲೇಔಟ್
- ಸಪ್ತಮಾತೃಕಾ ಲೇಔಟ್
- ಲಾಲ್ ಬಹದ್ದೂರ್ ಶಾಸ್ತ್ರಿ ನಗರ
- ಶಾಂತವೇರಿ ಗೋಪಾಲಗೌಡ ನಗರ
- ಲಲಿತಾದ್ರಿ ನಗರ
- ಟಿ.ನರಸೀಪುರ ರಸ್ತೆಗಳಲ್ಲಿ

9741624588 | 9686714571

ನೇರ II ಪಿಯುಸಿ!!

I ಪಿಯುಸಿ ಪಾಸಾಗಿಲ್ಲವೇ?/ I ಪಿಯುಸಿ ಓದಿಲ್ಲವೇ? ಚಿಂತೆ ಬಿಡಿ. ನಮ್ಮ ನೇರ II ಪಿಯುಸಿ ಕೋರ್ಸ್‌ಗೆ ಸೇರಿಕೊಳ್ಳಿ. ನಾವು ಉತ್ತಮ ಕೋಚಿಂಗ್ ಜೊತೆ ಮುದ್ರಿತ ನೋಟ್ಸ್ ನೀಡಿ II ಪಿಯುಸಿಗೆ ಉತ್ತಮವಾಗಿ ಅಣಿಗೊಳಿಸುತ್ತೇವೆ. 2004 ರಿಂದ ಉತ್ತಮ ಫಲಿತಾಂಶ.ಆಫ್ಲೈನ್ ಹಾಗೂ ಆನ್ಲೈನ್ ತರಗತಿಗಳು ಲಭ್ಯ. ಜ್ಞಾನ ವರ್ದಿನಿ ಸೆಂಟರ್.
9844355941, 9482674031
www.direct2puc.com

WANTED
Field Executive
ಫೀಲ್ಡ್ ಎಕ್ಸಿಕ್ಯೂಟಿವ್
ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗರು/ಹುಡುಗಿಯರು
8050804575

WANTED RESIDENTIAL LAYOUT
for marketing in Mysore
Having immediate buyers for sites
Agastya Shelters: 6360554622

ಸಾಧ್ಯಂ ಎಜುಕೇಶನಲ್ ಟ್ರಸ್ಟ್ (ರಿ)
ಸಾಧ್ಯಂ ಕೋಚಿಂಗ್ ಸೆಂಟರ್
ಸ್ಥಳ : ಸಾಧ್ಯಂ ಕೋಚಿಂಗ್ ಸೆಂಟರ್, ಎರಡನೇ ಮಹಡಿ, ದಟ್ಟಗಳ್ಳಿ, ಮೈಸೂರು – 570 053

ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕಡಿಮೆ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ
ಸುವರ್ಣಾವಕಾಶ
ಕ್ರಾಶ್ ಕೋರ್ಸ್ ನೀಡಲಾಗುವುದು.



ಹೆಚ್ಚಿನ ಮಾಹಿತಿಗಾಗಿ
86608 34981 / 93531 59464

2.5 BHK
HOME INTERIORS @ ₹ 2.5 Lakh*
Home Space Mart
*T&C Apply
91089 23123

DOCUMENT LOST

I Basavaraju.N.K, Residing at # B129, 3rd cross, peenya Industrial Estate, Banglore - 560058 have Lost original Sale Deed (Document No: 8942/06-07) near Peenya Bus stand on 05.05.2025
Finders May Please contact :
9845104799

Aquaguard & Kent
Water Purifier
Sales & Service
9901200444
#319, Near Mega Medical Store, Kuvempunagar

CHNAGE OF NAME

I Nagarathna W/o Bhaskaran K aged about 65 years Residing at # 106/1, Thandavapura village & Post, Chikkaianachatra Hobli, Nanjangud Talluk, Mysore District-571302 have changed my name as Channajamma on my own free will before Notary vide affidavit dated 06-05-2025 at Nanjangud.

Sd/- Channajamma



NOT GETTING YOUR
STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

Vidyavardhaka Sangha (Regd), Mysore
VIDYAVARDHAKA COLLEGE OF ENGINEERING
Autonomous Institute, Accredited by NBA, NAAC with "A" Grade
Gokulam 3rd Stage, Mysuru-570 002

STAFF REQUIRED
TEACHING

ENGG. Dept.
- **Professor, Associate Professor in CS&E, AI&ML** : PhD is Compulsory.
- **Assistant Professor in CS&E, AI&ML, E&CE** : First Class in BE & M.Tech Preference will be given to PhDs.

MCA Dept.
- **Professor, Associate Professor in MCA** : Ph.D is Compulsory
- **Assistant Professor in MCA** : First Class in BE / BSc / BCA & MCA with KSET/NET Qualified, Preference will be given to PhDs.

MBA Dept.
- **Assistant Professor** : First Class in any graduation & MBA, Specialization in Finance & HR, Preference will be given to PhDs.

Mathematics Dept.
- **Assistant Professor in Mathematics** : First Class in BSc. & M.Sc. with KSET / NET, preference will be given to PhDs.

Physical Education Director (Male & Female)
First Class in B.PEd & M.PEd. with KSET / NET and Preference will be given to PhDs.

Placement Officer for Engineering / MBA Dept.
BE / MTech / MBA with relevant experience.

NON TEACHING
- **Placement Executives** : BE / MBA with relevant experience.
- **Instructor / Asst. Instructor in CS&E / AI&ML and E&EE** : BE / Diploma in relevant branch and experience

Pay Scale For Teaching Staff – AICTE 7th pay scale for eligible Ph.D Holders as per the College Norms. Non Teaching : State scale

For further details and to apply visit https://vvce.ac.in/careers

---

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಹೆಚ್ಚುವರಿ ಆಯುಕ್ತರ ಶಾಖೆ, ಮೈಸೂರು.

ಸಂಖ್ಯೆ: ಮೈನಪಾ/ಹೆ.ಆ.ಕ/ಶೇ.24.10, ಶೇ.7.25%5%/ಪ್ರಕಟಣೆ/03/2025–26 ದಿನಾಂಕ: 05.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ಶೇ.24.10, ಶೆ.7.25ರ ಎಸ್.ಎಫ್.ಸಿ ಹಾಗೂ ಪಾಲಿಕೆ ಅನುದಾನದಡಿ ಟೆಂಡರ್‌ಗಳಿಗೆ ಕನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ವಿವರ	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ:
1.	ಶೆ.24.10 ಹಾಗೂ ಶೇ.7.25ರ ಅನುದಾನದಡಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಫಲಾನುಭವಿಗಳಿಗೆ ಕೌಸಲ್ಯಾಭಿವೃದ್ಧಿ ತರಬೇತಿ ನಡೆಸಲು ಟೆಂಡರ್ ಆಹ್ವಾನಿಸಿರುವ ಬಗ್ಗೆ	DMA/2024-25SE4709/ CALL-2	1	25.00	1,25,000	03.05.2025
2.		DMA/2024-25SE4712/ CALL-2	1	16.00	80,000	03.05.2025
3.		DMA/2024-25SE4711/ CALL-2	1	17.00	85,000	03.05.2025
4.		DMA/2024-25SE4710/ CALL-2	1	30.00	1,50,000	03.05.2025

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 12.05.2025, ಟೆಂಡರ್ ತೆರೆಯುವ ದಿನಾಂಕ: 13.05.2025

ಇ–ಪೋರ್ಟಲ್ ಮುಖಾಂತರ ದ್ವಿಲಕೋಟೆ ಡಾಕ್ಯುಮೆಂಟ್ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ **(https://kppp.karnataka.gov.in)** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಮೇಲ್ಕಂಡಂತೆ ನಿಗಧಿಪಡಿಸಿದ ಇ.ಎಂ.ಡಿ. ಟೆಂಡರ್ ಮಾನ್ಯ ಸಮ್ಮತ ಮಾನ್ಯತೆ ಅವಧಿಗಿಂತ (Validity period) 90 ದಿನಗಳ ನಂತರದ ಅವಧಿವರೆಗೆ ಮಾನ್ಯತೆ ಇರತಕ್ಕದ್ದು, ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ತಮ್ಮ ಗುತ್ತಿಗೆ ರಹದಾರಿ ಪ್ರತಿ, ತಮ್ಮ ಅಂಚೆ ವಿಳಾಸ, ಮೊಬೈಲ್ ದೂರವಾಣಿ ಸಂಖ್ಯೆಯನ್ನು ಈ ಪೋರ್ಟಲ್‌ನಲ್ಲಿ ಸಲ್ಲಿಸುವುದು. ಹೆಚ್ಚಿನ ವಿವರಗಳನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆ ಹೆಚ್ಚುವರಿ ಆಯುಕ್ತರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. **ವಿಶೇಷ ಸೂಚನೆ:–** ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಹೆಚ್ಚುವರಿ ಆಯುಕ್ತರು
ಮೈಸೂರು ಮಹಾನಗರ ಪಾಲಿಕೆ, ಮೈಸೂರು

DIPR/MYS/KAVITA/145/2025-26



YOU PUT THE FOUNDATION, WE MAKE IT STRONG!
Neminath Steels
TMT Bars | Tubes | Pipes | Sheets | Rolling Shutters | Structural Steel
Near Taluk Office, Nazarbad
+91 97420 06656

ರತ್ನ ಪ್ಯಾರ ಮೆಡಿಕಲ್ ಕಾಲೇಜು
ಕುವೆಂಪುನಗರ, ಮೈಸೂರು

ADMISSION OPEN
- Bachelor's in Medical Lab technology
- Bachelor's in cardiac care Technology, OT, Dialysis & X-Ray
- Diploma in Medical Lab Technology
- B.Com (Digital Marketing)
- Direct PUC (Science, Commerce & Arts)

SSLC/PUC Pass/Fail
9886654463

100% RESULT
KNC INNOVATIVE PU COLLEGE
#295/B, Hebbal Industrial Area, Infosys Road, Hebbal, Mysore-16




Dr. K N Chandrashekar, KAS (Retd.) Chairman

Admissions open for
I and II PUC 2025-26
SCIENCE: PCMB & PCMC
COMMERCE: EBACs & EBABm



II PUC RESULT 2024-25
CENTUM HOLDERS - 16 | DISTINCTION - 39 | FIRST CLASS - 158
The Management and Staff Congratulate All the Achievers

SCIENCE - PCMB TOPPERS | SCIENCE - PCMC TOPPERS



Meghana C Gowda 96.83% | Varsha R 95.50% | Tejas T 93.33% | Rhythmjot Kaur 96.83% | Sathya Y 95.33 | Megana Gowda K.S 95.17%

COMMERCE - EBAC TOPPERS



Vismaya V 96.17% | Shreya G 94.50% | Nikitha 94.33%

FACILITIES:
- Technology Enabled Class Rooms and Laboratories with Extra Marks E-content
- Experienced Teaching Faculties
- 24/7 CCTV Surveillance in Campus for Safety
- College Bus transportation with GPRS.
- Special Training on KCET, JEE(M), NEET, CS & CA

For Admission Contact: 0821-2402828, 98456 77388, 98443 37080

Mahajana Education Society®
ಆರ್‌ವಿಪಿಬಿ ಪದವಿ ಪೂರ್ವ ಕಾಲೇಜು
RVPB PU College
(Rattehalli Vasudevamurthy Pooja Bhagavat Pre-University College) Code : NN0390

INTEGRATED PUC Science CENTUM RESULTS 100/100 P-01 | C-03 M-12 | B-09



Janhavi Tumkur Gururaj
99.5% NEET KCET


Year 2024
95-100% = 18
90-95% = 21
85-90% = 20
1st Class = 18
Distinction 59/77

DISTRICT 1st RANK
STATE 2nd RANK

NEET 2024 Achievers 7 Students
KCET 2024 Below 1300 Rank: 11 students

KRS Road, Opp. J.K.Tyres, Metagalli, Mysuru - 570016
CONTACT : 910 80 09649 | 95359 22319
ADMISSION OPEN ದಾಖಲಾತಿ ಪ್ರಾರಂಭ

NEET Achievers 2024 - Rank



Janhavi Tumkur Gururaj 651 | Sai Shresta Ambati Ganga 609 | Pruthvi Mahadev 555 | Gagana A L 554 | K B Amith Setty 554 | K V Rachitha 522 | Bhavana M 512

Integrated Science PCMB | PCMC K-CET | NEET | Fn-JEE

CET Achievers 2024 - Rank



Aamil Finoj 353 | P Yaagh Aiyappa 396 | Yadhu Vamshi P 423 | Param S 556 | Riya Kukkuwada Sujay 638 | Ananth G Karanth 650 | G Shlok 678 | Sai Shresta Ambati Ganga 769 | Sathvik V 1021 | ADITH V K 1027 | Janhavi Tumkur Gururaj 1289

We give 50% Fee Discount for above 95% scored Students
95% ಅಂಕ ಪಡೆದ ವಿದ್ಯಾರ್ಥಿಗಳಿಗೆ ಕಾಲೇಜು ಶುಲ್ಕದಲ್ಲಿ 50% ರಿಯಾಯಿತಿ ನೀಡಲಾಗುವುದು.

OUTSTANDING RESULTS IN II PUC SCIENCE
2024: 59 Distinction | 18 First Class
2025: 49 Distinction | 37 First Class

Pathway to Academic Excellence | Flexible Fee Payment in Instalments

- Expert & Experienced Faculties
- Structured Study Materials
- Subject wise Focused Learning
- Regular Performance Evaluations
- Interactive Teaching Methodology
- Personalized Mentoring for Confidence Building

CAMPUS HOSTEL FOR BOYS & GIRLS